

ಕಾಂ. ಪ್ರಮಿಳಾ ಪಂಧೆ ಲಾಲ್‌ಸಲಾಂ

ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 46 | ನವೆಂಬರ್ 8–14, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ಹಾನಗಲ್‌ನಲ್ಲಿ ಬಿಜೆಪಿಗೆ ಅಘಾತ




ಪ.ಏಶ್ಯಾ ಕ್ವಾಡ್ ಸೋಲುವ ಆಟದಲ್ಲಿ ಭಾರತ



ಬಾಂಗ್ಲಾ ದೇಶದಲ್ಲಿ ಕೋಮು ಹಿಂಸಾಚಾರ ಏಕೆ?

'ನೂರು ಕೋಟಿ ಲಸಿಕೆ' ಸಂಭ್ರಮದ ಹಿಂದೆ-ಮುಂದೆ





ಕಾಡುವ ಸಿನಿಮಾಗಳು ಜೈಭೀಮ್ ಮತ್ತು ಸರ್ದಾರ್ ಉಧಮ್

ರೈತರ ಬಗ್ಗೆ ಮೋದಿ ಸರಕಾರದ ನಿರ್ಲಕ್ಷ್ಯದ ದುಷ್ಪರಿಣಾಮವಾಗಿ ರಸಗೊಬ್ಬರ ಕೊರತೆ-ಎಐಕೆಎಸ್

ರೈತರು ರಸಗೊಬರದ ತೀವ್ರ ಕೊರತೆಯಿಂದ ಪರದಾಡುತ್ತಿರುವಾಗ ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಮಂತ್ರಿ ಮನ್ಸುಖ್ ಮಾಂಡವಿಯ ಕೊರತೆಯ ಮಾತು ಕೇವಲ "ಊಹಾಪೋಹ" ಎಂದು ನಿರಾಕರಿಸಿದ್ದಾರೆ. ಇಷ್ಟೇ ಅಲ್ಲ, ಅವರು ರೈತರನ್ನೇ ದೂಷಿಸುತ್ತ ರಸಗೊಬ್ಬರ ಕಳ್ಳ ದಾಸ್ತಾನು ಮಾಡಬೇಡಿ ಎಂದಿದ್ದಾರೆ. ಇದು ರೈತರ ಬಗ್ಗೆ ತೀವ್ರ ನಿರ್ಲಕ್ಷ್ಯದ ನಿಲುವು ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಇದನ್ನು ಖಂಡಿಸಿದೆ. ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ ದೇಶದ ಕೃಷಿ ಮತ್ತು ಆಹಾರ ಭದ್ರತೆಗೆ ಕೊವಿಡ್-19 ಮಹಾಸೋಂಕು ಉಂಟು ಮಾಡಿರುವ ಅಡ್ಡಿ-ಆತಂಕಗಳು ಮತ್ತು ಹಾವಳಿಯನ್ನು ಸರಿಯಾಗಿ ಪರಿಗಣಿಸುತ್ತಿಲ್ಲ, ಮಹಾಸೋಂಕು ಮತ್ತು ಲಾಕ್‌ಡೌನ್ ಹೊರತಾಗಿಯೂ ಕೃಷಿ ರಂಗ ಬೆಳವಣಿಗೆ ಮಾಡುತ್ತಲೇ ಇದೆ ಎಂದು ರಾಗ ಹಾಡುತ್ತಿದೆ. ಈ "ಎಲ್ಲವೂ ಚೆನ್ನಾಗಿದೆ" ನಿಲುವನ್ನು ಮೂರು ದಶಕಗಳ ನವ-ಉದಾರವಾದಿ ಧೋರಣೆಗಳು ಹುಟ್ಟುಹಾಕಿರುವ ಛಿದ್ರಗಳ ಜತೆಗೆ ಅರ್ಥವ್ಯವಸ್ಥೆಯನ್ನು ನಾಶಗೊಳಿಸುತ್ತಿರುವ ತನ್ನ ಎರ್ರಾಬಿರ್ರಿ ಕ್ರಮಗಳು ಮತ್ತು ರೈತರ ಆರ್ಥಿಕ ಹತಾಶೆ ಮುಂದುವರೆಯುತ್ತಿರುವುದನ್ನು ಮುಚ್ಚಿ ಹಾಕಲು ಬಳಸಿಕೊಳ್ಳಲಾಗುತ್ತಿದೆ ಎಂದು ಎಐಕೆಎಸ್ ಹೇಳಿದೆ.

ಇಂತಹ ನಿಲುವಿನಿಂದಾಗಿಯೇ ಈ ಸರಕಾರ ರೈತರಿಗೆ ಸಾಕಷ್ಟು ಪ್ರಮಾಣದಲ್ಲಿ ರಸಗೊಬ್ಬರದ ಲಭ್ಯತೆಯನ್ನು ಖಾತ್ರಿಪಡಿಸಲು ಯಾವುದೇ ಪ್ರಯತ್ನಗಳನ್ನು ಮಾಡಿಲ್ಲ. ಕಳೆದ ಮೂರು ದಶಕಗಳಲ್ಲಿ ಸತತವಾಗಿ ಸಾರ್ವಜನಿಕ ವಲಯ ಮತ್ತು ದೇಶೀ ರಸಗೊಬ್ಬರ ಉತ್ಪಾದನಾ ಸಾಮರ್ಥ್ಯವನ್ನು ದುರ್ಬಲಗೊಳಿಸುತ್ತಾ ಬರಲಾಗಿದೆ. ದೇಶ ರಸಗೊಬ್ಬರಕ್ಕಾಗಿ ಆಮದನ್ನೇ ಹೆಚ್ಚುಹೆಚ್ಚಾಗಿ ಅವಲಂಬಿಸುವಂತಾಗಿದೆ. 2020ರಲ್ಲಿ ಒಟ್ಟು ಪೂರೈಕೆಯಲ್ಲಿ 25% ಯೂರಿಯ, 68% ಡಿಎಪಿ ಮತ್ತು 100% ಪೊಟಾಶನ್ನು ಆಮದು ಮಾಡಿಕೊಳ್ಳಲಾಗಿದೆ. ಭಾರತದಲ್ಲಿ ತಯಾರಿಸುವ ರಸಗೊಬ್ಬರಕ್ಕೂ ಫೋಸ್ಫಾಟಿಕ್ ರಾಕ್, ಫೋಸ್ಫಾಟಿಕ್ ಆಸಿಡ್ ಮತ್ತು ನೈಸರ್ಗಿಕ ಅನಿಲದಂತಹ ಪ್ರಮುಖ ಕಚ್ಚಾವಸ್ತುಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ವಿಭಿನ್ನ ಸರಕಾರಗಳು ಸಾರ್ವಜನಿಕ ವಲಯದ ರಸಗೊಬ್ಬರ ಸ್ಥಾವರಗಳನ್ನು ವ್ಯವಸ್ಥಿತವಾಗಿ ಕಳಚಿ ಹಾಕಿವೆ. ಮತ್ತು ಯೂರಿಯ ತಯಾರಿಕಾ ಘಟಕಗಳನ್ನು ಹೆಚ್ಚಿಸುವುದರ ಬಗ್ಗೆ ಗಮನ ಕೊಡಲಿಲ್ಲ. ಆಗ ವಿಪರೀತ ಅಂತರ್ರಾಷ್ಟ್ರೀಯ ಬೆಲೆಗಳ ಪರಿಣಾಮವನ್ನು ಸ್ವಲ್ಪಮಟ್ಟಿಗಾದರೂ ಸರಿಹೊಂದಿಸಲು ಸಾಧ್ಯವಾಗುತ್ತಿತ್ತು ಎಂದು ಎಐಕೆಎಸ್ ಹೇಳಿದೆ.

ಭಾರತದ ಆಹಾರ ಭದ್ರತೆಗೆ ರಸಗೊಬ್ಬರದ ಪೂರೈಕೆ ಬಹಳ ಮಹತ್ವದ್ದು. ಆದ್ದರಿಂದ ಇದರ ಪೂರೈಕೆಯ ಸರಣಿಯಲ್ಲಿ ಅಡ್ಡಿಯುಂಟಾಗದಂತೆ ನೋಡಿಕೊಳ್ಳಲು ಕೊವಿಡ್-19 ಅಥವ ಅಂತರ್ರಾಷ್ಟ್ರೀಯ ಬೆಲೆಯೇರಿಕೆಯ ದುಷ್ಪರಿಣಾಮಗಳು ಉಂಟಾಗುವುದನ್ನು ತಪ್ಪಿಸುವ ಕ್ರಮಗಳನ್ನು ಕೈಗೊಳ್ಳಬೇಕಾಗಿತ್ತು. ಆದರೆ, 2021ರಲ್ಲಿ ರಸಗೊಬ್ಬರಗಳ ಬೆಲೆಗಳು ಏರಲಾರಂಭಿಸಿದಾಗ, ಕಚ್ಚಾ ವಸ್ತುಗಳು ಮತ್ತು ರಸಗೊಬ್ಬರದ ದಾಸ್ತಾನುಗಳನ್ನು ನಿರ್ಮಿಸಲು ಕ್ರಮಗಳನ್ನು ಕೈಗೊಳ್ಳುವ ಬದಲು, ಭಾರತ ಸರಕಾರ ಹೆಚ್ಚಿದ ಉತ್ಪಾದನಾ ಖರ್ಚನ್ನು ತುಂಬಿಕೊಳ್ಳಲು ಹೆಚ್ಚುವರಿ ಸಬ್ಸಿಡಿಗಳನ್ನು ಒದಗಿಸಿತು. ಎನ್‌ಬಿಎಸ್ ಸ್ಕೀಮಿನ ಅಡಿಯಲ್ಲಿ ಹೆಚ್ಚಿನ ರಸಗೊಬ್ಬರಗಳ ಬೆಲೆಗಳನ್ನು ನಿಯಂತ್ರಣಹೀನಗೊಳಿಸಿರುವುದರಿಂದಾಗಿ ಸರಕಾರ ಒದಗಿಸಿದ ಸಬ್ಸಿಡಿಗಳೆಲ್ಲವೂ ರಸಗೊಬ್ಬರಗಳ ಬೆಲೆಗಳಲ್ಲಿ ಇಳಿಕೆಗಳಾಗಿ ಬಿಡುವುದಿಲ್ಲ. ವಿಧಾನಸಭಾ ಚುನಾವಣೆಗಳು ಮುಗಿಯುವ ವರೆಗೆ ರಸಗೊಬ್ಬರದ ಬೆಲೆಗಳನ್ನು ಉತ್ಪಾದಕಾ ಕಂಪನಿಗಳು ಏರಿಸದಂತೆ ಸರಕಾರ ಒತ್ತಡ ಹಾಕಿತಷ್ಟೇ. ಹೀಗೆ ಹೆಚ್ಚುವರಿ ಎನ್‌ಬಿಎಸ್ ಸಬ್ಸಿಡಿಗಳು ರಸಗೊಬ್ಬರ ಕಂಪನಿಗಳ ಜೇಬುಗಳಿಗೆ ಹೋದವು, ಅದರಿಂದ ರೈತರಿಗೇನೂ ಪ್ರಯೋಜನವಾಗಲಿಲ್ಲ ಎಂದು ಎಐಕೆಎಸ್ ಹೇಳಿದೆ.

ನಿರ್ದಿಷ್ಟವಾಗಿ, ಹಿಂಗಾರು ಬಿತ್ತನೆಯ ಮೊದಲು ರಸಗೊಬ್ಬರದ ಲಭ್ಯತೆ ಸಾಕಷ್ಟು ಇರುವಂತೆ ದಾಸ್ತಾನು ಮಾಡಲು ಭಾರತ ಸರಕಾರ ಏನನ್ನೂ ಮಾಡಲಿಲ್ಲ. ಈ ವರ್ಷದ ಮಾರ್ಚ್ ಮತ್ತು ಸಪ್ಟಂಬರ್ ನಡುವೆ ಡಿಎಪಿಯ ಪೂರೈಕೆ(ಉತ್ಪಾದನೆ ಮತ್ತು ಆಮದು) ಕಳೆದ ವರ್ಷ ಇದೇ ಅವಧಿಯಲ್ಲಿ ಇದ್ದುದಕ್ಕಿಂತ 31%ದಷ್ಟು ಕಡಿಮೆ ಇತ್ತು. ಅದೇ ರೀತಿ ಪೊಟಾಶ್‌ನ ಪೂರೈಕೆಯಲ್ಲಿ 68%ದಷ್ಟು ಇಳಿಕೆ ಇತ್ತು.

ಅಕ್ಟೋಬರ್ 31, 2020ರ ವೇಳೆಗೆ ಡಿಎಪಿ ದಾಸ್ತಾನು 14.63 ಲಕ್ಷ ಟನ್. 2020 ಮತ್ತು 2019ರಲ್ಲಿ ಇದು ಅನುಕ್ರಮವಾಗಿ 44.95 ಲಕ್ಷ ಟನ್ ಮತ್ತು 64 ಲಕ್ಷ ಟನ್. ಎಂಒಪಿ ದಾಸ್ತಾನು 2020 ಮತ್ತು 2019ರಲ್ಲಿ ಅನುಕ್ರಮವಾಗಿ 21.7 ಲಕ್ಷ ಟನ್ ಮತ್ತು 21.52 ಲಕ್ಷ ಟನ್ ಇದ್ದರೆ ಈ ವರ್ಷ ಅದು 7.82ಲಕ್ಷ ಟನ್‌ಗೆ ಇಳಿದಿದೆ. ಇದರೊಂದಿಗೇ ಬೆಲೆಗಳೂ ಏರಿದವು, ಏಕೆಂದರೆ ಸರಕಾರ ಸಬ್ಸಿಡಿ ಹೆಚ್ಚಳವನ್ನಾಗಲೀ, ಬೆಲೆ ನಿಯಂತ್ರಣದ ಧೋರಣೆಯನ್ನಾಗಲೀ ಪ್ರಕಟಿಸಲಿಲ್ಲ ಎಂದಿರುವ ಎಐಕೆಎಸ್ ಖಾಸಗೀಕರಣಗೊಂಡ ಮತ್ತು ಅನಿಯಂತ್ರಿತಗೊಂಡ ವ್ಯವಸ್ಥೆಯಲ್ಲಿ ದೊಡ್ಡ ಪ್ರಮಾಣದಲ್ಲಿ ರಸಗೊಬ್ಬರಗಳ ವ್ಯಾಪಕ ಕಳ್ಳದಾಸ್ತಾನು ಮತ್ತು ಕಾಳಸಂತೆ ನಡೆಯುತ್ತಿದೆ. ಇನ್ನೊಂದೆಡೆಯಲ್ಲಿ ರೈತರು ದಿನಗಟ್ಟಲೆ ಸರತಿಯ ಸಾಲುಗಳಲ್ಲಿ ನಿಂತರೂ ರಸಗೊಬ್ಬರಗಳು ಸಿಗದಂತಾಯಿತು. ಉತ್ತರಪ್ರದೇಶದ ಬುಂದೇಲಖಂಡ ಪ್ರದೇಶದಲ್ಲಿ ಎರಡು-ಮೂರು ದಿನ ಸರತಿಯ ಸಾಲಿನಲ್ಲಿ ನಿಂತು ಸುಸ್ತಾಗಿದ್ದ 5 ರೈತರು ಪ್ರಾಣ ಕಳಕೊಂಡರು ಎಂದು ವರದಿಯಾಗಿದೆ. ಮಧ್ಯಪ್ರದೇಶದಲ್ಲಿ ಒಬ್ಬ ರೈತರು ಮತ್ತು ಉತ್ತರಪ್ರದೇಶದಲ್ಲಿ ಇನ್ನೊಬ್ಬರು ಸಾಲ ತಗೊಂಡಿದ್ದವರು ರಸಗೊಬ್ಬರ ಸಿಗದ್ದರಿಂದ ಆತ್ಮಹತ್ಯೆ ಮಾಡಿಕೊಂಡರು ಎಂದೂ ವರದಿಯಾಗಿದೆ.

ಆದ್ದರಿಂದ ತಕ್ಷಣವೇ ಸರಿಪಡಿಕೆ ಕ್ರಮಗಳನ್ನು ಕೈಗೊಳ್ಳದಿದ್ದರೆ ರೈತಾಪಿ ಜನಗಳು ಮತ್ತು ಒಟ್ಟಾರೆಯಾಗಿ ಕೃಷಿ ಗಂಭೀರ ದುಷ್ಪರಿಣಾಮಗಳನ್ನು ಎದುರಿಸಬೇಕಾಗಿ ಬರುತ್ತದೆ ಎಂದಿರುವ ಅಖಿಲ ಭಾರತ ಕಿಸಾನ್ ಸಭಾ ತಕ್ಷಣವೇ ಕೇಂದ್ರ ಸರಕಾರ ಹೆಚ್ಚುವರಿ ರಸಗೊಬ್ಬರ ಪೂರೈಕೆಗಳನ್ನು ಪಡೆಯಲು ಮೂಲಗಳನ್ನು ಗುರುತಿಸಲು ಒಂದು ಉನ್ನತ ಪಮಟ್ಟದ ಕಾರ್ಯಪಡೆಯನ್ನು ರಚಿಸಬೇಕು, ಎನ್‌ಬಿಎಸ್ ಸ್ಕೀಮಿನ ಅಡಿಯಲ್ಲಿ ಎಲ್ಲ ರಸಗೊಬ್ಬರಗಳಿಗೆ ಬೆಲೆ ಹತೋಟಿಗಳನ್ನು ತರಬೇಕು ಹಾಗೂ ರಸಗೊಬ್ಬರಗಳ ರಾಷ್ಟ್ರೀಯ ಉತ್ಪಾದನೆಯನ್ನು ಹೆಚ್ಚಿಸಲು ಒಂದು ಮಾರ್ಗನಕಾಶೆಯನ್ನು ಮತ್ತು ರಸಗೊಬ್ಬರಗಳ ದಾಸ್ತಾನನ್ನು ಸಾಕಷ್ಟು ಪ್ರಮಾಣದಲ್ಲಿ ಖಾತ್ರಿಪಡಿಸುವ ಒಂದು ವ್ಯವಸ್ಥೆಯನ್ನು ಸಿದ್ಧಪಡಿಸಲು ಪರಿಣಿತರ ಒಂದು ಉನ್ನತ ಮಟ್ಟದ ಸಮಿತಿಯನ್ನು ಸ್ಥಾಪಿಸಬೇಕು ಎಂದು ಆಗ್ರಹಿಸಿದೆ.

ಜಮ್ಮು-ಕಾಶ್ಮೀರದಲ್ಲಿ ಎಸ್.ಐ.ಎ. ರಚನೆ ದಮನಯಂತ್ರವನ್ನು ಗಟ್ಟಿಗೊಳಿಸುತ್ತದಷ್ಟೇ- ತರಿಗಾಮಿ

ಜಮ್ಮು ಮತ್ತು ಕಾಶ್ಮೀರ ಆಡಳಿತ ಒಂದು ರಾಜ್ಯ ತನಿಖಾ ಏಜೆನ್ಸಿ(ಎಸ್.ಐ.ಎ.)ಯನ್ನು ರಚಿಸಲು ನಿರ್ಧರಿಸಿದೆ. ಯಾವುದೇ ದೃಷ್ಟಿಯಿಂದ ನೋಡಿದರೂ ಈ ನಿರ್ಧಾರ ಜಮ್ಮು ಮತ್ತು ಕಾಶ್ಮೀರದಲ್ಲಿ ದಮನಯಂತ್ರವನ್ನು ಇನ್ನಷ್ಟು ಗಟ್ಟಿಗೊಳಿಸಲಿಕ್ಕಾಗಿಯೇ ಎಂದು 'ಗುಪ್ಕರ್ ಘೋಷಣೆಯ ಜನತಾ ಮೈತ್ರಿಕೂಟ' (ಪಿ.ಎ.ಜಿ.ಡಿ.)ದ ವಕ್ತಾರ ಹಾಗೂ ಸಿಪಿಐ(ಎಂ)ನ ಹಿರಿಯ ಮುಖಂಡ ಮಹಮ್ಮದ್ ಯುಸುಫ್ ತರಿಗಾಮಿ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.

ಲಂಗುಲಗಾಮಿಲ್ಲದ ಅಧಿಕಾರ ಪಡೆದಿರುವ ಇನ್ನೊಂದು ಏಜೆನ್ಸಿ ರಚನೆ ನಾಗರಿಕರ ಪ್ರಜಾಪ್ರಭುತ್ವ ಮತ್ತು ನಾಗರಿಕ ಸ್ವಾತಂತ್ರ್ಯದ ಹಕ್ಕುಗಳ ಮೇಲೆ ಇನ್ನೊಂದು ಪ್ರಹಾರ. ಭಯೋತ್ಪಾದನೆಯ ವಿರುದ್ಧ ಹೋರಾಡುವ ಹೆಸರಿನಲ್ಲಿ ಈ ಏಜೆನ್ಸಿಗಳನ್ನು ಮತ್ತು ಕಾನೂನುಗಳನ್ನು ಸರಕಾರದಿಂದ ಭಿನ್ನವಾದ ಕಣ್ಣೋಟವನ್ನು ಹೊಂದಿರುವವರ ವಿರುದ್ಧ ಆಯುಧಗಳನ್ನಾಗಿ ಮಾಡಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ಎನ್‌ಐಎ ಮತ್ತು ಯುಎಪಿಎಯಂತಹ ಕರಾಳ ಕ್ರಮಗಳು ಈಗಾಗಲೇ ಜನಗಳ ನಡುವೆ ದೊಡ್ಡ ಹಾವಳಿಯನ್ನೇ ನಡೆಸಿರುವಾಗ ಇನ್ನೊಂದು ಇಂತಹ ಏಜೆನ್ಸಿಯ ಅಗತ್ಯವಾದರೂ ಏನಿತ್ತು? ಜಮ್ಮು ಮತ್ತು ಕಾಶ್ಮೀರ ಒಂದು ರಾಜಕೀಯ ಪ್ರಶ್ನೆ, ಅದಕ್ಕೆ ಒಂದು ರಾಜಕೀಯ ಕ್ರಮವೇ ಬೇಕಾಗುತ್ತದೆ. ಈಗ ಆಗಬೇಕಾಗಿರುವುದು ಪರಿಹಾರ ಒದಗಿಸುವುದು, ಇಂತಹ ಕಠಿಣ ಕ್ರಮಗಳನ್ನು ಸೇರಿಸುವುದಲ್ಲ, ಇವು ಅವರ ಪರಕೀಯಭಾವವನ್ನು ಇನ್ನಷ್ಟು ಆಳಗೊಳಿಸುವುದು ಖಂಡಿತ ಎಂದು ತರಿಗಾಮಿ ಹೇಳಿದ್ದಾರೆ.

ಪಿ.ಎ.ಜಿ.ಡಿ. ಈ ಹಿಂದೆ ಇಂತಹ ಎಲ್ಲ ಕಾನೂನುಗಳನ್ನು ವಿರೋಧಿಸಿದೆ, ಮುಂದೆಯೂ ಹಾಗೆಯೇ ಮಾಡುತ್ತದೆ. ದೇಶದಲ್ಲಿನ ಪ್ರತಿಷ್ಠಿತ ನ್ಯಾಯವಿದರೂ ಕೂಡ ಸರಕಾರಗಳು ಭಯೋತ್ಪಾದನೆಯ ವಿರುದ್ಧ ಹೋರಾಡುವ ಹೆಸರಲ್ಲಿ ಕರಾಳ ಕಾಯ್ದೆಗಳನ್ನು ರಚಿಸುವುದರ ಬಗ್ಗೆ ಕ್ರೋಧ ವ್ಯಕ್ತಪಡಿಸಿದ್ದಾರೆ. ಈ ಕಾಯ್ದೆಗಳನ್ನು ವಿರೋಧಿಗಳ ವಿರುದ್ಧ ಅಸ್ತ್ರಗಳಾಗಿ ಬಳಸಬಹುದು. ಪ್ರಜಾಪ್ರಭುತ್ವದ ರಕ್ಷಣೆಯ ಹೋರಾಟ ಈ ಕರಾಳ ಕಾಯ್ದೆಗಳನ್ನು ತೊಡೆದು ಹಾಕುವುದನ್ನೂ ಒಳಗೊಂಡಿರಬೇಕು ಎಂದು ತರಿಗಾಮಿ ಹೇಳಿದ್ದಾರೆ.

ನವಂಬರ್11 ರಂದು ಕಾರ್ಮಿಕರ ರಾಷ್ಟ್ರೀಯ ಸಮಾವೇಶ ನವಂಬರ್ 26 -ರಾಷ್ಟ್ರವ್ಯಾಪಿ ಪ್ರತಿಭಟನಾ ದಿನಾಚರಣೆ

ಬಜೆಟ್ ಅಧಿವೇಶನದ ವೇಳೆಯಲ್ಲಿ ಎರಡು ದಿನಗಳ ಸಾರ್ವತ್ರಿಕ ಮುಷ್ಕರ

ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆ ರಾಷ್ಟ್ರೀಯ ಸೊತ್ತುಗಳ ಖಾಸಗೀಕರಣದ ಕೇಂದ್ರ ಸರಕಾರದ ಧಾವಂತದ ವಿರುದ್ಧ ಹೋರಾಟವನ್ನು ತೀವ್ರಗೊಳಿಸಬೇಕಾಗಿದ್ದು, ಈ ಕುರಿತು ನವಂಬರ್ 11 ರಂದು ರಾಷ್ಟ್ರೀಯ ಸಮಾವೇಶವನ್ನು ನಡೆಸಲು ನಿರ್ಧರಿಸಿದೆ. ಇದರಲ್ಲಿ ಬಜೆಟ್ ಅಧಿವೇಶನದ ವೇಳೆಯಲ್ಲಿ ಎರಡು ದಿನಗಳ ಸಾರ್ವತ್ರಿಕ ಮುಷ್ಕರವನ್ನು ನಡೆಸುವ ಬಗ್ಗೆ ಮತ್ತು ಇತರ ಕಾರ್ಯಾಚರಣೆಗಳ ಬಗ್ಗೆ ಚರ್ಚಿಸಲಾಗುವುದು ಎಂದು ಅವು ಹೇಳಿವೆ.

ನವಂಬರ್ 1 ರಂದು ದಿಲ್ಲಿಯಲ್ಲಿ ನಡೆದ ಈ ಸಭೆಯಲ್ಲಿ ಕಾರ್ಮಿಕ ಮುಖಂಡರು ಎಲ್ಲ ರಾಷ್ಟ್ರೀಯ ಸೊತ್ತುಗಳನ್ನು ಖಾಸಗೀಕರಿಸಿ ಅವನ್ನು ಕಾರ್ಪೋರೇಟ್ ವಲಯಕ್ಕೆ ವಹಿಸಿಕೊಡುವ ಕೇಂದ್ರ ಸರಕಾರದ ಧಾವಂತದಿಂದ ಉಂಟಾಗಿರುವ ಸನ್ನಿವೇಶವನ್ನು ಪರಿಶೀಲಿಸಿದರು. ಸರಕಾರದ ಈ ಧಾವಂತದಿಂದ ದೇಶದ ಮೂಲರಚನೆಗಳು ಮತ್ತು ಅರ್ಥವ್ಯವಸ್ಥೆಯ ಮೇಲೆ ನಕಾರಾತ್ಮಕ ಪರಿಣಾಮಗಳು ಮಾತ್ರವಲ್ಲ, ಇವು ಜನಗಳ ಮೇಲೆ ತಕ್ಷಣವೇ ದುಷ್ಪರಿಣಾಮ ಬೀರಲಿವೆ. ಇವು ತೀವ್ರ ಬೆಲೆಯೇರಿಕೆಗೆ ಮತ್ತು ಜನಗಳ ಮೇಲೆ ಇನ್ನಷ್ಟು ಬಳಕೆದಾರ ಶುಲ್ಕಗಳ ಹೇರಿಕೆಗೆ ದಾರಿ ಮಾಡಿ ಕೊಡುತ್ತದೆ ಎಂಬ ಅಭಿಪ್ರಾಯಕ್ಕೆ ಬಂದ ಸಭೆ ಈ ಹಿನ್ನೆಲೆಯಲ್ಲಿ ಸರಕಾರದ ಜನ-ವಿರೋಧಿ ನಿಲುವನ್ನು ಚರ್ಚಿಸಿತು ಎನ್ನಲಾಗಿದೆ. ಕೇಂದ್ರ ಸರಕಾರ ಕಾರ್ಮಿಕ ಸಂಘಟನೆಗಳು ಮತ್ತು ರೈತ ಸಂಘಟನೆಗಳು ಎತ್ತುವ ಯಾವುದೇ ಬೇಡಿಕೆಯನ್ನು ಪರಿಶೀಲಿಸಲು ಕೂಡ ನಿರಾಕರಿಸುತ್ತಿದೆ, ಈ ಮೂಲಕ ಎಲ್ಲ ಪ್ರಜಾಪ್ರಭುತ್ವ ಆಚರಣೆಗಳನ್ನು ಬುಡಮೇಲು ಮಾಡುತ್ತಿದೆ ಎಂದು ಸಭೆ ಕಟುವಾಗಿ ಟೀಕಿಸಿತು.

ಈ ಧೋರಣೆಯ ಅಪಾಯಕಾರಿ ಪರಿಣಾಮಗಳ ಬಗ್ಗೆ ಜನಗಳಲ್ಲಿ ಜಾಗೃತಿ ಮೂಡಿಸಲು ಜನಗಳ ಬಳಿಗೆ ವ್ಯವಸ್ಥಿತ ರೀತಿಯಲ್ಲಿ ಹೋಗುವುದನ್ನು ಒಂದು ರಾಷ್ಟ್ರೀಯ ಸಮಾವೇಶದೊಂದಿಗೆ ಆರಂಭಿಸಲು ನಿರ್ಧರಿಸಲಾಯಿತು. ನವಂಬರ್ 11 ರಂದು ದಿಲ್ಲಿಯಲ್ಲಿ ಈ ಸಮಾವೇಶ ನಡೆಯಲಿದೆ. ಇದನ್ನು ಅನುಸರಿಸಿ ರಾಜ್ಯ ಮಟ್ಟದ ಸಮಾವೇಶಗಳು, ಜಾಥಾಗಳು, ಮತಪ್ರದರ್ಶನಗಳು , ಮಹಾಪಡಾವ್‌ಗಳು, ಮಿನಿ ಸಂಸತ್ತುಗಳು, ವ್ಯಾಪಕ ಸಹಿಸಂಗ್ರಹಣೆ ಮುಂತಾದ ಕಾರ್ಯಾಚರಣೆಗಳು ದೇಶಾದ್ಯಂತ ನಡೆಯುತ್ತವೆ, ನಂತರ 2022ರ ಬಜೆಟ್ ಅಧಿವೇಶನದ ವೇಳೆಯಲ್ಲಿ ಎರಡು ದಿನಗಳ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರವನ್ನು ನಡೆಸಲಾಗುವುದು ಎಂದು ವೇದಿಕೆ ತಿಳಿಸಿದೆ.

ಈ ಸಭೆ ನವಂಬರ್ 26ರಂದು ಕಾರ್ಮಿಕ ಸಂಘಗಳ ರಾಷ್ಟ್ರೀಯ ಸಾರ್ವತ್ರಿಕ ಮುಷ್ಕರ ಹಾಗೂ ಕಿಸಾನ್ ಮಾರ್ಚ್‌ನ ವಾರ್ಷಿಕಾಚರಣೆಯನ್ನು ರಾಷ್ಟ್ರವ್ಯಾಪಿ ಪ್ರತಿಭಟನಾ ದಿನವಾಗಿ ಆಚರಿಸಬೇಕು ಎಂದೂ ನಿರ್ಧರಿಸಿದೆ.

ಜಂಟಿ ವೇದಿಕೆಯ ಸಭೆಯ ನಂತರ ಈ ಕಾರ್ಮಿಕ ಮುಖಂಡರು ಸಂಯುಕ್ತ ಕಿಸಾನ್ ಮೋರ್ಚಾದ ಮುಖಂಡರನ್ನು ಭೇಟಿ ಮಾಡಿ ತಂತಮ್ಮ ಹೋರಾಟಗಳ ಯೋಜನೆಯ ಬಗ್ಗೆ ವಿಚಾರ ವಿನಿಮಯ ನಡೆಸಿದರು. ರೈತ-ಕಾರ್ಮಿಕ ಐಕ್ಯತೆಯ ಅಗತ್ಯತೆ ಮತ್ತು ಐಕ್ಯ ಹೋರಾಟಗಳ ಮೂಲಕ ಇದನ್ನು ಮತ್ತಷ್ಟು ಗಟ್ಟಿಗೊಳಿಸುವ ಬಗ್ಗೆ ರೈತ ಮತ್ತು ಕಾರ್ಮಿಕ ಸಂಘಟನೆಗಳ ಮುಖಂಡರಲ್ಲಿ ಒಮ್ಮತ ವ್ಯಕ್ತವಾಯಿತು ಎಂದು ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆ ತಿಳಿಸಿದೆ.

ಐಎನ್‌ಟಿಯುಸಿ, ಎಐಟಿಯುಸಿ, ಸಿಐಟಿಯು, ಎಐಯುಟಿಯುಸಿ, ಟಿಯುಸಿಸಿ, ಎಸ್‌ಇಡಬ್ಲ್ಯುಎ, ಎಐಸಿಸಿಟಿಯು, ಎಲ್‌ಪಿಎಫ್ ಮತ್ತು ಯುಟಿಯುಸಿ ಮುಖಂಡರಲ್ಲದೆ ಸ್ವತಂತ್ರ ವಲಯವಾರು ಒಕ್ಕೂಟಗಳು ಮತ್ತು ಸಂಘಗಳ ಮುಖಂಡರೂ ಈ ಜಂಟಿ ಹೇಳಿಕೆಯನ್ನು ನೀಡಿದ್ದಾರೆ.

ಸಂಪಾದಕೀಯ

ಬಿಜೆಪಿಗೆ ಆಘಾತ

ಭಾರೀ ಕುತೂಹಲಕ್ಕೆ ಕಾರಣವಾದ ಹಾನಗಲ್ ಮತ್ತು ಸಿಂದಗಿ ವಿಧಾನ ಸಭಾ ಕ್ಷೇತ್ರಗಳಲ್ಲಿ ಹಾನಗಲ್ ಉಪಚುನಾವಣೆಯ ಫಲಿತಾಂಶ ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಬಿಜೆಪಿಗೆ ಆಘಾತವನ್ನುಂಟು ಮಾಡಿದೆ. ಎರಡೂ ಕ್ಷೇತ್ರಗಳಲ್ಲಿ ಗೆಲ್ಲುವ ನಿರೀಕ್ಷೆ ಅವರದಾಗಿತ್ತು. ಸಿಂದಗಿಯಲ್ಲಿ ಸುಮಾರು 31 ಸಾವಿರ ಮತಗಳ ಅಂತರದಿಂದ ಬಿಜೆಪಿ ಗೆದ್ದಿದೆ. ಆದರೆ ಹಾನಗಲ್‌ನಲ್ಲಿ ಆಗಿರುವ ಸೋಲು ಬಿಜೆಪಿಗೆ ಮಂಕು ಕವಿಸಿದೆ. ಈ ಆಘಾತಕಾರಿ ಸೋಲನ್ನು ಅವರು ನಿರೀಕ್ಷಿಸಲಿರಲಿಲ್ಲ.

ಹಾವೇರಿ ಮುಖ್ಯ ಮಂತ್ರಿ ಬೊಮ್ಮಾಯಿಯವರ ತವರು ಜಿಲ್ಲೆ. ಅವರೇ ಪ್ರತಿನಿಧಿಸುವ ಶಿಗ್ಗಾಂವಿ ಕ್ಷೇತ್ರದ ಮಗ್ಗುಲಿನಲ್ಲೇ ಇರುವ ಕ್ಷೇತ್ರ ಹಾನಗಲ್. ಇದು ಬೊಮ್ಮಾಯಿಯವರ ಪ್ರತಿಷ್ಠೆಯ ಕ್ಷೇತ್ರ. ಬಿಜೆಪಿಯ ಹಿರಿಯ ನಾಯಕ ಸಿ.ಎಂ. ಉದಾಸಿ ನಿಧಾನದಿಂದ ತೆರವಾಗಿದ್ದ ಕ್ಷೇತ್ರ. ಕಳೆದ ಬಾರಿ ಇಲ್ಲಿ ಸುಮಾರು 7 ಸಾವಿರ ಮತಗಳ ಅಂತರದಿಂದ ಬಿಜೆಪಿ ಗೆಲುವು ಸಾಧಿಸಿತ್ತು. ಈ ಸಲ ಭಾರೀ ಬಹುಮತದಿಂದ ಹಾನಗಲ್ ಕ್ಷೇತ್ರವನ್ನು ಗೆಲ್ಲಲೇಬೇಕೆಂಬ ಪಣತೊಟ್ಟು ಮುಖ್ಯಮಂತ್ರಿ ಬೊಮ್ಮಾಯಿರವರು ಕ್ಷೇತ್ರದಲ್ಲೇ ಮೊಕ್ಕಾಂ ಹೂಡಿದ್ದರು. ಮಾಜಿ ಮುಖ್ಯ ಮಂತ್ರಿ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಮಂತ್ರಿಗಳು, ಶಾಸಕರ ದಂಡೇ ಹಾನಗಲ್ ಕ್ಷೇತ್ರದ ಪ್ರಚಾರದಲ್ಲಿ ತೊಡಗಿತ್ತು. ಆದರೆ ಮತದಾರರು ಹಾನಗಲ್ ಕ್ಷೇತ್ರದಲ್ಲಿ ಬಿಜೆಪಿಯನ್ನು ತಿರಸ್ಕರಿಸಿ ಬಿಜೆಪಿಗೆ ಶಾಕ್ ನೀಡಿದ್ದಾರೆ.

ಹಾನಗಲ್ ಕ್ಷೇತ್ರದಲ್ಲಿ ಬಿಜೆಪಿ ಸೋಲಿಗೆ ಕಾರಣಗಳು ಬೇರೆ ಬೇರೆ ಇರಬಹುದು. ಆದರೆ ಸೋತಿರುವ ಬಿಜೆಪಿಯ ಅಭ್ಯರ್ಥಿ ಶಿವರಾಜ ಸಜ್ಜನರ ವಿಶ್ಲೇಷಿಸಿದ್ದು ಹೀಗೆ: "ಅತಿಯಾದ ಆತ್ಮವಿಶ್ವಾಸವೇ ನಮಗೆ ಮುಳುವಾಯಿತು" ನರೇಂದ್ರ ಮೋದಿ ಅವರ ಹೆಸರಿನಲ್ಲಿ ತಮಗೆ ಜಯ ಸಿಕ್ಕೇ ಸಿಗುತ್ತದೆ ಎಂಬುವುದು ಬಿಜೆಪಿಗರ ಮೂಢನಂಬಿಕೆ. ಆ ಕಾಲ ಮುಗಿಯುತ್ತಿರುವಂತೆ ಕಾಣುತ್ತದೆ. ಮೋದಿ ಹೆಸರಿನ ಚಮತ್ಕಾರದಿಂದ ಬಿಜೆಪಿಯಿಂದ ಟಿಕೆಟ್ ಪಡೆದು ಸ್ಪರ್ಧಿಸುವವರು ಎಲ್ಲರೂ ಗೆದ್ದೇ ಗೆಲ್ಲುತ್ತಾರೆ ಎಂಬ ಅತಿಯಾದ ವಿಶ್ವಾಸ. ಮೋದಿ ಎಂಬ ನಾಣ್ಯ ಈಗ ಚಲಾವಣೆ ಇಲ್ಲದ ನಾಣ್ಯವಾಗತೊಡಗಿದೆ.

ಕರ್ನಾಟಕದ ಉಪಚುನಾವಣೆಯಲ್ಲಿ ಮಾತ್ರವಲ್ಲ ದೇಶದ ಸುಮಾರು 30 ವಿಧಾನಸಭಾ ಮತ್ತು 3 ಲೋಕಸಭಾ ಉಪಚುನಾವಣೆಯ ಫಲಿತಾಂಶ ಬಿಜೆಪಿಗೆ ಮುಖಭಂಗ ಉಂಟುಮಾಡಿದೆ. ಒಟ್ಟು 14 ರಾಜ್ಯಗಳ 30 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಕೇವಲ 7 ವಿಧಾನಸಭಾ ಕ್ಷೇತ್ರಗಳನ್ನು ಗೆದ್ದಿದೆ. ಉಳಿದ 23 ಕ್ಷೇತ್ರಗಳಲ್ಲಿ ಬಿಜೆಪಿಗೆ ಸೋಲಾಗಿದೆ. ಉಪಚುನಾವಣೆ ನಡೆದ 3 ಲೋಕಸಭಾ ಕ್ಷೇತ್ರಗಳ ಪೈಕಿ ಮಧ್ಯಪ್ರದೇಶದ ಖಾಂಡ್ವ ಕ್ಷೇತ್ರದಲ್ಲಿ ಮಾತ್ರ ಬಿಜೆಪಿ ಜಯಗಳಿಸಿದ್ದು ಇನ್ನುಳಿದ ಎರಡು ಲೋಕಸಭಾ ಕ್ಷೇತ್ರಗಳಲ್ಲಿ ಅದು ಸೋಲನ್ನು ಅನುಭವಿಸಿದೆ. ಈ ಬೆಳವಣಿಗೆ ಕೇವಲ ಉಪ ಚುನಾವಣೆಗೆ ಸೀಮಿತವಾಗಿಲ್ಲ. ಕಳೆದ ಎಪ್ರಿಲ್–ಮೇ ತಿಂಗಳಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ 4 ರಾಜ್ಯಗಳ ಜನತೆ ಬಿಜೆಪಿಯನ್ನು ಸಾರಾಸಗಟಾಗಿ ತಿರಸ್ಕರಿಸಿದ್ದನ್ನು ನಾವು ಮರೆಯುವಂತಿಲ್ಲ. ಈ ಎಲ್ಲಾ ಬೆಳವಣಿಗೆಗಳನ್ನು ವಿಶ್ಲೇಷಿಸುತ್ತಾ ದೇಶದಲ್ಲಿ ಬಿಜೆಪಿಯ ಅವನತಿ ಪ್ರಾರಂಭವಾಗಿದೆ ಎಂದು ಪ್ರತಿಪಾದಿಸುವವರ ಸಂಖ್ಯೆ ಹೆಚ್ಚಾಗುತ್ತಿದೆ.

ಮೋದಿ ಆರಂಭದ ಕಾಲದಲ್ಲಿ ಮೋದಿ ಎಂಬ ಭ್ರಮೆ ಹುಟ್ಟಿಸಿ, ಚುನಾವಣೆಗಳಲ್ಲಿ ಬಿಜೆಪಿ ಗೆಲ್ಲುತ್ತಿತ್ತು. ಆದರೆ ಈಗ ಆ ಕಾಲ ಇಲ್ಲ. ಜನ ಮೋದಿಯವರಲ್ಲಿ ಭ್ರಮನಿರಸನಗೊಂಡಿದ್ದಾರೆ. ಈಗ ಕೇವಲ ಮೋದಿ ಹೆಸರು ಹೇಳಿ ಗೆಲ್ಲಲಾಗದು ಎಂಬ ಸತ್ಯ ವ್ಯಕ್ತವಾಗತೊಡಗಿದೆ. ಕೆಲಕಾಲ ಜನರನ್ನು ಕತ್ತಲಲ್ಲಿ ಇಡಬಹುದು. ಅವರ ದಾರಿ ತಪ್ಪಿಸಬಹುದು. ಆದರೆ ಇದು ಶಾಶ್ವತವಲ್ಲ. ಈ ವಂಚನೆ ಬಹುದಿನ ಬಯಲಾಗದೆ ಇರಲಾರದು.

ದೇಶದ ಅಭಿವೃದ್ಧಿ ದೇಶದ ಕಾರ್ಪೊರೇಟೀಕರಣವನ್ನು ಅವಲಂಭಿಸಿದೆ ಎಂದು ಮೋದಿಯವರು ಬಿಂಬಿಸುತ್ತಿದ್ದಾರೆ. ಇದನ್ನು ಕಾರ್ಮಿಕರು, ರೈತರು, ಯುವಜನರು ಪ್ರಶ್ನಿಸಲಾರಂಭಿಸಿದ್ದಾರೆ. ಇದರಿಂದಾಗಿ ಮೋದಿಯವರ ಮುಖವಾಡ ಕಳಚಿ ಬೀಳ ತೊಡಗಿದೆ. ಹಾನಗಲ್ ಕ್ಷೇತ್ರದಲ್ಲಿ ಮೋದಿ ಹೆಸರಿನ ಮೋಡಿ ಕೆಲಸ ಮಾಡಲಿಲ್ಲ. ಪಕ್ಷದಲ್ಲಿ ಏನೇ ಭಿನ್ನಾಭಿಪ್ರಾಯಗಳಿದ್ದರೂ ಜನ ಮೋದಿಯವರ ಪಕ್ಷಕ್ಕೆ ಮತ ನೀಡಿ ಗೆಲ್ಲಿಸುತ್ತಾರೆಎಂದುಕೊಳ್ಳಲಾಗಿತ್ತು. ಜನ ಮೋದಿಯವರನ್ನು ತಿರಸ್ಕರಿಸಲು ಹಿಂಜರಿಯಲಿಲ್ಲ. ಹಣದ ಆಮಿಷ, ಜಾತಿ ಆಕರ್ಷಣೆ, ಎಲ್ಲವನ್ನು ತಿರಸ್ಕರಿಸಿ ಹಾನಗಲ್ ಮತದಾರರು ತಮಗೆ ಸರಿಕಂಡವರನ್ನು ಆಯ್ಕೆ ಮಾಡಿದ್ದಾರೆ. ಆ ಮೂಲಕ ಬಿಜೆಪಿ ಪಕ್ಷಕ್ಕೆ ಸೇರಿದ ಮುಖ್ಯ ಮಂತ್ರಿ ಬೊಮ್ಮಾಯಿ ಅವರನ್ನೂ ತಿರಸ್ಕರಿಸಿದ್ದಾರೆ. ಮುಂದಿನ ಚುನಾವಣೆಗಳಿಗೆ ಇದು ಒಂದು ಪ್ರಖರವಾದ ಮುನ್ಸೂಚನೆಯಾಗಿ ಜನ ಬಿಜೆಪಿಯನ್ನು ಅಧಿಕಾರದಿಂದ ತೊಲಗಿಸಿದರೆ ಅದೇನು ಆಶ್ಚರ್ಯಪಡಬೇಕಾದ ಸಂಗತಿ ಆಗಲಾರದು.

ಪರಿಶಿಷ್ಟರ ವಸತಿ ಯೋಜನೆಗೆ ಪ್ರಭಾವಿಗಳ ಅಡ್ಡಗಾಲು: ಸಿಪಿಐ(ಎಂ) ಖಂಡನೆ

ಬಿಬಿಎಂಪಿ ವ್ಯಾಪ್ತಿಯಲ್ಲಿ ವಿಶೇಷ ಘಟಕ ಯೋಜನೆ ಮತ್ತು ಟ್ರೈಬಲ್ ಉಪ ಯೋಜನೆ ಅಡಿ ಬಳಕೆಯಾಗದೆ ಉಳಿದಿದ್ದ ಹಣದಲ್ಲಿ ಪರಿಶಿಷ್ಟ ಜನರಿಗೆ ವಸತಿ ನಿವೇಶನ ನೀಡಲು 2014 ಜುಲೈನಲ್ಲಿ ರಾಜ್ಯ ಸರ್ಕಾರದ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಮಾಡಲಾಗಿದ್ದ ತೀರ್ಮಾನವನ್ನು ಜಾರಿ ಮಾಡಲು ಬಿಡದ ಬಿಜೆಪಿ ಸಚಿವರು ಹಾಗೂ ಶಾಸಕರ ಕ್ರಮಗಳನ್ನು ಸಿಪಿಐ(ಎಂ) ಪಕ್ಷ ಖಂಡಿಸಿದೆ.

ಈ ಬಗ್ಗೆ ಹೇಳಿಕೆ ಬಿಡುಗಡೆ ಮಾಡಿರುವ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–ಸಿಪಿಐ(ಎಂ), ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿ ಎನ್.ಪ್ರತಾಪ್ ಸಿಂಹ ಮತ್ತು ದಕ್ಷಿಣ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಎನ್. ಉಮೇಶ್ ಅವರು ಕೂಡಲೇ ಸದರಿ ಫಲಾನುಭವಿಗಳಿಗೆ ಸದರಿ ವಸತಿ ನಿವೇಶನಗಳನ್ನು ವಿತರಿಸಲು ಆಗ್ರಹಿಸಿದ್ದಾರೆ.

ವಸತಿ ಸಚಿವರು ಮತ್ತು ಬಿಡಿಎ ಅಧ್ಯಕ್ಷರ ಒತ್ತಡಕ್ಕೆ ಮಣಿದು ಅಂದಿನ ಮುಖ್ಯಮಂತ್ರಿ 2019 ಆಗಸ್ಟ್‌ನಲ್ಲಿ ಈ ಪ್ರಕ್ರಿಯೆಯನ್ನು ರದ್ದುಮಾಡಲು ನೀಡಿದ್ದ ಸೂಚನೆಯಂತೆ 1,100 ಪರಿಶಿಷ್ಟ ವರ್ಗ ಮತ್ತು ಪಂಗಡದ ಫಲಾನುಭವಿಗಳಿಗೆ ಲಭಿಸಬೇಕಿದ್ದ ವಸತಿ ನಿವೇಶನಗಳು ದಶಕ ಕಳೆಯುತ್ತಿದ್ದರೂ ಲಭಿಸದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ದಾಸನಪುರ ಹಾಗೂ ಕೆಂಗೇರಿ ಹೋಬಳಿಯಲ್ಲಿ ಗುರುತಿಸಿ ಬಿಬಿಎಂಪಿಗೆ ನೀಡಲಾಗಿದ್ದ ಜಮೀನಿನಲ್ಲಿ ಕೈಗೊಳ್ಳಬೇಕಾಗಿದ್ದ ಪರಿಶಿಷ್ಟರ ಈ ವಸತಿ ನಿವೇಶನ ಯೋಜನೆ ಬಿಜೆಪಿ ಸರ್ಕಾರದ ದಲಿತ ವಿರೋಧಿ ನೀತಿಯಿಂದಾಗಿ ರದ್ದಾಗಬೇಕಾಗಿ ಬಂದಿದೆ. ಇದರಿಂದಾಗಿ 1,100 ಫಲಾನುಭವಿಗಳು ವಸತಿ ನಿವೇಶನದಿಂದ ವಂಚಿತರಾಗಬೇಕಾಗಿ ಬಂದಿದೆ ಎಂದು ಸಿಪಿಐ(ಎಂ) ಸರ್ಕಾರದ ಕ್ರಮವನ್ನು ಖಂಡಿಸಿದೆ.

ಪರಿಶಿಷ್ಟ ಜಾತಿ ಮತ್ತು ಪಂಗಡದ ವಿಶೇಷ ಘಟಕ ಯೋಜನೆ ಮತ್ತು ಟ್ರೈಬಲ್ ಉಪ ಯೋಜನೆಗಳ ಹಣ ಪರಿಶಿಷ್ಟರಿಗೆ ಮಾತ್ರ ಬಳಕೆಯಾಗಬೇಕು. ಬಿಬಿಎಂಪಿಯ ಅಸಮರ್ಥ ಆಡಳಿತದಿಂದಾಗಿ ಸದರಿ ಯೋಜನೆಗೆ ಮೀಸಲಿಟ್ಟಿದ್ದ ಹಣ ಬಳಕೆಯಾಗದೆ ಉಳಿದಿದ್ದು ಸದರಿ ಹಣವನ್ನು ವಸತಿ ನಿವೇಶನ ರಹಿತರಿಗೆ ವಸತಿ ನಿವೇಶನ ನೀಡಲು ಬಳಸಬೇಕೆಂಬ 2021ರ ಅಂದಿನ ಸರ್ಕಾರದ ಕ್ರಮಕ್ಕೆ ಬಿಜೆಪಿ ಸರ್ಕಾರವು ಅಡ್ಡಿಪಡಿಸಿರುವುದು ಬಿಜೆಪಿಯ ದಲಿತ ದ್ರೋಹಿ ಕ್ರಮವನ್ನು ತೋರುತ್ತದೆ ಎಂದು ಸಿಪಿಐ(ಎಂ) ಪಕ್ಷವು ಟೀಕಿಸಿದೆ.

ಮನೆ ಬಾಗಿಲಿಗೆ ಸೇವೆ? ಸರ್ಕಾರದ ಸೇವೆಗಳಿಗೆ ಬಳಕೆದಾರರ ಶುಲ್ಕ ಸಂಗ್ರಹಿಸುವ ನಯವಂಚಕ ಕ್ರಮ: ಸಿಪಿಐ(ಎಂ) ಖಂಡನೆ

ರಾಜ್ಯ ಸರ್ಕಾರವು ಬಿಬಿಎಂಪಿ ವ್ಯಾಪ್ತಿಯಲ್ಲಿ 8 ಇಲಾಖೆಗಳ 58 ಸರ್ಕಾರಿ ಸೇವೆಯನ್ನು ಮನೆಬಾಗಿಲಿಗೆ ಒದಗಿಸುವ ನೆಪದಲ್ಲಿ ಸೇವೆ ಪಡೆಯುವವರಿಂದ ಪ್ರತಿ ಸೇವೆಗೆ ರೂ.115 ಸೇವಾ ಶುಲ್ಕದೊಂದಿಗೆ ಇಲಾಖಾ ಶುಲ್ಕವನ್ನು ಸಂಗ್ರಹಿಸುವ ಮೂಲಕ ಸರ್ಕಾರಿ ಸೇವೆಗಳಿಗೆ ಬಳಕೆದಾರರ ಶುಲ್ಕ ವಿಧಿಸುವ ನಯವಂಚಕ ಕ್ರಮಕ್ಕೆ ರಾಜ್ಯ ಬಿಜೆಪಿ ಸರ್ಕಾರ ಮುಂದಾಗಿದೆ ಎಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–ಸಿಪಿಐ(ಎಂ), ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಖಂಡಿಸಿವೆ.

ಈ ಬಗ್ಗೆ ಹೇಳಿಕೆ ನೀಡಿರುವ ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಕೆ.ಎನ್. ಉಮೇಶ್ ಹಾಗೂ ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿ ಎನ್. ಪ್ರತಾಪ್ ಸಿಂಹ ಅವರು ಮನೆ ಬಾಗಿಲಿಗೆ ಸೇವೆ ಒದಗಿಸಲು ನೇಮಕ ಮಾಡಲಾಗುವ ಜನ ಸೇವಕರು ಯಾರು? ಅವರನ್ನು ಹೇಗೆ ನೇಮಿಸಲಾಗುತ್ತದೆ? ಎಂಬುದನ್ನು ರಾಜ್ಯ ಬಿಜೆಪಿ ಸರ್ಕಾರವು ಬಹಿರಂಗಪಡಿಸಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ. ಜನಸೇವಕರ ಹೆಸರಿನಲ್ಲಿ ಆರ್.ಎಸ್.ಎಸ್. ಕಾರ್ಯಕರ್ತರನ್ನು ನೇಮಿಸಿ ಅವರ ಮೂಲಕ ರಾಜ್ಯ ಸರ್ಕಾರಿ ಸೇವೆಗಳನ್ನು ಒದಗಿಸಿ ಅದರಿಂದಲೂ ಶುಲ್ಕ ಸಂಗ್ರಹಿಸಿ ಇದುವರೆಗೆ ಉಚಿತವಾಗಿ ಲಭ್ಯವಿದ್ದ ಸೇವೆಗಳಿಗೆ ಶುಲ್ಕ ವಿಧಿಸುವ ದೂರ್ತ ಕ್ರಮವನ್ನು ರಾಜ್ಯ ಬಿಜೆಪಿ ಸರ್ಕಾರವು ಜಾರಿಗೊಳಿಸಲು ಮುಂದಾಗಿದೆ ಎಂದು ಖಂಡಿಸಿದ್ದಾರೆ.

ಇದು ಒಂದೆಡೆ ನವ ಉದಾರಿವಾದಿ ಆರ್ಥಿಕ ನೀತಿಗಳ ಅನುಸಾರವಾಗಿ ಉಚಿತ ಸೇವೆಗಳನ್ನೂ ಪಾವತಿಸಿ ಸೇವೆ ಪಡೆಯಿರಿ ಎಂದಾಗಿಸುವ ಕ್ರಮದೊಂದಿಗೆ ಇನ್ನೊಂದೆಡೆ ಸರ್ಕಾರಿ ಸೇವೆಗಳನ್ನು ಆರ್.ಎಸ್.ಎಸ್. ಕಾರ್ಯಕರ್ತರಿಗೆ ಹೊರಗುತ್ತಿಗೆ ನೀಡಿ, ಆ ಮೂಲಕ ತಮ್ಮ ಹಿಂದುತ್ವದ ಸಿದ್ಧಾಂತವನ್ನು ಸರ್ಕಾರಿ ಸೇವೆ ಮೂಲಕ ಪ್ರಚುರಪಡಿಸುವ ಬಿಜೆಪಿ ಸರ್ಕಾರದ ದುಷ್ಟ ಯೋಜನೆಯಾಗಿದೆ.

ಸರ್ಕಾರ ಇಲಾಖೆಗಳಲ್ಲಿ ಸಮರ್ಥ ಮತ್ತು ಸಮರ್ಪಕ ಸೇವೆ ಒದಗಿಸುವ ಕಾರ್ಯವನ್ನು ಖಾತ್ರಿಪಡಿಸಬೇಕಾದ ಮುಖ್ಯಮಂತ್ರಿಗಳು ಅದನ್ನು ಖಾತ್ರಿಪಡಿಸದೆ ಭ್ರಷ್ಟಾಚಾರಕ್ಕೆ ಅಲ್ಲಿ ಅವಕಾಶವಿದೆ ಎಂಬ ನೆಪ ಹೇಳಿ ಸದರಿ "ಮನೆಬಾಗಿಲಿಗೆ ಜನ ಸೇವಕ" ಎಂಬ ಯೋಜನೆಯನ್ನು ಜಾರಿಗೊಳಿಸುತ್ತಿರುವುದು ಮುಖ್ಯಮಂತ್ರಿಗಳು ಮತ್ತು ರಾಜ್ಯ ಬಿಜೆಪಿ ಸರ್ಕಾರ ತಮ್ಮ ಸಾಂವಿಧಾನಿಕ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವ ಪ್ರವೃತ್ತಿಯನ್ನು ತೋರುತ್ತದೆ ಎಂದು ಸಿಪಿಐ(ಎಂ) ಟೀಕಿಸಿದೆ.

ಮಡಿವಾಳ ವಲಯ 5ನೇ ಸಮ್ಮೇಳನ



ಸಿಪಿಐ(ಎಂ) ಮಡಿವಾಳ ವಲಯದ 5 ನೇ ಸಮ್ಮೇಳನವನ್ನು ಪಕ್ಷದ ರಾಜ್ಯ ಸಮಿತಿ ಸದಸ್ಯರಾದ ಡಾ. ಕೆ. ಪ್ರಕಾಶ್ ಉದ್ಘಾಟಿಸಿದರು.

ಬಿ.ಎನ್. ಮಂಜುನಾಥ್, ಬೆಂ. ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರು, ಮಡಿವಾಳ ವಲಯದ ಕಾರ್ಯದರ್ಶಿ ಲಿಂಗರಾಜು ಉಪಸ್ಥಿತರಿದ್ದರು.

ಕಾಂ. ಲಿಂಗರಾಜು ರವರು ವಲಯ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.



‘ದೇಶದ ಆಸ್ತಿಯನ್ನು ಕೇಂದ್ರ ಸರಕಾರ ಬಂಡವಾಳಶಾಹಿಗಳಿಗೆ ಮಾರಾಟ ಮಾಡುತ್ತಿದೆ’

ಸಿಪಿಐ(ಎಂ) ರಾಜಾಜಿನಗರ ವಲಯದ 5 ನೇ ಸಮ್ಮೇಳನ

ರಾಜಾಜಿನಗರ ವಲಯ 5 ನೇ ಸಮ್ಮೇಳನವು ಮಂಜುನಾಥ ನಗರದಲ್ಲಿರುವ ’ವಿಶ್ವಕರ್ಮ ಸಮುದಾಯ ಭವನ’ದಲ್ಲಿ ನಡೆಯಿತು. ಪಕ್ಷದ ಧ್ವಜ ಹಾರಿಸುವುದರ ಮೂಲಕ ವಲಯ ಕಾರ್ಯದರ್ಶಿಗಳಾದ ಕಾಂ. ಚಂದ್ರಶೇಖರ್ ವಲಯ ಸಮ್ಮೇಳನಕ್ಕೆ ಚಾಲನೆ ನೀಡಿದರು. ವಲಯ ಸಮಿತಿ ಸದಸ್ಯರಾದ ನಾಗಣ್ಣರವರು ಸಮ್ಮೇಳನಕ್ಕೆ ಆಗಮಿಸಿದ್ದ ಪಕ್ಷದ ಸದಸ್ಯರನ್ನು, ಹಿತೈಷಿಗಳನ್ನು ಸ್ವಾಗತಿಸಿದರು. ವಲಯ ಸಮ್ಮೇಳನದ ಉದ್ಘಾಟನೆಯನ್ನು ಬೆಂಗಳೂರು ಉತ್ತರ ಜಿಲ್ಲೆಯ ಕಾರ್ಯದರ್ಶಿ ಕಾಂ. ಪ್ರತಾಪ್ ಸಿಂಹ ನೆರವೇರಿಸಿದರು.

‘ಜನರು ಕೋವಿಡ್‌ನಿಂದ ತತ್ತರಿಸಿಹೋಗಿದ್ದು, ಬೆಲೆ ಏರಿಕೆಯಿಂದ ಸಂಕಷ್ಟಕ್ಕೀಡಾಗಿದ್ದಾರೆ. ಈ ನಡುವೆ ದೇಶದ ಆಸ್ತಿಗಳನ್ನು ಕೇಂದ್ರ ಸರಕಾರ ಬಂಡವಾಳಶಾಹಿಗಳಿಗೆ ಮಾರಾಟ ಮಾಡುತ್ತಿದ್ದು, ಇದರ ವಿರುದ್ಧ ಹೋರಾಟ ನಡೆಸಬೇಕಿರುವುದು ಅಗತ್ಯ’ ಎಂದು ಸಿಪಿಎಂ ಉತ್ತರ ವಲಯದ ರಾಜ್ಯ ಕಾರ್ಯದರ್ಶಿ ಕಾಮ್ರೆಡ್ ಪ್ರತಾಪ್ ಸಿಂಹ ಮಂಜುನಾಥ



ನಗರದಲ್ಲಿ ಸಿಪಿಎಂನ ರಾಜಾಜಿನಗರ ವಲಯ ಸಮ್ಮೇಳನದಲ್ಲಿ ಪಾಲ್ಗೊಂಡು ಮಾತನಾಡಿದರು. ದೇಶದಲ್ಲಿ ನಡೆಯುತ್ತಿರುವ ಕೋಮುವಾದ ಹಿಮ್ಮೆಟ್ಟಿಸಿ, ಬೆಲೆ ಏರಿಕೆ ಹಾಗೂ ವಿದೇಶಿ ಬಂಡವಾಳವನ್ನು ತಡೆದು ದೇಶವನ್ನು ರಕ್ಷಣೆ ಮಾಡುವ ಉದ್ದೇಶದಿಂದ ಪ್ರತಿಮೂರು ವರ್ಷಕ್ಕೊಮ್ಮೆ ಪಕ್ಷದಿಂದ ಸಮ್ಮೇಳನ ಏರ್ಪಡಿಸಲಾಗುತ್ತಿದೆ ಎಂದರು.



ಕೋವಿಡ್ ಸಂಕಷ್ಟ ಒಂದು ಕಡೆಯಾದರೆ, ಮತ್ತೊಂದು ಕಡೆ ದೇಶದಲ್ಲಿ ಬಡವರ ಸಂಖ್ಯೆ ಹೆಚ್ಚಳವಾಗುತ್ತಿದೆ. ಈ ಮಧ್ಯೆ ಅದಾನಿ ಆಸ್ತಿ 1.5 ಲಕ್ಷ ಕೋಟಿ ರೂ. ಗಳಿಂದ 5 ಲಕ್ಷ ಕೋಟಿ ರೂ.ಗೆ ಏರಿಕೆಯಾಗಿದೆ ಎಂದು ದೂರಿದ ಅವರು, ಈ ಸಮ್ಮೇಳನದಲ್ಲಿ ದೇಶದಲ್ಲಿ ನಡೆಯುತ್ತಿರುವ ಅನ್ಯಾಯ, ಬಡವರ ಹಾಗೂ ಕಾರ್ಮಿಕರ ಮೇಲಿನ ದೌರ್ಜನ್ಯ ಹಾಗೂ ಆರ್ಥಿಕ ಸಮಸ್ಯೆಗಳ ವಿರುದ್ಧ ಹೋರಾಟ ರೂಪಿಸುವ ಸಂಬಂಧ ಚರ್ಚಿಸಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಸಿಪಿಎಂನ ಉತ್ತರ ಜಿಲ್ಲೆ ಕಾರ್ಯದರ್ಶಿ ಮಂಡಳಿ ಸದಸ್ಯ ಗೋಪಾಲಕೃಷ್ಣಹರಳಹಳ್ಳಿ ಮಾತನಾಡಿ, ’ಮೋದಿ ಸರಕಾರ ಬಂದಮೇಲೆ ಅಡುಗೆ ಅನಿಲದ ಬೆಲೆ ದ್ವಿಗುಣವಾಗಿದೆ. ಸರಕಾರಿ ನೌಕರರನ್ನು ಕೆಲಸದಿಂದ ಹೊರ ಹಾಕಲಾಗುತ್ತಿದೆ. ಜಾತಿ ಧರ್ಮದ ಹೆಸರಿನಲ್ಲಿ ದಲಿತರು ಹಾಗೂ ಮುಸ್ಲಿಮರ ವಿರುದ್ದ ದೌರ್ಜನ್ಯಗಳು ಹೆಚ್ಚಾಗಿದ್ದು, ಇದರ ವಿರುದ್ದ ಎಲ್ಲರೂ ಹೋರಾಟ ಮಾಡಬೇಕು ಎಂದರು.

ಅಧ್ಯಕ್ಷತೆಯನ್ನು ಕಾಂ. ಚಂದ್ರಶೇಖರ್ ವಹಿಸಿದರು. ಕಾಂ. ಗೋಪಾಲ ಕೃಷ್ಣ ಅರಳಹಳ್ಳಿ ಹಾಗೂ ಕಾಂ. ಶಾರದಾ ಕೆ.ಎಸ್. ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದರು.

ನೂತನ ಸಮಿತಿ ಆಯ್ಕೆ:

9 ಜನರ ನೂತನ ಸಮಿತಿಯನ್ನು ಆಯ್ಕೆ ಮಾಡಲಾಯಿತು. 7 ಜನ ಸದಸ್ಯರು, 1. ಶಾರದಾ. ಕೆ.ಎಸ್., 2. ನವೀನ್.ಆರ್. ಶೆಣೈ, 3. ಹರೀಶ್ ಬಿ.ಎಸ್., 4. ನಾಗಣ್ಣ ಹೆಚ್.ಜಿ., 5. ಚಂದ್ರಶೇಖರ್ ಡಿ., 6. ಪಾರ್ಥಿಬನ್ ಎನ್., 7. ರಾಜಣ್ಣ ಎನ್.,

ಖಾಯಂ ಆಹ್ವಾನಿತರು :

1. ಚಂದ್ರಶೇಖರ್. ಸಿ, 2. ಕಮಲಾಕ್ಷ, ಸರ್ವಾನುಮತದಿಂದ ಕಾಂ. ಚಂದ್ರಶೇಖರ್ ಅವರನ್ನು ನೂತನ ವಲಯ ಕಾರ್ಯದರ್ಶಿಗಳಾಗಿ ಸಮ್ಮೇಳನದಲ್ಲಿ ಆಯ್ಕೆ ಮಾಡಲಾಯಿತು.

ಮುಂದಿನ ಗುರಿಗಳು:

1. ಮುಂದಿನ ಮೂರು ವರ್ಷಗಳಲ್ಲಿ 1% ಅಷ್ಟು ಪಕ್ಷದ ಸದಸ್ಯತ್ವವನ್ನು ಹೆಚ್ಚಿಸುವುದು.
2. ಸಾಮೂಹಿಕ ಸಂಘಟನೆಗಳಾದ ಆಟೋ, ಕಟ್ಟಡ, ಮನೆಕೆಲಸಗಾರರ ಸಂಘ ಹಾಗೂ ದಲಿತ ಹಕ್ಕುಗಳ ಸಮಿತಿಗಳ ಸದಸ್ಯತ್ವವನ್ನು ಹೆಚ್ಚಿಸಲು ಪ್ರಯತ್ನಿಸುವುದು.
3. ವಲಯದಲ್ಲಿ ಮಹಿಳಾ ರಂಗವನ್ನು ಕಟ್ಟಿ ಬೆಳೆಸುವುದರ ಮೂಲಕ ಪಕ್ಷಕ್ಕೆ ಮಹಿಳೆಯರನ್ನು ತರಲು ವಲಯ ಸಮಿತಿ, ಹಾಗೂ ಶಾಖೆಗಳು ವಿಶೇಷ ಯೋಜನೆ ರೂಪಿಸುವುದು.
4. ರಾಜಾಜಿನಗರದಲ್ಲಿ ವಿದ್ಯಾರ್ಥಿ, ಯುವ ಜನತೆಯ ಸಂಘಟನೆಯನ್ನು ಕಟ್ಟಲು ಪ್ರಯತ್ನಿಸುವುದು.

ಪಕ್ಷದ ಚಟುವಟಿಕೆಗಳನ್ನು ಸುಲಲಿತ ವಾಗಿ ನಡೆಸಿಕೊಂಡು ಹೋಗಲು ನಿಧಿ ಅವಶ್ಯಕತೆ ಇದ್ದು, ಮೂರು ತಿಂಗಳ ಕಾಲಾವಕಾಶ ತೆಗೆದುಕೊಂಡು ವಲಯದ ಪ್ರತಿ ಸದಸ್ಯರು, ಶಾಖೆಯ ಸದಸ್ಯರು ನಿಧಿ ಸಂಗ್ರಹಿಸುವುದು ಎಂದು ಸಮ್ಮೇಳನದಲ್ಲಿ ಕರೆ ನೀಡಲಾಯಿತು. ಈ ಎಲ್ಲ ತೀರ್ಮಾನಗಳನ್ನು ಜಾರಿ ಮಾಡಲು ಈ ಕೂಡಲೇ ಪ್ರತಿ ಶಾಖೆಗಳು ಸಭೆ ಸೇರಿ ಚರ್ಚಿಸಿ ಕೆಲಸಕ್ಕಿಳಿಯಬೇಕು ಎಂದು ಕರೆ ನೀಡಲಾಯಿತು.

ಸಿಪಿಐ(ಎಂ) ಬೈಂದೂರು ವಲಯ ಸಮ್ಮೇಳನ

ಬೆಲೆ ಏರಿಕೆ ತಡೆಗೆ ಪರ್ಯಾಯ ನೀತಿಗಳು ಅಗತ್ಯವಾಗಿದೆ: ಬಾಲಕೃಷ್ಣ ಶೆಟ್ಟಿ

ಕೇಂದ್ರ ಸರಕಾರದ ನೀತಿಗಳಿಂದಾಗಿ ದಿನೇ ದಿನೇ ಬೆಲೆ ಏರಿಕೆ ತೀವ್ರವಾಗುತ್ತಿದೆ. ಬೆಲೆ ಏರಿಕೆ ತಡೆಗಟ್ಟಲು ಪರ್ಯಾಯ ನೀತಿಗಳು ಅಗತ್ಯವಾಗಿದೆ ಎಂದು ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಬಾಲಕ್ರಷ್ಣ ಶೆಟ್ಟಿ ಗುಲ್ವಾಡಿ ಪ್ರಭಾಕಿರಣ ಟೈಲ್ಸ್ ಕಾರ್ಖಾನೆ ಆವರಣದಲ್ಲಿ ನಡೆದ ಬೈಂದೂರು ವಲಯ 3 ನೇ ಸಮ್ಮೇಳನ ಉಧ್ಘಾಟಿಸಿ ಮಾತನಾಡಿದರು. ಪರ್ಯಾಯ ನೀತಿಗಳಿಗಾಗಿ ನಿರಂತರ ಹೋರಾಟ ನಡೆಸುತ್ತಿದೆ ಮಾತ್ರವಲ್ಲ ಪರ್ಯಾಯ ಚಿಂತನೆಗಳು ಕೂಡ ಇಂದು ಅಗತ್ಯವಿದೆ ಎಂದರು. ಜನರಿಗೆ ಲಸಿಕೆ ಕೊಡಲು ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆ ಅನಿವಾರ್ಯ ಎಂದು ಜನರನ್ನು ನಂಬಿಸಲಾಗುತ್ತಿದೆ. ಆದರೆ ಬಹುತೇಕ ತೈಲ ಕಂಪೆನಿಗಳು ಇಂದು ಖಾಸಗಿ ಒಡೆತನದಲ್ಲಿದ್ದು ಆ ಕಂಪೆನಿಗಳ ಲಾಭ ಹೆಚ್ಚಿಸಲು ಸರಕಾರ ಪ್ರಯತ್ನಿಸುತ್ತಿದೆ ಅಡುಗೆ ಅನಿಲ ಸೇರಿದಂತೆ ಎಲ್ಲಾ ಆಹಾರ ವಸ್ತುಗಳ ಬೆಲೆ ಏರಿಕೆ ವಿರುದ್ಧ ಈ ಸಮ್ಮೇಳನವು ಮುಂದಿನ ದಿನದಲ್ಲಿ ತೀವ್ರ ಹೋರಾಟ ನಡೆಸಲು ನಿರ್ಣಯಿಸಬೇಕೆಂದು ಕರೆ ನೀಡಿದರು.

ಕೇಂದ್ರ ಸರಕಾರ ಅನುಸರಿಸುತ್ತಿರುವ ಕೆಟ್ಟ ಆರ್ಥಿಕ ನೀತಿಯಿಂದ ದೇಶದಲ್ಲಿ 70 ಲಕ್ಷ ಕಾರ್ಖಾನೆಗಳು ಮುಚ್ಚಿವೆ. ಇದರಿಂದ ಕೋಟ್ಯಾಂತ ಉದ್ಯೋಗಗಳು ನಷ್ಟವಾಗಿದೆ. ನಮ್ಮ ಸಂಘಟನೆಗಳು ಇಂತಹ ಕಾರ್ಖಾನೆಗಳನ್ನು ಉಳಿಸಲು ಪರ್ಯಾಯ ಆರ್ಥಿಕ ನೀತಿಗಳಿಗಾಗಿ ಹೋರಾಟ ನಡೆಸುತ್ತಿದ್ದರು ಸರಕಾರ ನಿರ್ಲಕ್ಷ್ಯ ವಹಿಸಿದೆ ಎಂದು ಅವರು ದೂರಿದರು.



ಧ್ವಜಾರೋಹಣವನ್ನು ಪಕ್ಷದ ಹಿರಿಯ ಸದಸ್ಯ ಜಿ.ಬಿ ಮಹಮ್ಮದ್ ನೆರವೇರಿಸಿದರು. ಉಧ್ಘಾಟನ ಸಮಾರಂಭದ ಅಧ್ಯಕ್ಷತೆ ಜಿ.ಡಿ ಪಂಜು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಿಪಿಎಂ ಪಕ್ಷದ ರಾಜ್ಯ ಮುಖಂಡರಾದ ಕೆ.ಶಂಕರ್ ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಚ್ ನರಸಿಂಹ, ಮಹಾಬಲ ವಡೇರ ಹೋಬಳಿ ಮಾತನಾಡಿದರು. ಪ್ರತಿನಿಧಿ ಅಧಿವೇಶನದಲ್ಲಿ ವೆಂಕಟೇಶ್ ಕೋಣಿ, ಶೀಲಾವತಿ, ಸಂತೋಷ ಹೆಮ್ಮಾಡಿ ನಡೆಸಿಕೊಟ್ಟರು. ಶ್ರದ್ಧಾಂಜಲಿ ಠರಾವು ಮನೋರಮ ಭಂಡಾರಿ ಮಂಡಿಸಿದರು. ಪಕ್ಷದ ವಲಯ ಕಾರ್ಯದರ್ಶಿ ಸುರೇಶ್ ಕಲ್ಲಾಗರ ನಾಲ್ಕು ವರ್ಷಗಳ ಸಂಘಟನ ಕರಡು ವರದಿ ಮಂಡಿಸಿದರು.



ಪ್ರತಿನಿಧಿಗಳು ವರದಿ ಮೇಲೆ ಚರ್ಚೆ ನಡೆಸಿದರು. ಬೆಲೆ ಏರಿಕೆ ವಿರೋಧಿಸಿ, ರೈತ ಕಾರ್ಮಿಕ ಕಾಯ್ದೆ ತಿದ್ದು ಪಡಿ ವಿರೋಧಿಸಿ, ಸೇಪಾಪುರದಲ್ಲಿ ಎಲ್ಲಾ ರೈಲುಗಳು ನಿಲುಗಡೆಗ ಆಗ್ರಹಿಸಿ, ಕರಾವಳಿ ನಿಯಂತ್ರಣ ವಲಯ ಕಠಿಣ ನಿಯಮಾವಳಿ ಸಡಿಲಗೊಳಿಸಲು, ಬೈಂದೂರು ಪ್ರವಾಸೋದ್ಯಮ ಅಭಿವ್ರದ್ಧಿ, ಸೌಕೂರು ಏತ ನೀರಾವರಿ ಯೋಜನೆ ತ್ವರಿತವಾಗಿ ಪೂರ್ಣಗೊಳಿಸಲು, ಗಂಗೊಳ್ಳಿ ಕೋಡಿ ಸೇತುವೆಗಾಗಿ ಸೇರಿದಂತೆ ಮೊದಲಾದ ನಿರ್ಣಯಗಳನ್ನು ಸಮ್ಮೇಳನ ಕೈಗೊಂಡಿತು.

ಸಮ್ಮೇಳನ ಹೊಸ ವಲಯ ಸಮಿತಿಯನ್ನು ಆಯ್ಕೆ ಮಾಡಿತು. ನೂತನ ಕಾರ್ಯದರ್ಶಿಯಾಗಿ ಸುರೇಶ್ ಕಲ್ಲಾಗರ ಮರು ಆಯ್ಕೆಯಾದರು. ರಮೇಶ್ ಗುಲ್ವಾಡಿ ವಂದನಾರ್ಪಣೆ ಮಾಡಿದರು.



ಮದ್ದೂರು ವಲಯ 2ನೇ ಸಮ್ಮೇಳನ

ಸಿಪಿಐ(ಎಂ) ಮದ್ದೂರು ವಲಯ ಎರಡನೇ ಸಮ್ಮೇಳನವು ತಾಲ್ಲೂಕಿನ ಭಾರತಿನಗರದಲ್ಲಿ ಜರುಗಿತು.

ತಾಲ್ಲೂಕಿನ ದುಡಿಯುವ ಜನರನ್ನು ವ್ಯಾಪಕವಾಗಿ ಸಂಘಟಿಸುವ ಮೂಲಕ ಶೋಷಣೆ ವಿರುದ್ಧದ ಹೋರಾಟವನ್ನು ಬಲಿಷ್ಠಗೊಳಿಸಲು ಸಮ್ಮೇಳನ ನಿರ್ಧರಿಸಿತು.

ಒಂಬತ್ತು ಜನರ ನೂತನ ಸಮಿತಿ ಆಯ್ಕೆ ಮಾಡುವ ಮೂಲಕ ಸಮ್ಮೇಳನ ಯಶಸ್ವಿಯಾಗಿ ಮುಕ್ತಾಯಗೊಂಡಿತು.

ಕಾಂ. ಟಿ. ಯಶವಂತ್ ನೂತನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.





ಕಾ. ಟಿ. ರಾಜೀವ್ ಮೆಂಡನ್ ಅಂತಿಮ ನಮನ



ಸಿಪಿಐ(ಎಂ) ಪಕ್ಷದ ಹಿರಿಯ ಮುಂದಾಳು, ನಾಲ್ಕು ಬಾರಿ ಉಳ್ಳಾಲ ಟೌನ್ ಪಂಚಾಯತ್ ಸದಸ್ಯರಾಗಿ ಚುನಾಯಿತರಾಗಿ ಸೇವೆ ಸಲ್ಲಿಸಿದ, ಶ್ರೀ ಜೈ ವೀರಮಾರುತಿ ವ್ಯಾಯಾಮ ಶಾಲೆಯ ಸ್ಥಾಪಕರು ಹಾಗೂ ಮುಖ್ಯ ಶಿಕ್ಷಕರಾರು, ನೂರಾರು ಕುಸ್ತಿಪಟುಗಳಿಗೆ ಮತ್ತು ಅಂತರಾಷ್ಟ್ರೀಯ ದೇಹದಾರ್ಢ್ಯ ಪಟುಗಳನ್ನು ತರಬೇತುಗೊಳಿಸಿದ, ತೊಕ್ಕೊಟ್ಟು ಮೊಸರು ಕುಡಿಕೆಯ ರುವಾರಿ ಕಾ. ಟಿ ರಾಜೀವ್ ಮೆಂಡನ್ ರವರಿಗೆ ಸಿಪಿಐ(ಎಂ) ಉಳ್ಳಾಲ ವಲಯ ಸಮಿತಿಯಿಂದ ಗೌರವದ ಅಂತಿಮ ನಮನ ಸಲ್ಲಿಸಲಾಯಿತು.

ಕೃಷಿ ಕಾಯ್ದೆಗಳ ವಾಪಸ್ಸಾತಿಗೆ ನ.26 ಕಡೆ ದಿನ: ಕೇಂದ್ರ ಸರ್ಕಾರಕ್ಕೆ ರಾಕೇಶ್ ಟಿಕಾಯತ್ ಎಚ್ಚರಿಕೆ



ಕೇಂದ್ರದ ಬಿಜೆಪಿ ಸರ್ಕಾರದ ವಿವಾದಿತ ಮೂರು ಕೃಷಿ ಕಾಯ್ದೆಗಳನ್ನು ನವೆಂಬರ್ 26 ರೊಳಗೆ ರದ್ದುಪಡಿಸಬೇಕು. ಇಲ್ಲವಾದರೆ ದೆಹಲಿಯ ಗಡಿ ಭಾಗದಲ್ಲಿ ರೈತರು ಹೋರಾಟವನ್ನು ತೀವ್ರಗೊಳಿಸಲಿದ್ದಾರೆ ಎಂದು ಭಾರತೀಯ ಕಿಸಾನ್ ಯೂನಿಯನ್(ಎಸ್‌ಕೆಎಂ) ಮುಖ್ಯಸ್ಥ ರಾಕೇಶ್ ಟಿಕಾಯತ್ ತಿಳಿಸಿದ್ದಾರೆ.

ವಿವಾದಿತ ಕಾಯ್ದೆಗಳ ವಿರುದ್ಧ ದೆಹಲಿಯಲ್ಲಿ ಅಹೋರಾತ್ರಿ ಬಿಡುಬಿಟ್ಟು ಪಂಜಾಬ್, ಹರ್ಯಾಣ ಮತ್ತು ಉತ್ತರ ಪ್ರದೇಶಗಳ ರೈತರು ನಿಗದಿತ ಗಡುವಿನಲ್ಲಿ ಕೇಂದ್ರ ಸರ್ಕಾರ ಕಾನೂನುಗಳನ್ನು ರದ್ದುಪಡಿಸಬೇಕು. ಇಲ್ಲವಾದರೆ ನವೆಂಬರ್ 27ರ ನಂತರ ಸಾವಿರಾರು ರೈತರು ದೆಹಲಿ ಗಡಿ ತಲುಪಲಿದ್ದಾರೆ. ತಮ್ಮ ಟ್ರ್ಯಾಕ್ಟರ್ ಗಳಲ್ಲಿ ದೆಹಲಿಯ ಸುತ್ತ ಬಲವಾದ ಕೋಟೆ ನಿರ್ಮಿಸಲಿದ್ದಾರೆ. ದೆಹಲಿ ಪ್ರವೇಶದ ಮೂರು ಭಾಗದಲ್ಲೂ ಟೆಂಟ್‌ಗಳನ್ನು ನಿರ್ಮಿಸಲಾಗುತ್ತದೆ ಎಂದು ರಾಕೇಶ್ ಟಿಕಾಯತ್ ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ.

ಕಳೆದ 2020ರ ನವೆಂಬರ್ 26ರಿಂದ ನವದೆಹಲಿಯ ಸಿಂಘು ಗಡಿ, ಟಿಕ್ರಿ ಗಡಿ ಮತ್ತು ಘಾಜಿಪುರ್ ಗಡಿ ಪ್ರದೇಶಗಳಲ್ಲಿ ರೈತರು ನಿರಂತರವಾಗಿ ಪ್ರತಿಭಟನೆ ನಡೆಸುತ್ತಿದ್ದಾರೆ. ಪಂಜಾಬ್, ಹರಿಯಾಣ, ಮತ್ತು ಉತ್ತರ ಪ್ರದೇಶದ ಸಾವಿರಾರು ರೈತರು ಕೃಷಿ ಕಾಯ್ದೆಗಳ ವಿರುದ್ಧ ಹೋರಾಟ ಮುಂದುವರಿಸಿದ್ದಾರೆ.

ಕೃಷಿ ಕಾಯ್ದೆಗಳನ್ನು ರದ್ದುಪಡಿಸಬೇಕೆಂದು ರಾಕೇಶ್ ಟಿಕಾಯತ್ ಕಳೆದ ಎರಡು ದಿನಗಳಲ್ಲಿ ಎರಡನೇ ಬಾರಿ ಎಚ್ಚರಿಕೆ ನೀಡಿದ್ದಾರೆ. ದೆಹಲಿ ಗಡಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರನ್ನು ಬಲವಂತವಾಗಿ ಅಲ್ಲಿಂದ ತೆರವುಗೊಳಿಸುವುದಕ್ಕೆ ಪ್ರಯತ್ನಿಸಿದರೆ ಪರಿಣಾಮವನ್ನು ಎದುರಿಸಬೇಕಾಗುತ್ತದೆ. ರೈತರನ್ನು ಗಡಿಯಿಂದ ಬಲವಂತವಾಗಿ ಹೊರಹಾಕುವ ಪ್ರಯತ್ನ ನಡೆದರೆ, ದೇಶಾದ್ಯಂತ ಇರುವ ಸರ್ಕಾರಿ ಕಚೇರಿಗಳನ್ನು ಗಲ್ಲಾ ಮಂಡಿ (ಧಾನ್ಯ ಮಾರುಕಟ್ಟೆ) ಯನ್ನಾಗಿ ಪರಿವರ್ತಿಸಲಾಗುತ್ತದೆ?? ಎಂದಿದ್ದಾರೆ.

ಕೇಂದ್ರ ಸರ್ಕಾರ ಜಾರಿಗೊಳಿಸಲು ಮುಂದಾಗಿರುವ ವಿವಾದಿತ ರೈತರ ಉತ್ಪಾದನೆ ವ್ಯಾಪಾರ ಮತ್ತು ವಾಣಿಜ್ಯ (ಪ್ರಚಾರ ಮತ್ತು ಸೌಲಭ್ಯ) ಕಾಯ್ದೆ, ಬೆಲೆ ಭರವಸೆ ಮತ್ತು ಕೃಷಿ ಸೇವೆಗಳ ಕಾಯ್ದೆ (ಸಬಲೀಕರಣ ಮತ್ತು ಸಂರಕ್ಷಣೆ) ಒಪ್ಪಂದ ಹಾಗೂ ಅಗತ್ಯ ಸರಕುಗಳ (ತಿದ್ದುಪಡಿ) ಕಾಯ್ದೆಗಳು ರೈತರು ಮತ್ತು ಸಾಮಾನ್ಯ ಜನರ ವಿರೋಧಿಯಾಗಿದೆ.

ಇವುಗಳನ್ನು ರದ್ದುಪಡಿಸಬೇಕೆಂದು ರೈತರು ನಿರಂತರವಾಗಿ ಹೋರಾಟ, ಪ್ರತಿಭಟನೆ, ಟ್ರ್ಯಾಕ್ಟರ್ ರ್‍ಯಾಲಿಗಳನ್ನು ನಡೆಸುತ್ತಿದ್ದಾರೆ. ಕೇಂದ್ರ ಸರ್ಕಾರ ಹಾಗೂ ಪ್ರತಿಭಟನಾ ನಿರತ ರೈತ ಸಂಘಟನೆಗಳ ಪ್ರತಿನಿಧಿಗಳ ನಡುವೆ ಈಗಾಗಲೇ 13ಕ್ಕೂ ಹೆಚ್ಚು ಸುತ್ತಿನ ಸಂಧಾನ ಮಾತುಕತೆಗಳನ್ನು ನಡೆಸಲಾಗಿದೆ. ಆದರೆ ಕೇಂದ್ರ ಸರ್ಕಾರ ಕೃಷಿ ಕಾಯ್ದೆಗಳನ್ನು ರದ್ದುಗೊಳಿಸುವುದಕ್ಕೆ ಸಾಧ್ಯವಿಲ್ಲ ಎಂಬ ನಿಲುವಿನಲ್ಲಿದೆ. ಕೇಂದ್ರ ಸರ್ಕಾರದ ಮೊಂಡುತನದ ವಿರುದ್ಧ ರೈತರ ಹೋರಾಟವು ತೀವ್ರಗೊಳುತ್ತಿದೆ. ಇದೇ ನವೆಂಬರ್ 26ರಂದು ರೈತರ ಸುದೀರ್ಘ ಪ್ರತಿಭಟನೆ ಒಂದು ವರ್ಷ ಪೂರೈಸಲಿದೆ.

ಕೃಷಿ ಕಾಯ್ದೆಗಳ ರದ್ದತಿ ಬಗ್ಗೆ ಪ್ರತಿಭಟನೆಯನ್ನು ತೀವ್ರಗೊಳಿಸುವ ಎಚ್ಚರಿಕೆ ನೀಡಲಾಗಿದ್ದು, ರೈತರ ಹೋರಾಟಕ್ಕೆ ದೇಶಾದ್ಯಂತ ಎಲ್ಲೆಡೆ ಬೆಂಬಲ ಭಾರೀ ಪ್ರಮಾಣದಲ್ಲಿ ಹೆಚ್ಚಾಗುತ್ತಿವೆ.

ಆಟೋ ಚಾಲಕರ ಸಂಕಷ್ಟಗಳಿಗೆ ಸ್ಪಂದಿಸದ ಸರ್ಕಾರ: ಎಆರ್‌ಡಿಯು ಆಕ್ರೋಶ

ನಗರದಲ್ಲಿ ಸುಮಾರು 1.75 ಲಕ್ಷ ಆಟೋರಿಕ್ಷಾಗಳು ಸೇರಿ ಎರಡೂವರೆ ಲಕ್ಷ ಚಾಲಕರು ಸಾರ್ವಜನಿಕರಿಗೆ ಸೇವೆ ಸಲ್ಲಿಸುತ್ತಿದ್ದಾರೆ. ಈ ಚಾಲಕ ವರ್ಗಕ್ಕೆ ಇಲ್ಲಿಯವರೆಗೂ ಆಡಳಿತ ನಡೆಸಿದ ಸರ್ಕಾರಗಳು ಯಾವುದೇ ಸೌಲಭ್ಯಗಳನ್ನು ನೀಡುತ್ತಿಲ್ಲ. ಪ್ರಯಾಣಿಕರು ನೀಡುವ ಮೀಟರ್ ದರದಲ್ಲಿ ಆಟೋರಿಕ್ಷಾಗಳ ರಿಪೇರಿ ಖರ್ಚು, ಕುಟುಂಬದ ನಿರ್ವಹಣೆ ಮಾಡಿಕೊಂಡು ಜೀವನ ನಡೆಸುವ ಪರಿಸ್ಥಿತಿ ಇದೆ ಎಂದು ಎಆರ್‌ಡಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿ.ಎನ್.ಶ್ರೀನಿವಾಸ್ ಹೇಳಿದ್ದಾರೆ.

ಬೆಂಗಳೂರು ನಗರದಲ್ಲಿ ಆಟೋರಿಕ್ಷಾಗಳಿಗೆ ಉಪಯೋಗಿಸುವ ಇಂಧನ ಎಲ್‌ಪಿಜಿ ಗ್ಯಾಸ್ ಬೆಲೆ 58 ರೂಪಾಯಿ 18 ಪೈಸೆಯಿಂದ ನವೆಂಬರ್ 1ನೇ ತಾರೀಕಿನಿಂದ ಚಾಲ್ತಿಗೆ ಬರುವಂತೆ 66 ರೂಪಾಯಿಗಳಿಗೆ ಹೆಚ್ಚಳವಾಗಿದೆ. ಇದನ್ನು ಸಿಐಟಿಯು ಸಂಯೋಜಿತ ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್ (ಎಆರ್‌ಡಿಯು) ಸಂಘವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಧನದಾಹಿ ನೀತಿಯನ್ನು ಉಗ್ರವಾಗಿ ಖಂಡಿಸಿದೆ.

ಕೊರೊನಾ ಸಾಂಕ್ರಾಮಿಕದ ಪರಿಣಾಮವಾಗಿ ಆರ್ಥಿಕವಾಗಿ ದಿವಾಳಿಯಾಗಿರುವ ಚಾಲಕರು ಕಳೆದ ಎರಡು ವರ್ಷಗಳು ಜೀವನ ನಡೆಸುವುದೇ ದುಸ್ತರವಾಗಿದೆ. ಇಂತಹ ಸಂದರ್ಭದಲ್ಲಿ ಗಾಯದ ಮೇಲೆ ಬರೆ ಎಳೆದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪದೇ ಪದೇ ಡೀಸೆಲ್, ಪೆಟ್ರೋಲ್, ಅಡುಗೆ ಅನಿಲ, ಆಟೋ ಗ್ಯಾಸ್ ದರಗಳನ್ನು ಪ್ರತಿನಿತ್ಯ ಹೆಚ್ಚಳ ಮಾಡುತ್ತಿವೆ. ಇದರ ಫಲವಾಗಿ ಎಲ್ಲಾ ಅಗತ್ಯ ಆಹಾರ ವಸ್ತುಗಳ ಬೆಲೆ ಹೆಚ್ಚಳದಿಂದಾಗಿ ಚಾಲಕರು ಉತ್ತಮ ಬದುಕು ನಡೆಸುವುದೇ ಕಷ್ಟವಾಗಿದೆ ಎಂದು ಸಿ.ಎನ್.ಶ್ರೀನಿವಾಸ್ ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರಗಳು ಜನಗಳ ಕಷ್ಟ ಸುಖಗಳನ್ನು ಅರಿಯದೆ ದುಬಾರಿ ತೆರಿಗೆ ವಿಧಿಸಿ ಜನಸಾಮಾನ್ಯರ ನಡುವೆ ಚೆಲ್ಲಾಟವಾಡುತ್ತಿವೆ. ಈಗಾಗಲೇ ಆಟೋರಿಕ್ಷಾಗಳ ಬಿಡಿಭಾಗಗಳು ದುಬಾರಿಯಾಗಿದೆ. ಫೈನಾನ್ಸ್ ಕಂಪನಿಗಳ ಬಡ್ಡಿ ಚಕ್ರಬಡ್ಡಿ, ಆರ್‌ಟಿಓ ಶುಲ್ಕಗಳ ಹೆಚ್ಚಳ, ವಾಹನ ವಿಮಾ ಪ್ರೀಮಿಯಂ ದರ ಹೆಚ್ಚಳ, ಪೊಲೀಸರ ದಂಡ ಹೆಚ್ಚಳ, ಅಗತ್ಯ ವಸ್ತುಗಳ ಬೆಲೆ ಹೆಚ್ಚಳ, ಅಡುಗೆ ಅನಿಲ, ನೀರಿನ ಶುಲ್ಕ, ವಿದ್ಯುತ್ ಶುಲ್ಕ, ಅಡುಗೆ ಎಣ್ಣೆಗಳ, ಬೆಲೆ ಏರಿಕೆಯಿಂದಾಗಿ ಕಷ್ಟಪಟ್ಟು ಜೀವನ ನಡೆಸುತ್ತಿರುವ ಚಾಲಕರಿಗೆ ಇನ್ನಷ್ಟು ಗ್ಯಾಸ್ ದರ ಹೆಚ್ಚಳ ಮಾಡಿ ಸಂಕಷ್ಟಕ್ಕೆ ದೂಡಿದ್ದಾರೆ ಎಂದು ಸಂಘಟನೆಯು ತಿಳಿಸಿದೆ.

ಬಿಜೆಪಿ ನೇತೃತ್ವದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜನಸಾಮಾನ್ಯರ ಬಗ್ಗೆ ಕಾಳಜಿ ಇಲ್ಲದಂತೆ ವರ್ತನೆ ಮಾಡುತ್ತಿವೆ.

ಎಆರ್‌ಡಿಯು ವತಿಯಿಂದ ಹಲವು ಬಾರಿ ಪ್ರತಿಭಟನೆ ಮಾಡಿ ಸರ್ಕಾರಕ್ಕೆ ಸಂಬಂಧಪಟ್ಟ ಸಾರಿಗೆ ಪ್ರಾಧಿಕಾರದ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಸಹ ಇಲ್ಲಿಯವರೆಗೂ ಆಟೋರಿಕ್ಷಾಗಳ ಮೀಟರ್ ದರವನ್ನು ಹೆಚ್ಚಳ ಮಾಡಿಲ್ಲ. ಈಗಾಗಲೇ ಆಟೋರಿಕ್ಷಾ ಮೀಟರ್ ದರ ಹೆಚ್ಚಳ ಮಾಡಿ ಒಂಬತ್ತು ವರ್ಷಗಳು ಕಳೆದಿವೆ. ಇಲ್ಲಿಯವರೆಗೂ ಚಾಲಕರು ನಷ್ಟ ಅನುಭವಿಸುತ್ತಿದ್ದಾರೆ. ಕೂಡಲೇ ಸರ್ಕಾರದ ಸಾರಿಗೆ ಸಚಿವ ಶ್ರೀರಾಮುಲು ಅವರು ಗಮನ ಹರಿಸಿ ನೊಂದ ಆಟೋರಿಕ್ಷಾ ಚಾಲಕರಿಗೆ ನೆರವಿಗೆ ಧಾವಿಸಿ ಆಟೋರಿಕ್ಷಾಗಳ ಮೀಟರ್ ದರವನ್ನು ಹೆಚ್ಚಳ ಮಾಡಬೇಕೆಂದು ಎಆರ್‌ಡಿಯು ಸಂಘ ಒತ್ತಾಯಿಸಿದೆ.

ಈ ಭಾಗವಾಗಿ ಬೇಡಿಕೆ ಈಡೇರಿಸದಿದ್ದರೆ ನವೆಂಬರ್ 09 ರಂದು ಬೆಂಗಳೂರು ನಗರದ ಜಿಲ್ಲಾಧಿಕಾರಿ ಕಚೇರಿ ಮುಂದೆ ಉಗ್ರ ಹೋರಾಟ ನಡೆಸಲು ಸಂಘಟನೆ ನಿರ್ಮಾನಿಸಿದೆ.

ದಲಿತರಿಗೆ ವಸತಿ ನೀಡುವ ಬದ್ಧತೆ ಸರ್ಕಾರಕ್ಕಿಲ್ಲ ಪೊಳ್ಳು ಘೋಷಣೆ ಮಾಡಿ ವಂಚಿಸುವ ಹುನ್ನಾರವಾಗಿದೆ

ದಲಿತರಿಗೆ ವಸತಿ, ಭೂಮಿ ನೀಡುವುದಾಗಿ ಬಜೆಟ್ ನಲ್ಲಿ ಘೋಷಣೆ ಮಾಡುವುದು ಸರ್ಕಾರಗಳಿಗೆ ಪರಿಪಾಠವಾಗಿದೆ. ಅದಕ್ಕೆ ಬೇಕಾದ ಹಣವನ್ನು ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ. ಯೋಜನೆಯಲ್ಲಿ ಒದಗಿಸದೆ, ಕುಂಟು ನೆಪಗಳಿಂದ ಯೋಜನೆಗಳು ಸ್ಥಗಿತವಾಗಿರುತ್ತವೆ. ಆದ್ದರಿಂದ ದಲಿತ ಮಾನವ ಅಭಿವೃದ್ಧಿ ಶೂನ್ಯವಾಗಿದೆ.

ಟಿ. ದಾಸರಹಳ್ಳಿ ಯಲ್ಲಿ 1,100 ಬಡ ದಲಿತರಿಗೆ ವಸತಿ ಯೋಜನೆಗೆ ಭೂಮಿ ಪಡೆದಿದ್ದೇವೆಂದು ಕಳೆದ ಹತ್ತು ವರ್ಷಗಳಿಂದ ಹೇಳುತ್ತಲೇ ಬಂದಿವೆ. ದಲಿತರಿಗೆ ಮನೆ ಮಾತ್ರ ಸಿಕ್ಕಿಲ್ಲ. ಆದ್ದರಿಂದ 2020ರಲ್ಲಿ ಆರಂಭವಾದ ರಾಜೀವ್ ಗಾಂಧಿ ವಸತಿ ನಿಗಮ ದಲಿತರಿಗೆ ನೀಡಿದ ವಸತಿಗಳೆಷ್ಟು ಎಂದು ಸರ್ಕಾರ ಶ್ವೇತ ಪತ್ರ ಹೊರಡಿಸಲಿ ಎಂದು ಡಿ.ಹೆಚ್.ಎಸ್. ಆಗ್ರಹಿಸುತ್ತದೆ.

2018 ರ ವಿಧಾನ ಸಭಾ ಚುನಾವಣೆಯ ಸಮಯದಲ್ಲಿ 1.00 ಲಕ್ಷ ದಲಿತರಿಗೆ ಮನೆ ಕಟ್ಟಿಸಿ ಕೊಡುವುದಾಗಿ ಹಿಂದಿನ ವಸತಿ ಸಚಿವರಾದ ಶ್ರೀ. ಎಂ.ಕೃಷ್ಣಪ್ಪರವರು ಆನ್ ಲೈನ್ ನಲ್ಲಿ ಅರ್ಜಿ ಕರೆದು ಆಯ್ಕೆ ಪಟ್ಟಿಯನ್ನು ಬಿಡುಗಡೆ ಮಾಡಿದ್ದರು. ಯಾರಿಗೂ ವಸತಿ ಮಾತ್ರ ಸಿಗಲಿಲ್ಲ. ನಂತರ ಸನ್ಮಾನ್ಯ ಶ್ರೀ.ಯಡೂರಪ್ಪರವರು ಮುಖ್ಯಮಂತ್ರಿ ಗದ್ದುಗೆ ಹಿಡಿದರು. ಆಗ 2 ಲಕ್ಷ ಮನೆ ನಿರ್ಮಿಸಿ ಕೊಡುವುದಾಗಿ ಹೇಳಿದರು. ಇದೇ ಸಂದರ್ಭದಲ್ಲಿ ವಸತಿ ಸಚಿವರಾದ ಶ್ರೀ ಸೋಮಣ್ಣರವರು ಹಿಂದಿನ ಸರ್ಕಾರ ತೆಗೆದುಕೊಂಡ ಎಲ್ಲಾ ಅರ್ಜಿಗಳನ್ನು ರದ್ದುಪಡಿಸಿ ಹೊಸದಾಗಿ ಮತ್ತೆ ಆನ್ಲೈನ್‌ನಲ್ಲಿ ಅರ್ಜಿ ಕರೆಯುವುದಾಗಿ ಹೇಳುತ್ತಿದ್ದಾರೆ.

ಈಗ ಯಲಹಂಕ ಶಾಸಕರಾದ ವಿ. ವಿಶ್ವನಾಥರವರು ಬಿಡಿಎ ಅಧ್ಯಕ್ಷರಾಗಿದ್ದು ಇವರು ಮುಖ್ಯಮಂತ್ರಿ ಯವರಿಗೆ ಪತ್ರ ಬರೆದು ದಲಿತರಿಗೆ ವಸತಿ ನೀಡುವ ಪ್ರಕ್ರಿಯೆಯನ್ನು ರದ್ದು ಮಾಡಬೇಕೆಂದು ಪತ್ರ ಬರೆದರು, 1,100 ವಸತಿ ಬದಲಿ ಗುಂಪು ಯೋಜನೆಯಲ್ಲಿ 2500 ಮನೆ ನೀಡೋಣವೆಂದು ತಿಳಿಸಿದರು.

ಶಾಸಕರ ಮನವಿಗೆ ಸ್ಪಂದಿಸಿದ ಅಂದಿನ ಮುಖ್ಯ ಮಂತ್ರಿ ಯಡೂರಪ್ಪರವರು ಅಧಿಕಾರಿಗಳಿಗೆ ಸೂಚಿಸಿ ಶಾಸಕರು ಹೇಳಿದಂತೆ ಮಾಡಿ ಎಂದು ತಾಕಿತು ಮಾಡಿದರು.

ಬಿಜೆಪಿ ಸಂಸದರಾದ ಶ್ರೀ. ಪಿ. ಶ್ರೀನಿವಾಸ್‌ಪ್ರಸಾದ್‌ರವರು ಆ ಸಂದರ್ಭದಲ್ಲಿ ಮುಖ್ಯಮಂತ್ರಿ ಯೋಜನೆ ಅಡಿಯಲ್ಲಿ ಅನುಷ್ಠಾನಕ್ಕೆ ತರುವುದಕ್ಕೆ ವಿರೋಧ ವ್ಯಕ್ತಪಡಿಸಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳು ದೃಢಪಡಿಸುತ್ತವೆ ಬಿಜೆಪಿ ದಲಿತರಿಗೆ ವಸತಿ ನೀಡುವುದು ಬರಿ ಪೊಳ್ಳು ಘೋಷಣೆಯಾಗಿದೆ, ದಲಿತರನ್ನು ವಂಚಿಸುವುದೆ ಆಗಿದೆ.!

ದಲಿತ ಹಕ್ಕುಗಳ ಸಮಿತಿ (ಡಿ.ಹೆಚ್.ಎಸ್) ಆಗ್ರಹಿಸುತ್ತದೆ, ವಸತಿಗಾಗಿ ಇದುವರೆವಿಗೂ ಬಂದಿರುವ ಅರ್ಜಿಗಳನ್ನು ಜೇಷ್ಠತಾ ಆಧಾರದಲ್ಲಿ ಸಿದ್ದಪಡಿಸಿ ಸಮಯ ಬದ್ಧತೆಯಿಂದ ದಲಿತರಿಗೆ ವಸತಿ ನೀಡಲು ಕ್ರಮ ಜರುಗಿಸಬೇಕು. ಪದೇ ಪದೇ ಅರ್ಜಿ ಹಾಕುವ ಪದ್ಧತಿ ಕೈಬಿಡಬೇಕು. ವಸತಿ ಹೀನರಿಂದ ಅರ್ಜಿಗಳನ್ನು ಆನ್‌ಲೈನ್ ಮೂಲಕ ನಿರಂತರವಾಗಿ ಸ್ವೀಕರಿಸಬೇಕು. ಎಸ್.ಸಿ.ಎಸ್.ಪಿ./ಟಿ.ಎಸ್.ಪಿ ಮೂಲಕ ಅದಕ್ಕೆ ಬೇಕಾದಷ್ಟು ಹಣವನ್ನು ಕಾಯ್ದೆ ಅನ್ವಯ ಬಳಸಬೇಕು. ಕಾಲಹರಣ ಮಾಡಿ ದಲಿತರಿಗೆ ಅನ್ಯಾಯವಾಗುವುದನ್ನು ದಲಿತರು ಸಹಿಸುವುದಿಲ್ಲ, ಇದರ ವಿರುದ್ಧ ಬೃಹತ್ ಹೋರಾಟ ನಡೆಸಬೇಕಾಗುತ್ತದೆ ಎಚ್ಚರಿಸಿದೆ.

ನೂರು ಕೋಟಿ ಲಸಿಕೆ ಸಾಧನೆಯ ಹಿಂದೆ ಮುಂದೆ

‘ಇದು ಸಂಭ್ರಮಿಸುವ ಸಮಯ ಹೌದು! ಮುಂದಿನ ಸವಾಲಿಗೆ ತಯಾರಿಯ ಸಮಯವೂ ಹೌದು!!’

ಭಾರತದಂತಹ ದೊಡ್ಡ ಸಂಕೀರ್ಣ ದೇಶದಲ್ಲಿ 100 ಕೋಟಿ ಲಸಿಕೆಗಳನ್ನು ಪೂರೈಸಿರುವುದು ಒಂದು ಸಾಧನೆ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಅದರ ಕುರಿತು ಈ ‘ಸಾಧನೆ’ ಮುಂದಿರುವ ಅಗಾಧ ಸವಾಲನ್ನು ಎದುರಿಸಲು ತಯಾರಿಗೆ ಆತ್ಮಾವಲೋಕನಕ್ಕೆ ದಾರಿ ಮಾಡಿಕೊಡಬೇಕು. ಆ ಸವಾಲುಗಳೇನು ಎಂದು ಈ ಲೇಖನ ವಿವರಿಸುತ್ತದೆ. ಈ ಸವಾಲುಗಳು ಸ್ಥೂಲವಾಗಿ ಹೀಗಿವೆ: ನಾವು ಕೇವಲ ಶೇ 53ರಷ್ಟು ಗುರಿ ಸಾಧಿಸಿದ್ದೇವೆ. ಪ್ರಸ್ತುತ ದೈನಂದಿನ ‘ರನ್ ರೇಟ್’ ಆಗಸ್ಟ್‌ನಲ್ಲಿ ಸಾಧಿಸಿದ ದರಗಳಿಗಿಂತ ಕಡಿಮೆಯಾಗಿದೆ. ಪ್ರಸ್ತುತ ದರದಲ್ಲಿ ಲಸಿಕೆಯನ್ನು ನೀಡಿದರೆ ಎಲ್ಲಾ ವಯಸ್ಕರಿಗೆ ಏಪ್ರಿಲ್ 2022 ರ ವೇಳೆಗೆ ಮಾತ್ರ ಸಂಪೂರ್ಣವಾಗಿ ಲಸಿಕೆಯನ್ನು ನೀಡಲು ಸಾಧ್ಯ. ವ್ಯಾಕ್ಸೀನ್ ತೆಗೆದುಕೊಳ್ಳಬೇಕಾದ ಜನಸಂಖ್ಯೆಯ ವಿಭಾಗದ ಕೊನೆಯ 20–30 ಪ್ರತಿಶತ ಜನರನ್ನು ತಲುಪುವುದು ಮತ್ತು ಮನವರಿಕೆ ಮಾಡುವುದು ಕಷ್ಟ. ಭಾರತದ ‘ಟ್ರಂಪ್ ಕಾರ್ಡ್’ ಎಂದು ಹೇಳಲಾದ ಕೋವಾಕ್ಸಿನ್ ಫ್ಲಾಪ್ ಶೋ ಆಗಿದೆ. ಕೋವಿಡ್ ಶೀಲ್ಟ್ ಪೂರೈಕೆಯು ಸಹ ಖುಖ ಯ ಘೋಷಿತ ಸಾಮರ್ಥ್ಯದ ಕನಿಷ್ಠ ಮಿತಿಯ ಮೂರನೇ ಎರಡರಷ್ಟು ಮಾತ್ರವಿದೆ. ವಿಶ್ವಸಂಸ್ಥೆಯ ಕೊವ್ಯಾಕ್ಸ್ ಕಾರ್ಯಕ್ರಮಕ್ಕೆ ರಫ್ತು ಬಾಧ್ಯತೆಗಳಿಂದಾಗಿ SII ಪೂರೈಕೆಯಲ್ಲೂ ತೊಡಕುಗಳಾಗಬಹುದು. ಶಾಲೆಗಳು ಪುನರಾರಂಭಗೊಂಡ ನಂತರ ಆ ಮಕ್ಕಳ ಮನೆಗಳಲ್ಲಿನ ವಯಸ್ಸಾದವರಿಗೆ ದುರ್ಬಲರಿಗೆ ಆದ್ಯತೆ ಹಾಗೂ ‘ಉಪ-ರಾಷ್ಟ್ರೀಯ ಅಲೆ’’ಯ ಪ್ರದೇಶಗಳಿಗೆ ಆದ್ಯತೆ ಮುಂತಾದ ಆದ್ಯತೆಗಳಲ್ಲಿನ ಸೂಕ್ಷ್ಮ ಮತ್ತು ತುರ್ತಿನ ಬದಲಾವಣೆಗಳನ್ನು ನಿಭಾಯಿಸುವ ದಕ್ಷತೆ ಲಸಿಕಾ ಕಾರ್ಯಕ್ರಮಕ್ಕೆ ಇದ್ದಂತೆ ಕಾಣುವುದಿಲ್ಲ. ಈ ವರೆಗಿನ ವೈಫಲ್ಯಗಳಿಂದ ಅದು ಪಾಠವನ್ನೂ ಕಲಿತಂತಿಲ್ಲ. ರಾಜಕೀಯ ಪ್ರಚಾರಕ್ಕೆ ಆದ್ಯತೆ ಮುಂದುವರೆದಿದೆ ಎಂದು ಲೇಖನ ವಾದಿಸುತ್ತದೆ.

ಮೂಲ : **ವಿ ಶ್ರೀಧರ್** ಕೃಪೆ : ದಿ ಫೆಡೆರಲ್
ಅನುವಾದ : **ಶೃಂಶಾನಾ**

ಭಾರತದಷ್ಟು ವಿಶಾಲವಾದ ಮತ್ತು ಸಂಕೀರ್ಣವಾದ ದೇಶದಲ್ಲಿ 100 ಕೋಟಿ ಲಸಿಕೆಗಳನ್ನು ಪೂರೈಸಿರುವುದು ಒಂದು ಸಾಧನೆ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಅದರ ಕುರಿತು ಪ್ರಧಾನಿ ನರೇಂದ್ರ ಮೋದಿ ಮತ್ತು ಅವರ ಅಭಿಮಾನಿಗಳಂತೆ ಕೊಚ್ಚಿಕೊಳ್ಳುವ ಬದಲು, ಈ ‘ಸಾಧನೆ’ ಆತ್ಮಾವಲೋಕನಕ್ಕೆ ದಾರಿ ಮಾಡಿಕೊಡಬೇಕು.

ಈ ವರ್ಷದ ಆರಂಭದಲ್ಲಿ ಕೊವಿಡ್–19 ಮಹಾಸಾಂಕ್ರಾಮಿಕದ ಬೃಹತ್ ಎರಡನೇ ಅಲೆಯ ಸ್ವಲ್ಪವೇ ಮೊದಲು, ಸರ್ಕಾರದೊಳಗಿನ ವಿಜಯೋತ್ಸವವನ್ನು ನೆನಪಿಸಿಕೊಳ್ಳಬೇಕು.

ಮೊದಲನೆಯದಾಗಿ, ಬರಿಯ ಸಂಖ್ಯೆಗಳು ನಮಗೆ ಸಂಪೂರ್ಣ ಚಿತ್ರಣ ನೀಡುವುದಿಲ್ಲ. ಭಾರತವು 100 ಕೋಟಿ (1 ಬಿಲಿಯನ್) ಲಸಿಕೆಗಳನ್ನು ವಿತರಿಸಿದೆ, ಆದರೆ ಇಡೀ ವಯಸ್ಕ ಜನಸಂಖ್ಯೆಗೆ ಎರಡು ಬಾರಿ ಲಸಿಕೆ ಹಾಕಲು ನಮಗೆ 187.8 ಕೋಟಿ ಡೋಸ್‌ಗಳ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ನಾವು ಕೇವಲ ಶೇ 53ರಷ್ಟು ಗುರಿ ಸಾಧಿಸಿದ್ದೇವೆ. ಜನಸಂಖ್ಯೆಯ ಸುಮಾರು 75 ಪ್ರತಿಶತದಷ್ಟು ಜನರು ಒಂದು ಡೋಸ್‌ನೊಂದಿಗೆ ಲಸಿಕೆಯನ್ನು ಹೊಂದಿದ್ದಾರೆ; ಮತ್ತು ಶೇ.31 ರಷ್ಟು ಜನರಿಗೆ ಸಂಪೂರ್ಣವಾಗಿ ಲಸಿಕೆ ಹಾಕಲಾಗಿದೆ. ಇದರರ್ಥ ನಾವು ಇನ್ನೂ ಬಹಳ ದೂರ ಸಾಗಬೇಕಾಗಿದೆ.

ತಿಂಗಳು	ಪ್ರತಿದಿನ ಸರಾಸರಿ (ಲಕ್ಷಗಳಲ್ಲಿ)	ತಿಂಗಳ ಹೆಚ್ಚಳ (ಶೇಕಡಾ ಗಳಲ್ಲಿ)
ಜನವರಿ 2021	2.1	
ಫೆಬ್ರುವರಿ 2021	4.0	95.61
ಮಾರ್ಚ್ 2021	18.3	381.29
ಎಪ್ರಿಲ್ 2021	29.4	60.47
ಮೇ 2021	19.3	–34.31
ಜೂನ್ (1–21)	39.6	59.60
ಜುಲೈ 2021	42.8	8.08
ಅಗಸ್ಟ್ 2021	61.3	43.22
ಸೆಪ್ಟೆಂಬರ್ 2021	78.8	28.55
ಅಕ್ಟೋಬರ್ (1–20)	55.5	–29.57

ದೈನಿಕ ಸರಾಸರಿ ವ್ಯಾಕ್ಸಿನೇಶನ್ (ಮೂಲ : CoWin)

ಮೋದಿ "ಹುಟ್ಟುಹಬ್ಬದ ಪರಿಣಾಮ"

ಎರಡನೆಯದಾಗಿ, ಕಳೆದ ಕೆಲವು ತಿಂಗಳುಗಳಲ್ಲಿ ವ್ಯಾಕ್ಸಿನೇಷನ್ ಪ್ರಮಾಣ ಏರಿದ್ದರೂ, ವಿಶೇಷವಾಗಿ ಮೇ ತಿಂಗಳಲ್ಲಿ ಈ ಪ್ರಮಾಣ ಕುಸಿದಾಗಿನಿಂದ, ಗಂಭೀರ ಅಸಮತೋಲನಗಳು ಮತ್ತು ಲಸಿಕೆ ವಿತರಣಾ ಸಂಖ್ಯೆಯಲ್ಲಿನ ಏರುಪೇರು ಆತಂಕಕ್ಕೆ ಕಾರಣವಾಗಿದೆ. ಉದಾಹರಣೆಗೆ, ಕೆಳಗಿನ ಚಾರ್ಟ್ ವಿವರಿಸಿದಂತೆ, ಭಾರತೀಯ ಲಸಿಕೆ ಅಭಿಯಾನಕ್ಕೆ ಸೆಪ್ಟೆಂಬರ್ ಉತ್ತಮ ತಿಂಗಳಾಗಿತ್ತು. ಸೆಪ್ಟೆಂಬರ್ 17 ರಂದು, ಮೋದಿಯವರ ಜನ್ಮದಿನದಂದು, 2.67 ಕೋಟಿ ಡೋಸ್‌ಗಳನ್ನು ವಿತರಿಸಲಾಯಿತು. ಆದರೆ ನಾವು "ಮೋದಿ ಹುಟ್ಟುಹಬ್ಬದ ಪರಿಣಾಮ" ವನ್ನು ತೆಗೆದುಹಾಕಿದರೆ, ಸೆಪ್ಟೆಂಬರ್‌ನ



ಕೃಪೆ: ಸತೀಶ್ ಆಚಾರ್ಯ



ಒಟ್ಟಾರೆ ದರವು ಸಾಧಾರಣವಾಗಿಯೇ ಕಂಡುಬರುತ್ತದೆ.

ವಾಸ್ತವವಾಗಿ, ನಾವು ಸೆಪ್ಟೆಂಬರ್‌ನ 30 ದಿನಗಳನ್ನು ಮೂರು ಸಮಾನ ಭಾಗಗಳಾಗಿ ವಿಭಜಿಸಿದರೆ, ಮೂರು ಹಂತಗಳಲ್ಲಿ ಸರಾಸರಿ ದೈನಂದಿನ ದರಗಳು ಹೀಗಿವೆ: ದಿನಕ್ಕೆ 76.7, 87.9 ಮತ್ತು 71.9 ಲಕ್ಷ ಡೋಸ್‌ಗಳು.

ಸೆಪ್ಟೆಂಬರ್ ಮಧ್ಯದಲ್ಲಿನ ಭಾರೀ ಸಾಂದ್ರತೆಯು "ಮೋದಿ ಹುಟ್ಟುಹಬ್ಬದ ಪರಿಣಾಮ" ಎಂದು ಹೇಳಬಹುದು.

ಹಿಂದಿನ ಸೀಮಿತ ಅವಧಿಯ ಉಬ್ಬರವೂ ಸಹ ಸರ್ಕಾರದ ಇಮೇಜ್ ಅನ್ನು ಹೆಚ್ಚಿಸುವ ಉದ್ದೇಶಪೂರ್ವಕ ಮತ್ತು ಪ್ರಜ್ಞಾಪೂರ್ವಕ ಪ್ರಯತ್ನದ ಕಾರಣದಿಂದಾಗಿರಬಹುದು.

ಹೆಚ್ಚು ಆತಂಕಕಾರಿಯಾದ ಅಂಶವೆಂದರೆ, ಸೆಪ್ಟೆಂಬರ್‌ನಲ್ಲಿನ ದರಗಳಿಗೆ ಹೋಲಿಸಿದರೆ ಅಕ್ಟೋಬರ್‌ನ ಮೊದಲ ಮೂರು ವಾರಗಳಲ್ಲಿ ಸರಾಸರಿ ದೈನಂದಿನ ದರಗಳು ಸುಮಾರು 30 ಪ್ರತಿಶತದಷ್ಟು ಕುಸಿದಿದೆ.

ವಾಸ್ತವವಾಗಿ, ಕ್ರಿಕೆಟ್ ಪರಿಭಾಷೆಯಲ್ಲಿ ಹೇಳುವುದಾದರೆ ಪ್ರಸ್ತುತ ದೈನಂದಿನ ‘ರನ್ ರೇಟ್’ ಆಗಸ್ಟ್‌ನಲ್ಲಿ ಸಾಧಿಸಿದ ದರಗಳಿಗಿಂತ ಕಡಿಮೆಯಾಗಿದೆ. ಲಸಿಕೆ ಸಂಖ್ಯೆಗಳ ಏರುಪೇರು, ಭಾರತೀಯ ವಯಸ್ಕ ಜನಸಂಖ್ಯೆಗೆ ಅಗತ್ಯವಿರುವ ಸುಮಾರು ಅರ್ಧದಷ್ಟು ಲಸಿಕೆಗಳನ್ನು ಮಾತ್ರ ವಿತರಿಸಲಾಗಿದೆ ಎಂಬ ಮೊದಲ ಸಮಸ್ಯೆಯೊಂದಿಗೆ ಸೇರಿಕೊಂಡರೆ– ಇನ್ನೂ ಮಾಡಬೇಕಾದ ಕೆಲಸವು ಬಹಳ ಇದೆ ಎಂದು ಸೂಚಿಸುತ್ತದೆ.

ಸರಳವಾಗಿ ಹೇಳುವುದಾದರೆ, ಸಂಖ್ಯೆಗಳ ಆಧಾರದಲ್ಲಿ, ಇನ್ನೂ 87.8 ಕೋಟಿ ಡೋಸ್ ಅನ್ನು ಪೂರೈಸಬೇಕಾಗಿದೆ. ಅಕ್ಟೋಬರ್‌ನಲ್ಲಿನ ಪ್ರಸ್ತುತ ದರದಲ್ಲಿ (ದಿನಕ್ಕೆ 55.5 ಕೋಟಿ ಡೋಸ್‌ಗಳು), ಉಳಿದ ಡೋಸ್‌ಗಳನ್ನು ವಿತರಿಸಲು ಸುಮಾರು 160 ದಿನಗಳು ಬೇಕಾಗಬಹುದು. ಇದರರ್ಥ ಭಾರತವು ಪ್ರಸ್ತುತ ದರದಲ್ಲಿ ಲಸಿಕೆಯನ್ನು ನೀಡಿದರೆ ಎಲ್ಲಾ ವಯಸ್ಕರಿಗೆ ಏಪ್ರಿಲ್ 2022 ರ ವೇಳೆಗೆ ಮಾತ್ರ ಸಂಪೂರ್ಣವಾಗಿ ಲಸಿಕೆಯನ್ನು ನೀಡಲು ಸಾಧ್ಯ.

ಸುಲಭಸಾಧ್ಯ ಗುರಿಗಳನ್ನು ಈಗಾಗಲೇ ಸಾಧಿಸಲಾಗಿದೆ

ಆದರೆ ಹಲವಾರು ಇತರ ಅಂಶಗಳು ಈ ಚಿತ್ರವನ್ನು ಇನ್ನಷ್ಟು ಸಂಕೀರ್ಣಗೊಳಿಸುತ್ತವೆ. ಸುಲಭಸಾಧ್ಯ ಗುರಿಗಳನ್ನು ಈಗಾಗಲೇ ಸಾಧಿಸಲಾಗಿದೆ ಎಂಬುದು ಸ್ಪಷ್ಟವಾಗಿದೆ; ಲಸಿಕೆಗಳನ್ನು ವಿತರಿಸುವಲ್ಲಿ ಹೆಚ್ಚಿನ ಪ್ರಗತಿಯು, ವಿಶೇಷವಾಗಿ ಎರಡನೇ ಡೋಸ್ ವಿತರಣೆಯು, ಹೆಚ್ಚು ಹೆಚ್ಚು ಕಷ್ಟಕರವಾಗಿರುತ್ತದೆ. ಭಾರತದ ಅಗ್ರಗಣ್ಯ ಮತ್ತು ಗೌರವಾನ್ವಿತ ಲಸಿಕೆ ತಜ್ಞ ಡಾ.ಗಗನ್‌ದೀಪ್ ಕಾಂಗ್ ಅವರು ಇತ್ತೀಚಿನ ಒಂದು ಸಭೆಯಲ್ಲಿ ಹೇಳಿರುವಂತೆ, ವ್ಯಾಕ್ಸೀನ್ ತೆಗೆದುಕೊಳ್ಳಬೇಕಾದ ಜನಸಂಖ್ಯೆಯ ವಿಭಾಗದ ಕೊನೆಯ 20–30 ಪ್ರತಿಶತ ಜನರನ್ನು ತಲುಪುವುದು ಮತ್ತು ಮನವರಿಕೆ ಮಾಡುವುದು ಕಷ್ಟ. "ಇದು ಸಂಭ್ರಮಿಸುವ ಸಮಯ ಹೌದು, ಆದರೆ ಮುಂದೆ ಏನಾಗಲಿದೆಯೋ ಅದಕ್ಕೆ ತಯಾರಿ ಮಾಡುವ ಸಮಯವೂ ಆಗಿದೆ" ಎಂದು ಡಾ ಕಾಂಗ್ ಹೇಳಿದ್ದಾರೆ.

ಕಾಂಗ್‌ನಂತಹ ಕೆಲವು ತಜ್ಞರು ಈಗಾಗಲೇ ಸಾಂಕ್ರಾಮಿಕ ರೋಗವೆಂದು ನಿರೂಪಿಸಿರುವ ಈ ಸಾಂಕ್ರಾಮಿಕದ ಸ್ವರೂಪವು ಭಾರತದ ಲಸಿಕೆ ಆಂದೋಲನದ ಮೇಲೆ ಪರಿಣಾಮಗಳನ್ನು ಬೀರಬಹುದು. ಖ್ಯಾತ ಸಾಂಕ್ರಾಮಿಕ ರೋಗಶಾಸ್ತಜ್ಞ ಡಾ.ಚಂದ್ರಕಾಂತ ಲಹರಿಯವರು ‘ದಿ ಫೆಡರಲ್’ ಆಯೋಜಿಸಿದ ಇತ್ತೀಚಿನ ಕಾರ್ಯಕ್ರಮ ದಲ್ಲಿ ಹೇಳಿದಂತೆ, ಹೆಚ್ಚಿದ "ನೈಸರ್ಗಿಕ" ರೋಗನಿರೋಧಕ ಶಕ್ತಿ ಮತ್ತು ಲಸಿಕೆ ಮೂಲಕ ನೀಡಲಾದ ಕೃತಕ ಪ್ರತಿರಕ್ಷೆಯ ಸಂಯೋಜನೆಗಳಿಂದಾಗಿ, ಭಾರತದಲ್ಲಿ ಮೊದಲ ಎರಡು ಅಲೆಗಳಂತೆ (2020 ಮತ್ತು 2021) ಹೊಸ ರಾಷ್ಟ್ರವ್ಯಾಪಿ ಅಲೆಯ ಸಂಭವನೀಯತೆ ಕಡಿಮೆ ಎಂದು ಸೂಚಿಸುತ್ತದೆ. ಇದು ಆಶಾದಾಯಕವೆಂದು ತೋರುತ್ತದೆಯಾದರೂ, ದೇಶದ ನಿರ್ದಿಷ್ಟ ಪಾಕೆಟ್‌ಗಳಲ್ಲಿ ಕೇಂದ್ರೀಕೃತವಾಗಿರುವ "ಉಪ–ರಾಷ್ಟ್ರೀಯ ಅಲೆಗಳ" ಸಾಧ್ಯತೆಯನ್ನು ಇದು ತಳ್ಳಿಹಾಕುವುದಿಲ್ಲ ಎಂದು ಡಾ ಲಹರಿಯಾ ಎಚ್ಚರಿಸಿದ್ದಾರೆ. ಇದು ಒಂದು ಪ್ರಮುಖ ಸಮಸ್ಯೆಯನ್ನು ಹುಟ್ಟುಹಾಕುತ್ತದೆ: ಭಾರತೀಯ ಲಸಿಕೆ ಆಂದೋಲನವನ್ನು ಹೆಚ್ಚಾಗಿ ಕೇಂದ್ರ ಸರ್ಕಾರವು ನಿರ್ದೇಶಿಸಿದೆ ಮತ್ತು ನಡೆಸುತ್ತಿದೆ – ಆದರೆ ಹೆಚ್ಚಾಗಿ ರಾಜ್ಯಗಳು ಜಾರಿಗೆ ತಂದಿದೆ? ಮುಂದೆ ಹೆಚ್ಚು ಸ್ಥಳೀಯವಾಗಿ ಹೆಚ್ಚುವ ಸೋಂಕುಗಳ ಅಲೆಯಲ್ಲಿ ಬಲಿಯಾಗುವವರಿಗೆ ತ್ವರಿತವಾದ ಪರಿಹಾರ ಒದಗಿಸಲು ಅನುವು ಮಾಡಿಕೊಡುತ್ತದೆಯೇ ಎಂಬ ಪ್ರಶ್ನೆ ಮೂಡುತ್ತಿದೆ.

ಲಸಿಕೆ ಪೂರೈಕೆಯಲ್ಲಿ ಅಸಮಾನತೆ

ಇಂತಹ ಆತಂಕಗಳು ಆಧಾರರಹಿತವಲ್ಲ. ಉತ್ತರ ಪ್ರದೇಶ, ಬಿಹಾರ ಮತ್ತು ಜಾರ್ಖಂಡ್‌ನಂತಹ ಬಡ ರಾಜ್ಯಗಳು ಲಸಿಕೆ ನೀಡುವಲ್ಲಿ ಗಮನಾರ್ಹವಾಗಿ ಹಿಂದುಳಿದಿವೆ ಎಂದು ಭಾರತೀಯ ಲಸಿಕೆ ಆಂದೋಲನದ ವಿಶ್ಲೇಷಣೆಯು ತೋರಿಸುತ್ತದೆ. ವಾಸ್ತವವಾಗಿ, ತಮಿಳುನಾಡಿನಂತಹ ತುಲನಾತ್ಮಕವಾಗಿ ಹೆಚ್ಚು ಮುಂದುವರಿದ (ಒಟ್ಟು ರಾಜ್ಯದ ಆಂತರಿಕ ಉತ್ಪನ್ನದ ವಿಷಯದಲ್ಲಿ ಮಾತ್ರವಲ್ಲದೆ ಹೆಚ್ಚು ಸುಧಾರಿತ ಆರೋಗ್ಯ ಸೇವೆಗಳ ವಿತರಣಾ ಮೂಲಸೌಕರ್ಯಗಳ ವಿಷಯದಲ್ಲಿಯೂ ಸಹ) ರಾಜ್ಯವೂ ಸಹ, ಹಲವಾರು ಇತರ ಬಡ ರಾಜ್ಯಗಳಿಗಿಂತ ಹಿಂದುಳಿದಿದೆ. ಸ್ಥಳೀಯ "ಉಪ–ರಾಷ್ಟ್ರೀಯ ಅಲೆಗಳು" ಸಂಭವಿಸಿದಾಗ ಕೆಲವು ಭೌಗೋಳಿಕ ಪ್ರದೇಶಗಳು ಹೆಚ್ಚಿನ ಅಪಾಯದಲ್ಲಿದೆ ಎಂದು ಇದು ಸೂಚಿಸುತ್ತದೆ.

ಜನಸಂಖ್ಯೆಯ ನಿರ್ದಿಷ್ಟವಾಗಿ ದುರ್ಬಲ ವಿಭಾಗಗಳ ಕಡೆ ಗಮನ ಕೊಡುವ ಅಗತ್ಯವಿದೆ. ಉದಾಹರಣೆಗೆ, ಶಾಲೆಗಳ ದೀರ್ಘಾವಧಿಯ ಮುಚ್ಚುವಿಕೆಯಿಂದ ಭಾರತದ ಮಕ್ಕಳ ಮೇಲೆ ಹೇರಿದ ಅನ್ಯಾಯವು ಇನ್ನು ಮುಂದೆ ಸಮರ್ಥನೀಯವಲ್ಲ. ಡಾ ಲಹರಿಯಾ ಮತ್ತು ಇತರರು ಶಾಲೆಗಳನ್ನು ತೆರೆಯಬೇಕೆಂದು ಬಲವಾಗಿ ಪ್ರತಿಪಾದಿಸುತ್ತಿದ್ದಾರೆ. ಏಕೆಂದರೆ ವೈಜ್ಞಾನಿಕ ಪುರಾವೆಗಳು ನಿರ್ಣಾಯಕವಾಗಿ ಮತ್ತು ಸ್ಪಷ್ಟವಾಗಿ ಮಕ್ಕಳಿಗೆ ಸೋಂಕಿನ ಅಪಾಯ ಬಹಳ ಕಡಿಮೆ ಎಂದು ತೋರಿಸಿವೆ. ಆದಾಗ್ಯೂ, ಶಾಲೆಗಳು ಪುನರಾರಂಭಗೊಂಡ ನಂತರ ಮಕ್ಕಳು ವೈರಸ್ ಅನ್ನು ಮನೆಗಳಿಗೆ ಒಯ್ಯಬಹುದು ಎಂಬ ಅಂಶವು ವಯಸ್ಸಾದವರಿಗೆ ಮತ್ತು ಮನೆಯಲ್ಲಿ ದುರ್ಬಲವಾಗಿರುವವರಿಗೆ ಆದ್ಯತೆಯ ಆಧಾರದ ಮೇಲೆ ಲಸಿಕೆ ಹಾಕುವ ಅಗತ್ಯವಿದೆ ಎಂದು ಸೂಚಿಸುತ್ತದೆ.

ಇದಲ್ಲದೆ, ಮಕ್ಕಳ ಜನಸಂಖ್ಯೆಯ ಉಪ–ವರ್ಗದೊಳಗೆ ಸಹ, ಇತರ ಆರೋಗ್ಯ ಸಮಸ್ಯೆಗಳನ್ನು (ಡಯಬೀಟಿಸ್, ಉಸಿರಾಟದಲ್ಲಿ ತೊಂದರೆ ಇತ್ಯಾದಿ) ಹೊಂದಿರುವ ಮಕ್ಕಳಿಗೆ ಆದ್ಯತೆಯ ಆಧಾರದ ಮೇಲೆ ಲಸಿಕೆಯನ್ನು ನೀಡಬೇಕಾಗಬಹುದು ಎಂದು ಡಾ ಕಾಂಗ್‌ನಂತಹ ತಜ್ಞರು ಗಮನಸೆಳೆದಿದ್ದಾರೆ. ಆದರೆ ಉದ್ದೇಶಿತ ಜನಸಂಖ್ಯೆಯ ಆದ್ಯತೆಗಳಲ್ಲಿ ಈ ಸೂಕ್ಷ್ಮ ವ್ಯತ್ಯಾಸಗಳಿಗೆ ಪ್ರತಿಕ್ರಿಯಿಸುವ ಸಾಮರ್ಥ್ಯವನ್ನು ಭಾರತೀಯ ಲಸಿಕೆ ಆಂದೋಲನ ಹೊಂದಿದೆ ಎಂಬುದಕ್ಕೆ ಯಾವುದೇ ಪುರಾವೆಗಳಿಲ್ಲ.

ಈ ಚಿತ್ರಣವು ಹಲವಾರು ಅಸಂಭಾವ್ಯಗಳಿಂದ ಮತ್ತಷ್ಟು ಜಟಿಲವಾಗಿದೆ. ಅಸ್ತಿತ್ವದಲ್ಲಿರುವ ಲಸಿಕೆಗಳಿಂದ ನೀಡಲಾಗುವ ರೋಗನಿರೋಧಕ ಶಕ್ತಿಯ ಪ್ರಮಾಣ ಮತ್ತು ಅವಧಿಯು ಪ್ರಮುಖ ಅಜ್ಞಾತಗಳಲ್ಲಿ ಒಂದಾಗಿದೆ. ಕೊವಿಡ್–19 ಮಹಾಸೋಂಕಿನ ಅತ್ಯಂತ ಗಂಭೀರ ಪರಿಣಾಮಗಳಿಂದ ಲಸಿಕೆಗಳು ರಕ್ಷಣೆ ನೀಡುತ್ತವೆ ಎಂದು ಎಲ್ಲಾ ಪುರಾವೆಗಳು ಇನ್ನೂ ಸೂಚಿಸುತ್ತವೆಯಾದರೂ, ರೋಗನಿರೋಧಕ ಶಕ್ತಿ ಎಷ್ಟು ಕಾಲ ಉಳಿಯುತ್ತದೆ ಎಂಬುದಕ್ಕೆ ಪುರಾವೆಗಳು ಇನ್ನೂ ನಿರ್ಣಾಯಕವಾಗಿಲ್ಲ.

ಸಂಪೂರ್ಣವಾಗಿ ಲಸಿಕೆ ಹಾಕಿದ ವ್ಯಕ್ತಿಯು ಕನಿಷ್ಠ ಒಂದು ವರ್ಷದವರೆಗೆ ಸುರಕ್ಷಿತವಾಗಿರುತ್ತಾನೆ ಎಂದು ನಿರೀಕ್ಷಿಸಬಹುದು ಎಂದು ಡಾ ಲಹರಿಯಂತಹ ತಜ್ಞರು ನಮಗೆ ತಿಳಿಸುವುದು ಸಾಂತ್ವನ ಕೊಡಬಹುದಾಗಿದ್ದರೂ, ಲಸಿಕೆ ಉತ್ಪಾದನೆಯ ಪೂರೈಕೆಯ ಕುರಿತ ಆತಂಕಗಳನ್ನು ಕಡೆಗಣಿಸುವಂತಿಲ್ಲ.

ಮೊದಲನೆಯದಾಗಿ, ಜನಸಂಖ್ಯೆಯ ಗಮನಾರ್ಹ ಭಾಗಕ್ಕೆ ಎರಡು ಡೋಸುಗಳಿಂದ ದೊರೆಯುವ ಸಂಪೂರ್ಣ ರಕ್ಷಣೆ ಇನ್ನೂ ಸ್ವಲ್ಪ ದೂರದ ಮಾತು. ಎರಡನೆಯದಾಗಿ, ಅಕ್ಟೋಬರ್ 22 ರ ವೇಳೆಗೆ ಸುಮಾರು 29.2 ಕೋಟಿ ಜನರು ಎರಡನೇ ಡೋಸ್

ಪುಟ 14 ಕ್ಕೆ



ಪಶ್ಚಿಮ ಏಷ್ಯಾಕ್ಕೆ ಕ್ವಾಡ್: ಸೋಲುವ ಆಟದಲ್ಲಿ ಭಾರತ

ಚೀನಾದ ವಿರುದ್ಧ ಒಂದು ಸುಸಂಗತ ಜಾಗತಿಕ ವ್ಯೂಹವನ್ನು ಹೇಗಾದರೂ ಕಲೆಹಾಕಲು ಬೈಡೆನ್ ಆಡಳಿತ ಹತಾಶ ಪ್ರಯತ್ನ ನಡೆಸುತ್ತಿರುವಾಗ, ಈ ದುಸ್ಸಾಹಸದಲ್ಲಿ ಒಂದು ಕಿರು ಪಾಲುದಾರ ಆಗಲು ಭಾರತ ಬಯಸುತ್ತಿದೆಯೇ? ಕ್ವಾಡ್, ಔಕುಸ್ ಮತ್ತು ಆಫ್ಘಾನಿಸ್ತಾನ ಪತನಗೊಳ್ಳುವ ಮುನ್ನ ಘೋಷಣೆಯಾದ ಮಧ್ಯ ಏಷ್ಯಾದ ಕುರಿತಂತೆ ನಾಲ್ಕು ದೇಶಗಳ(ಅಮೆರಿಕ, ಪಾಕಿಸ್ತಾನ, ಅಫಘಾನಿಸ್ತಾನ ಮತ್ತು ಉಝ್ಬೇಕಿಸ್ತಾನ) ಕೂಟ ರಚನೆಯ ಕೈಗೂಡದ ಪ್ರಕಟಣೆ –ಇವೆಲ್ಲವೂ ಚೀನಾವನ್ನು ಕಟ್ಟಿ ಹಾಕಲು ಮತ್ತು ಪ್ರತ್ಯೇಕಗೊಳಿಸಲು ಅಮೆರಿಕ ಹತಾಶೆಯಿಂದ ಓಡಾಡುತ್ತಿದೆ ಎನ್ನುವುದರ ದ್ಯೋತಕವಾಗಿದೆ. ಚೀನಾ ಸಾಧಿಸುತ್ತಿರುವ ಸರ್ವತೋಮುಖ–ಆರ್ಥಿಕ, ತಂತ್ರಜ್ಞಾನ ಮತ್ತು ಮಿಲಿಟರಿ ಕ್ಷೇತ್ರಗಳಲ್ಲಿನ– ಏಳಿಗೆಯ ವಾಸ್ತವತೆಯ ಹಿನ್ನೆಲೆಯಲ್ಲಿ ಈ ಎಲ್ಲ ಕೂಟ ಮತ್ತು ಹೂಟಗಳು ಸೋಲುವ ಆಟದಂತೆಯೇ ಕಾಣುತ್ತವೆ. ಈ ಆಟದಲ್ಲಿ ಒಂದು ಕಿರಿಯ ಪಾಲುದಾರ ಹಾಗೂ ಯಾವುದೇ ಪರಿಣಾಮ ಬೀರಲಾರದ ಪಾಲುದಾರ ಆಗುವುದರಿಂದ ಭಾರತದ ಹಿತಾಸಕ್ತಿಗಳಿಗೆ ಏನಾದರೂ ಪ್ರಯೋಜನವಿದೆಯೇ?



* ಪ್ರಕಾಶ್ ಕಾರಟ್

ಅಮೆರಿಕ, ಇಸ್ರೇಲ್, ಭಾರತ ಮತ್ತು ಯು.ಎ.ಇ. ದೇಶಗಳ ವಿದೇಶಾಂಗ ಸಚಿವರ ಭಾಗಶಃ ದೂರಸಂಪರ್ಕದ (ವರ್ಚುವಲ್) ಮತ್ತು ಭಾಗಶಃ ಭೌತಿಕ ಸಭೆ ಅಕ್ಟೋಬರ್ 18ರಂದು ನಡೆದಿದ್ದು ಪಶ್ಚಿಮ ಏಷ್ಯಾದಲ್ಲಿ ಹೊಸದೊಂದು ಗುಂಪಿನ ಸೃಷ್ಟಿಗೆ ನಾಂದಿ ಹಾಡಿದೆ. ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಇಸ್ರೇಲ್‌ಗೆ ಭೇಟಿ ನೀಡಿದ್ದ ವೇಳೆ ಈ ಸಭೆ ನಡೆದಿರುವುದು ಗಮನರ್ಹವಾಗಿದೆ. ನಫ್ತಾಲಿ ಬೆನೆಟ್ ಸರ್ಕಾರದೊಂದಿಗೆ ಮಾತುಕತೆ ನಡೆಸಲು ಜೈಶಂಕರ್ ಅಲ್ಲಿಗೆ ತೆರಳಿದ್ದರು.

ನಾಲ್ಕು ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಯಲ್ಲಿ ವಾಣಿಜ್ಯ, ತಾಪಮಾನ ಬದಲಾವಣೆ, ಇಂಧನ ಮತ್ತು ಸಾಗರಯಾನ ಭದ್ರತೆ ಕುರಿತು ಚರ್ಚೆ ನಡೆಯಿತು ಎಂದು ಸಭೆಯ ನಂತರ ನೀಡಿದ ಹೇಳಿಕೆಯಲ್ಲಿ ಅಮೆರಿಕ ತಿಳಿಸಿದೆ. ಪಶ್ಚಿಮ ಏಷ್ಯಾಕ್ಕೆ ಎರಡನೇ ಕ್ವಾಡ್ ಎಂದು ಕರೆಯಲಾಗುತ್ತಿರುವ ಈ ಗುಂಪು ರಚನೆಯಾಗುವುದರೊಂದಿಗೆ ಚೀನಾದ ವಿರುದ್ಧ ಅಮೆರಿಕ ಇನೊಂದು ಹೆಜ್ಜೆಯನ್ನು ಇಟ್ಟಂತಾಗಿದೆ. ಗುಂಪಿನ ಸಂರಚನೆ ಪರಿಗಣಿಸಿದರೆ ಅದು ಇರಾನ್ ವಿರುದ್ಧದ ಕೂಟವೂ ಆಗಿದೆ.

ಪಶ್ಚಿಮ ಏಷ್ಯಾ ವಲಯದಲ್ಲಿ ಮೋದಿ ಸರ್ಕಾರದ ಪ್ರವೇಶವು ಎರಡು ಕಾರಣಗಳಿಗಾಗಿ ಮಹತ್ವದ್ದಾಗಿದೆ.

ಅಮೆರಿಕದ ಹೂಟಗಳಲ್ಲಿ ಶಾಮೀಲು

ಮೊದಲನೆಯದಾಗಿ, ಇಂಡೋ–ಫೆಸಿಫಿಕ್ ವಲಯಕ್ಕೆ ಕ್ವಾಡ್ ಕೂಟದ ಔಪಚಾರಿಕ ರಚನೆಯಾದ ನಂತರ ನಾಲ್ಕು ದೇಶಗಳ ಈ ಗುಂಪನ್ನು ರಚಿಸುವಲ್ಲಿ ಅಮೆರಿಕ ನಾಯಕತ್ವ ವಹಿಸಿದೆ ಹಾಗೂ ಭಾರತವನ್ನು ಅದರೊಳಕ್ಕೆ ಸೆಳೆದುಕೊಂಡಿದೆ. ಕ್ವಾಡ್ ಚೀನಾದ ಬೆಳೆಯುತ್ತಿರುವ ಪ್ರಭಾವದ ವಿರುದ್ಧದ ಒಂದು ಕೂಟವೆನ್ನುವುದು ಸ್ಪಷ್ಟವಾಗಿದೆ. ಹೊಸ ಗುಂಪಿನ ರಚನೆಯು ಭಾರತ ಮತ್ತು ಅಮೆರಿಕ ನಡುವೆ ಆಳಗೊಳ್ಳುತ್ತಿರುವ ಸಾಮರಿಕ ಮತ್ತು ರಾಜಕೀಯ ಮೈತ್ರಿಯ ಸೂಚನೆಯಾಗಿದೆ. ಮೋದಿ ಸರ್ಕಾರವು ಅಮೆರಿಕದ ಹುನ್ನಾರಗಳಲ್ಲಿ ಹೆಚ್ಚೆಚ್ಚಾಗಿ ಒಳಗೊಳ್ಳುತ್ತಿರುವುದು ಕಂಡು ಬರುತ್ತದೆ.

ಆಫ್ಘಾನಿಸ್ತಾನದಿಂದ ಆತುರಾತುರವಾಗಿ ವಾಪಸ್ ಹೋದ ನಂತರ, ಪಶ್ಚಿಮ ಏಷ್ಯಾದಲ್ಲಿ ತಮ್ಮ ತಂತ್ರಗಾರಿಕೆಯನ್ನು ಮರುರೂಪಿಸಲು ಅಮೆರಿಕ ಮತ್ತು ಅದರ ಪಾಶ್ಚಿಮಾತ್ಯ ಮಿತ್ರರು ಇನ್ನಿಲ್ಲದ ಕಸರತ್ತು ನಡೆಸುತ್ತಿದ್ದಾರೆ. ಜೋ ಬೈಡೆನ್ ಆಡಳಿತದ ಚೀನಾ–ವಿರೋಧಿ ತಂತ್ರಗಳಲ್ಲಿ ಭಾರತ ಒಳಗೊಂಡಿದ್ದರಿಂದ ಅದು (ಭಾರತ) ತನ್ನ ತಂತ್ರಗಾರಿಕೆಯಲ್ಲಿ ಮನಃಪೂರ್ವಕವಾಗಿ ಪಾಲುದಾರ ಆಗುತ್ತದೆನ್ನುವುದನ್ನು ಅಮೆರಿಕ ಕಂಡುಕೊಂಡಿದೆ. ಅಮೆರಿಕದ ವಿದೇಶಾಂಗ ಸಚಿವ ಆಂಟನಿ ಬ್ಲಿಂಕೆನ್ ಸೆಪ್ಟೆಂಬರ್‌ನಲ್ಲಿ ಭಾರತಕ್ಕೆ ಭೇಟಿ ನೀಡಿದ್ದಾಗ ಈ ಹೊಸ ರಾಜತಾಂತ್ರಿಕ ನಡೆ ಬಗ್ಗೆ ಭಾರತದೊಂದಿಗೆ ವಿಸ್ತ್ರತವಾಗಿ ಚರ್ಚಿಸಿರುವ ಸಂಭವವಿದೆ. ನಂತರ ಜೈಶಂಕರ್ ಜೊತೆಗೆ ನಡೆದ ವಿವಿಧ ಚರ್ಚೆಗಳಲ್ಲೂ ಈ ಬಗ್ಗೆ ಪ್ರಸ್ತಾಪಿಸಿರಬಹುದು.

ಸೈದ್ಧಾಂತಿಕ ಸಾಮೀಪ್ಯ

ಎರಡನೆಯ ಅಂಶವೆಂದರೆ, ಪಶ್ಚಿಮ ಏಷ್ಯಾದಲ್ಲಿ ಅಮೆರಿಕದ ಹೂಟಗಳಿಗೆ ಇಸ್ರೇಲ್–ಭಾರತ ಕೂಟದ ಬೆಂಬಲವು ಈ ಹೊಸ ಗುಂಪಿನ ಮೂಲಕ ಇನ್ನಷ್ಟು ದೃಢಗೊಂಡಿದೆ. ಪ್ರಧಾನಿ ಮೋದಿಯಡಿ ಇಸ್ರೇಲ್‌ನೊಂದಿಗಿನ ವ್ಯೂಹಾತ್ಮಕ ಮೈತ್ರಿಯನ್ನು ಭಾರತ ಇನ್ನಷ್ಟು ಆಳಗೊಳಿಸಿದೆ. ಭದ್ರತೆ ಮತ್ತು ಮಿಲಿಟರಿ ಸಹಕಾರವು ಆರಂಭದಿಂದಲೂ ಇಸ್ರೇಲ್‌ನೊಂದಿಗಿನ ಮೈತ್ರಿಯ ಮೂಲಾಧಾರವಾಗಿದೆ. ಭಾರತಕ್ಕೆ ರಕ್ಷಣಾ ಹಾಗೂ ಭದ್ರತಾ ಉಪಕರಣಗಳ ಅತಿ ದೊಡ್ಡ ಸರಬರಾಜು ದೇಶಗಳಲ್ಲಿ ಒಂದಾಗಿ ಇಸ್ರೇಲ್ ಹೊರಹೊಮ್ಮಿದೆ. ಹಿಂದುತ್ವ ಮತ್ತು ಯೆಹೂದಿ ಉಗ್ರಗಾಮಿ ಸಿದ್ಧಾಂತಗಳ ಸಾಮಿಪ್ಯ ಇದನ್ನು ಬೆಸೆಯುವ ಅಂಶವಾಗಿದೆ.

ಈ ವಲಯದಲ್ಲಿ ಸೌದಿ ಅರೇಬಿಯಾದೊಂದಿಗೆ ಅಮೆರಿಕದ ನಿಕಟ ಮಿತ್ರನಾಗಿರುವ ಯುಎಇ, ಇಸ್ರೇಲ್‌ನೊಂದಿಗೆ ಕಳೆದ ವರ್ಷ ರಾಜತಾಂತ್ರಿಕ ಸಂಬಂಧವನ್ನು ಸ್ಥಾಪಿಸಿತ್ತು. ಇಸ್ರೇಲ್‌ನೊಂದಿಗೆ ಬೇಹುಗಾರಿಕೆ ಮತ್ತು ಭದ್ರತಾ ಸಹಕಾರ ವಿಷಯದಲ್ಲಿ ಅದು ಈಗಾಗಲೇ ಆಳವಾಗಿ ಒಳಗೊಂಡಿದೆ.

ಭಾರತ ಇಂಥದ್ದೊಂದು ಗುಂಪಿನ ಸದಸ್ಯನಾಗುವುದೆಂದರೆ ದೀರ್ಘ ಕಾಲದಿಂದ ಅದು ಅನುಸರಿಸಿಕೊಂಡು ಬಂದ ವಿದೇಶಾಂಗ ನೀತಿಗೆ ವಿದಾಯ ಹೇಳಿದಂತೆಯೇ ಸರಿ. ಈಗ ರೂಪಿತವಾದ ಗುಂಪು ಸಾಂಸ್ಥೀಕರಣವಾದರೆ, ಅದು ಚೀನಾದಂತೆ ಇರಾನ್ ವಿರುದ್ಧದ ಕೂಟವೂ ಆಗಿರುತ್ತದೆ. ಏಕೆಂದರೆ, ಇರಾನ್ ತನ್ನ ಆಜೀವ ಶತ್ರು ಎಂದು ಇಸ್ರೇಲ್ ಪರಿಗಣಿಸುತ್ತದೆ. ಇದು ಇರಾನ್‌ನೊಂದಿಗೆ ಭಾರತ ದೀರ್ಘಕಾಲದಿಂದ ಹೊಂದಿರುವ ಸಂಬಂಧಕ್ಕೆ ಹಾನಿ ಮಾಡುತ್ತದೆ. ಇರಾನ್‌ನೊಂದಿಗಿನ ಅಮೆರಿಕದ ಪರಮಾಣು ಒಪ್ಪಂದವನ್ನು ಅಂದಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ರದ್ದುಪಡಿಸಿ ಇರಾನ್ ಮೇಲೆ ಕಾನೂನುಬಾಹಿರ ದಿಗ್ಬಂಧನ ವಿಧಿಸಿದಾಗಿನಿಂದ ಇರಾನ್ ಜೊತೆಗಿನ ಸಂಬಂಧ ಹಲವು ವರ್ಷಗಳಿಂದ ಕ್ರಮೇಣ ದುರ್ಬಲಗೊಳ್ಳುತ್ತಾ ಬಂದಿದೆ. ಪಶ್ಚಿಮ ಏಷ್ಯಾದಲ್ಲಿನ ಇಂಥ ಸಂಕೀರ್ಣ ಹಾಗೂ ಚಂಚಲ ಸನ್ನಿವೇಶದಲ್ಲಿ ಈ ವಲಯದಲ್ಲಿ ಇಸ್ರೇಲ್‌ನೊಂದಿಗೆ ಜಂಟಿ ಸಾಹಸಕ್ಕೆ ಇಳಿದರೆ ಅದು ಭಾರತಕ್ಕೆ ತಿರುಗುಬಾಣ ಆಗಬಹುದು.

ಸಭೆಯಲ್ಲಿ ಚರ್ಚಿಸಲಾಯಿತೆನ್ನಲಾದ ಸಾಗರ ಯಾನ ಭದ್ರತೆಯು ಸಾಗರ ಮಾರ್ಗಗಳ, ಅದರಲ್ಲೂ ಮುಖ್ಯವಾಗಿ ಬಬ್–ಎಲ್–ಮಾಂಡೆಬ್ ಜಲಸಂಧಿಯ ನಿಯಂತ್ರಣದ ಮೇಲೆ ಗಮನ ಕೇಂದ್ರೀಕರಿಸುತ್ತದೆ. ಇದು ಅರಬ್ಬಿ ಸಮುದ್ರ ಮತ್ತು ಏಡೆನ್ ಕೊಲ್ಲಿ ಹಾಗೂ ಕೆಂಪು ಸಮುದ್ರ ಮತ್ತು ಸೂಯೆಜ್ ಕಾಲುವೆಗೆ ಸಂಪರ್ಕ ಕಲ್ಪಿಸುವ ಮಾರ್ಗ. ಇಂಡೋ–ಪೆಸಿಫಿಕ್ ವಲಯದ ಕ್ವಾಡ್ ವ್ಯಾಪ್ತಿಯಡಿ ಬರುವ ಮಲಕ್ಕಾ ಜಲಸಂಧಿಯಂತೆ ಬಬ್–ಅಲ್–ಮಾಂಡೆಬ್ ಜಲಸಂಧಿ ಚೀನಾದ ನೌಕಾಯಾನ ಮತ್ತು ನೌಕಾಪಡೆಯ ಚಲನವಲನಗಳಿಗೆ ಸಂಭಾವ್ಯ ಬಿಗಿತದ ಸ್ಥಳವಾಗಬಹುದು.



ಸಭೆಯಲ್ಲಿ ಚರ್ಚಿಸಲಾಯಿತೆನ್ನಲಾದ ಸಾಗರ ಯಾನ ಭದ್ರತೆಯು ಸಾಗರ ಮಾರ್ಗಗಳ, ಅದರಲ್ಲೂ ಮುಖ್ಯವಾಗಿ ಬಬ್-ಎಲ್-ಮಾಂಡೆಬ್ ಜಲಸಂಧಿಯ ನಿಯಂತ್ರಣದ ಮೇಲೆ ಗಮನ ಕೇಂದ್ರೀಕರಿಸುತ್ತದೆ. ಇದು ಅರಬ್ಬಿ ಸಮುದ್ರ ಮತ್ತು ಏಡೆನ್ ಕೊಲ್ಲಿ ಹಾಗೂ ಕೆಂಪು ಸಮುದ್ರ ಮತ್ತು ಸೂಯೆಜ್ ಕಾಲುವೆಗೆ ಸಂಪರ್ಕ ಕಲ್ಪಿಸುವ ಮಾರ್ಗ. ಇದು ಚೀನಾದ ನೌಕಾಯಾನ ಮತ್ತು ನೌಕಾಪಡೆಯ ಚಲನವಲನಗಳಿಗೆ ಸಂಭಾವ್ಯ ತಡೆ-ಬಿಗಿತದ ಸ್ಥಳವಾಗಬಹುದು.

ತಿರುಗುಬಾಣವಾಗಬಹುದಾದ ನೀತಿ

ಚೀನಾದ ವಿರುದ್ಧ ಒಂದು ಸುಸಂಗತ ಜಾಗತಿಕ ವ್ಯೂಹವನ್ನು ಹೇಗಾದರೂ ಕಲೆಹಾಕಲು ಬೈಡೆನ್ ಆಡಳಿತ ಹತಾಶ ಪ್ರಯತ್ನ ನಡೆಸುತ್ತಿರುವಾಗ, ಈ ದುಸ್ಸಾಹಸದಲ್ಲಿ ಒಂದು ಕಿರು ಪಾಲುದಾರ ಆಗಲು ಭಾರತ ಬಯಸುತ್ತಿದೆಯೇ? ಕ್ವಾಡ್, ಔಕುಸ್ ಮತ್ತು ಆಫ್ಘಾನಿಸ್ತಾನ ಪತನಗೊಳ್ಳುವ ಮುನ್ನ ಘೋಷಣೆಯಾದ ಮಧ್ಯ ಏಷ್ಯಾದ ಕುರಿತಂತೆ ನಾಲ್ಕು ದೇಶಗಳ (ಅಮೆರಿಕ, ಪಾಕಿಸ್ತಾನ, ಅಫಘಾನಿಸ್ತಾನ ಮತ್ತು ಉಝ್ಬೇಕಿಸ್ತಾನ) ಕೂಟ ರಚನೆಯ ಕೈಗೂಡದ ಪ್ರಕಟಣೆ –ಇವೆಲ್ಲವೂ ಚೀನಾವನ್ನು ಕಟ್ಟಿ ಹಾಕಲು ಮತ್ತು ಪ್ರತ್ಯೇಕಗೊಳಿಸಲು ಅಮೆರಿಕ ಹತಾಶೆಯಿಂದ ಓಡಾಡುತ್ತಿದೆ ಎನ್ನುವುದರ ದ್ಯೋತಕವಾಗಿದೆ. ಚೀನಾ ಸಾಧಿಸುತ್ತಿರುವ ಸರ್ವತೋಮುಖ–ಆರ್ಥಿಕ, ತಂತ್ರಜ್ಞಾನ ಮತ್ತು ಮಿಲಿಟರಿ ಕ್ಷೇತ್ರಗಳಲ್ಲಿನ– ಏಳಿಗೆಯ ವಾಸ್ತವತೆಯ ಹಿನ್ನೆಲೆಯಲ್ಲಿ ಈ ಎಲ್ಲ ಕೂಟ ಮತ್ತು ಹೂಟಗಳು ಸೋಲುವ ಆಟದಂತೆಯೇ ಕಾಣುತ್ತವೆ. ಈ ಆಟದಲ್ಲಿ ಒಂದು ಕಿರಿಯ ಪಾಲುದಾರ ಹಾಗೂ ಯಾವುದೇ ಪರಿಣಾಮ ಬೀರಲಾರದ ಪಾಲುದಾರ ಆಗುವುದರಿಂದ ಭಾರತದ ಹಿತಾಸಕ್ತಿಗಳಿಗೆ ಏನಾದರೂ ಪ್ರಯೋಜನವಿದೆಯೇ?

ಇಂಥದ್ದೊಂದು ಪಾತ್ರ ವಹಿಸಿದರೆ ಭಾರತ ನಿಕಟ ಹಾಗೂ ಮೈತ್ರಿಯುತ ಬಾಂಧವ್ಯ ಹೊಂದಿರುವ ಇತರ ಪ್ರಮುಖ ಶಕ್ತಿಗಳನ್ನು, ವಿಶೇಷವಾಗಿ ರಷ್ಯಾ ಮತ್ತು ಇರಾನಿನಿಂದ ದೂರ ಸರಿದಂತಾಗುತ್ತದೆ. ಪಶ್ಚಿಮ ಏಷ್ಯಾದಲ್ಲಿ ಅಮೆರಿಕದ ಇತ್ತೀಚೆಗಿನ ಉಪಕ್ರಮದಲ್ಲಿ ಸೇರಿಕೊಳ್ಳುವುದು ಭಾರತದ ವಿದೇಶಾಂಗ ನೀತಿಯು ವಾಶಿಂಗ್ಟನ್ನಿನ ಅಡಿಯಾಳಾಗುವ ಕ್ರಿಯೆ ವೇಗವಾಗಿ ಮುಂದುವರೆಯುತ್ತಿರುವುದರ ಸಂಕೇತವಾಗಿದೆ.

ಅನು: ವಿಶ್ವ

“ಆರ್.ಎಸ್.ಎಸ್. ಸಿದ್ಧಾಂತ ದೇಶಕ್ಕೆ ಮಾರಕ”
ಸಿಪಿಐ(ಎಂ) ಮೈಸೂರು ಜಿಲ್ಲಾ ಸಮ್ಮೇಳನ





ಆರ್.ಎಸ್.ಎಸ್. ಸಿದ್ಧಾಂತ ದೇಶಕ್ಕೆ ಮಾರಕವಾಗಿದ್ದು, ಇಂತಹ ಸಿದ್ಧಾಂತವನ್ನು ವೈಭವೀಕರಿಸುತ್ತಿದೆ. ಇದರ ವಿರುದ್ಧ ಜಾತ್ಯಾತೀತ ಶಕ್ತಿಗಳು ಒಂದಾಗಬೇಕೆಂದು ಕರೆ ನೀಡಿದರು.

ಅಕ್ಟೋಬರ್ 31, 2021 ರಂದು ಮೈಸೂರು ನಗರದಲ್ಲಿ ಸಿಪಿಐ(ಎಂ) ಪಕ್ಷದ 23ನೇ ಜಿಲ್ಲಾ ಸಮ್ಮೇಳನ್ನು ಕಾಂ. ವಸಂತಾಚಾರಿ ಉದ್ಘಾಟಿಸಿ ಮಾತನಾಡುತ್ತಾ ಆರ್.ಎಸ್.ಎಸ್ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಬಲಪಂಥೀಯ ವಿಚಾರ ಧಾರೆಗಳನ್ನು ಆಕ್ರಮಣಕಾರಿ ರೀತಿಯಲ್ಲಿ ತುರುಕುತ್ತಿದೆ. ಇದರ ವಿರುದ್ಧ ಸಂಘಟಿತ ಹೋರಾಟಕ್ಕೆ ಮುಂದಾಗಬೇಕು. ಮಾರ್ಕ್ಸ್‌ವಾದಿ ಸಿದ್ಧಾಂತದ ವಿರುದ್ಧ ಸರ್ಕಾರವು ದಾಳಿ ನಡೆಸುತ್ತಿದೆ. ಆರ್.ಎಸ್.ಎಸ್. ಸಿದ್ಧಾಂತವನ್ನು ವಿರೋಧಿಸುವವರಿಗೆ ದೇಶದ್ರೋಹದ ಹಣೆಪಟ್ಟಿ ಕಟ್ಟಲಾಗುತ್ತಿದೆ ಎಂದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಬ್ರಿಟ್ರೀಷರ ಪರವಾಗಿದ್ದ ಆರ್.ಎಸ್.ಎಸ್. ಇಂದು ದೇಶದ ಆಡಳಿತ ನಡೆಸುತ್ತಿದೆ. ಆ ಮೂಲಕ ಜಾತ್ಯಾತೀತ ಮತ್ತು ಒಕ್ಕೂಟ ತತ್ವಕ್ಕೆ ವಿರುದ್ಧವಾಗಿ ರಾಜಕೀಯ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದೆ. ದೇಶದ ಪ್ರಮುಖ ಸಮಸ್ಯೆಗಳಾದ ಬಡತನ, ನಿರುದ್ಯೋಗ ನಿವಾರಣೆ ಮಾಡುವ ಬದಲು ಎಲ್ಲಾ ಸರ್ಕಾರಿ ಆಸ್ತಿಗಳನ್ನು ಮಾರಾಟ ಮಾಡಿ ಅಭಿವೃದ್ಧಿ ವಿರೋಧಿ ನಡೆ ಅನುಸರಿಸುತ್ತಿದ್ದಾರೆ. ಬಂಡವಾಳ ಶಾಹಿಗಳಿಗೆ ಪೂರಕವಾಗಿ ಕೃಷಿ ನೀತಿಗಳನ್ನು ಬದಲಾವಣೆ ಮಾಡಲಾಗುತ್ತಿದೆ. ಇದರ ವಿರುದ್ಧ ರೈತರು 11 ತಿಂಗಳಿಂದ ಹೋರಾಟ ನಡೆಸುತ್ತಿದ್ದರೂ ಅವರತ್ತ ಕಿವಿಗೊಡುತ್ತಿಲ್ಲ ಎಂದು ಆಕ್ರೋಶ ವ್ಯಕ್ತ ಪಡಿಸಿದರು.

ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರು ಕಾಂ. ಸುನಂದ ಮಾತನಾಡಿ, ಕೇಂದ್ರದ ಬಿಜೆಪಿ ಸರ್ಕಾರ ಬಹುಮತ ಇದೆ ಎಂದು ಜನರ ಅಭಿಪ್ರಾಯ, ಜನ ಚಳುವಳಿಯನ್ನು ನಿರ್ಲಕ್ಷಿಸುತ್ತಿದೆ. ಈ ಧೋರಣೆ ಪ್ರಜಾಪ್ರಭುತ್ವಕ್ಕೆ ಮಾರಕ. 2014 ರಿಂದಲೂ ಅರ್ಥವ್ಯವಸ್ಥೆ ಕುಸಿಯುತ್ತಿದೆ. ಹಸಿವಿನ ಸೂಚ್ಯಾಂಕದಲ್ಲಿ ದೇಶ ಹಿಂದೆ ಉಳಿದಿದೆ. ದೇಶದ ನೈಜ ಸಮಸ್ಯೆಗಳನ್ನು ಪರಿಹರಿಸುವ ಬದಲು ಕೃಷಿ ನೀತಿ, ಕಾರ್ಮಿಕ ವಿರೋಧಿ ನೀತಿಗಳನ್ನು ತಂದು ಬಡವರ ಮೇಲೆ ವ್ಯವಸ್ಥಿತ ದಾಳಿ ನಡೆಸುತ್ತಿದೆ ಎಂದರು.

ಸಿಪಿಐ(ಎಂ) ರಾಜ್ಯ ಕೇಂದ್ರ ಸಮಿತಿ ಸದಸ್ಯರಾದ ಕೆ.ಎಸ್. ಉಮೇಶ್ ಮಾತನಾಡಿ, ಜನ ಸಮಾನ್ಯರು ಉಪಯೋಗಿಸುವ ಅಗತ್ಯ ವಸ್ತುಗಳ ಬೆಲೆ ವಿಪರೀತವಾಗಿ ಏರುತ್ತಿದ್ದರೂ ಮೋದಿ ಸರ್ಕಾರ ಜನಸಾಮಾನ್ಯರತ್ತ ಗಮನ ನೀಡುತ್ತಿಲ್ಲ. ಕೋವಿಡ್ ಸಮಯದಲ್ಲಿ ತನ್ನ ಬೇಜವಾಬ್ದಾರಿತನದಿಂದ ಸಾವಿರಾರು ಜನ ಸಾಯುವಂತ್ತಾದರೂ, ಸುಪ್ರೀಂಕೋರ್ಟ್ ಲಸಿಕೆಗೆ ಬಜೆಟ್‌ನಲ್ಲಿ ಮೀಸಲಿಟ್ಟ ಹಣದ ಲೆಕ್ಕ ಕೇಳಿದ್ದಕ್ಕೆ ಮೋದಿ 18 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನೀಡುವುದಾಗಿ ಹೇಳಿತು. ಆದರೆ ಯಡಿಯೂರಪ್ಪ ಸರ್ಕಾರ ಒಂದು ಲಸಿಕೆಗೆ 300 ನೀಡಿ ಖರೀದಿಸಲು ಹಣ ಮೀಸಲಿಟ್ಟಿತು ಹಾಗೂ ಖರೀದಿಸಿತು. ಆದರೂ ಎಲ್ಲರಿಗೂ ಉಚಿತ ಲಸಿಕೆ ಎಂದು ಪುಕ್ಕಟೆ ಪ್ರಚಾರ ಪಡೆಯಲಾಗುತ್ತಿದೆ. ಈಗ 100 ಕೋಟಿ ಲಸಿಕೆ ನೀಡಿದ್ದೇವೆಂದು ವ್ಯಾಪಕ ಪ್ರಚಾರ ನಡೆಸುತ್ತಿದ್ದಾರೆ. ಆದರೆ ಸುಪ್ರೀಂ ಕೋರ್ಟ್ ಮಧ್ಯಪ್ರವೇಶ ಮಾಡದಿದ್ದರೆ ಇಂದೂ ಸಹ ಲಸಿಕೆ ಬಡವರಿಗೆ ಸಿಗುವುದು ಕಷ್ಟವಾಗುತ್ತಿತ್ತು ಎಂದರು.



ಸಮ್ಮೇಳನದ ಸಭಾಂಗಣದ ವರೆಗೆ ಕೆಂಪು ಸ್ವಯಂ ಸೇವಕರ ಮೆರವಣಿಗೆ ನಡೆಯಿತು. ಆರಂಭದಲ್ಲಿ ಮೈಸೂರು ಜಿಲ್ಲೆಯ ಹಿರಿಯ ಸಂಗಾತಿ ಕಾಂ. ಎಲ್. ಜಗನ್ನಾಥ್ ಧ್ವಜಾರೋಹಣ ಮಾಡುವ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಿದರು. ಈಲ್ಲಾ ಕಾರ್ಯದರ್ಶಿ ಕಾಂ. ಕೆ. ಬಸವರಾಜು ಮಂಡಿಸಿದ ವರದಿ ಮೇಲೆ ಪ್ರತಿನಿಧಿಗಳು ಚರ್ಚೆ ನಡೆಸಿದರು. ಸಮ್ಮೇಳನವು ಕೃಷಿ ಕಾಯ್ದೆ ವಾಪಾಸು ಪಡೆಯಲು, ಕಾರ್ಮಿಕ ಸಂಹಿತೆ ವಾಪಸು ಪಡೆಯಲು, ಎಲ್ಲಾ ಬಡವರಿಗೆ ಮನೆ–ನಿವೇಶನ ನೀಡುವಂತೆ ಒತ್ತಾಯಿಸಿ ಸೇರಿದಂತೆ 24 ನಿರ್ಣಯಗಳನ್ನು ಮಂಡಿಸಲಾಯಿತು.

ನೂತನ ಸಮಿತಿ

9 ಜನರ ನೂತನ ಜಿಲ್ಲಾ ಸಂಘಟನಾ ಸಮಿತಿ ರಚಿಸಲಾಯಿತು. 1)ಜಗದೀಶ್ ಸೂರ್ಯ, 2)ಹೆಚ್.ಎಸ್. ಸುನಂದ 3) ಎಲ್. ಜಗನ್ನಾಥ್, 4) ಕೆ. ಬಸವರಾಜ, 5) ಜಿ. ಜಯರಾಂ, 6)ಎಸ್. ವಿಜಯ್ ಕುಮಾರ್, 7) ವಿ. ಬಸವರಾಜು 8) ಬೆಳ್ಳೂರು ವೆಂಕಟೇಶ್, 9) ಬಿ.ಎಂ. ಶಿವಣ್ಣ.

ಮೈಸೂರು ಜಿಲ್ಲೆಯ ಸಿಪಿಐ(ಎಂ) ಪಕ್ಷದ ನೂತನ ಜಿಲ್ಲಾ ಕಾರ್ಯದರ್ಶಿಯಾಗಿ ಕಾಂ. ಜಗದೀಶ್ ಸೂರ್ಯ ಆಯ್ಕೆಯಾದರು.

ರಾಜ್ಯ ಕೇಂದ್ರ ಸದಸ್ಯರಾದ ಕಾಂ. ವಸಂತಾಚಾರಿ, ಕಾಂ. ಕೆ.ಎನ್. ಉಮೇಶ್, ಹೆಚ್.ಎಸ್. ಸುನಂದ ಸಮ್ಮೇಳನದಲ್ಲಿ ಉಪಸ್ಥಿತರಿದ್ದರು.

ಎಡಪಂಥೀಯ ವಿಚಾರಧಾರೆಗಳಿಂದ ಮಾತ್ರವೇ ದೇಶ ಉಳಿಸಲು ಸಾಧ್ಯ–ಸುನಿಲ್ ಕುಮಾರ್ ಬಜಾಲ್

ಮಂಗಳೂರು ನಗರ ಉತ್ತರ ಸಮ್ಮೇಳನ

ಒಂದು ಕಡೆ ಜಾತಿ ಧರ್ಮದ ಹೆಸರಿನಲ್ಲಿ ದೇಶ ಒಡೆಯುವ ಕಾರ್ಯ ನಡೆದರೆ ಮತ್ತೊಂದು ಕಡೆ ಜಾಗತೀಕರಣ ಉದಾರೀಕರಣ ಖಾಸಗೀಕರಣ ನೀತಿಗಳ ಫಲವಾಗಿ ದೇಶದ ಆರ್ಥಿಕತೆಯನ್ನೇ ನಾಶ ಮಾಡಲಾಗುತ್ತಿದೆ. ಇದರಿಂದಾಗಿ ಹಿಂದುತ್ವ ಸರ್ವಾದಿಕಾರಶಾಹಿ ಹಾಗೂ ಕಾರ್ಪೊರೇಟ್ ನವ ಉದಾರವಾದದ ಒಂದು ವಿಷಕಾರಿ ಮಿಶ್ರಣದಿಂದ ದೇಶ ಗಂಬೀರ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಇಂತಹ ಸಂದರ್ಭಗಳಲ್ಲಿ ಎಡಪಂಥೀಯ ವಿಚಾರಧಾರೆಗಳಿಂದ ಮಾತ್ರವೇ ದೇಶವನ್ನು ಹಾಗೂ ಜನತೆಯ ಬದುಕನ್ನು ಉಳಿಸಲು ಸಾಧ್ಯ, ದೇಶದ ಪ್ರಧಾನಿಯೇ ದಿನಬೆಳಗಾದರೆ ಹಸಿ ಹಸಿ ಸುಳ್ಳನ್ನು ಹೇಳುತ್ತಾ, ಜನತೆಯಲ್ಲಿ ಭ್ರಮೆಯನ್ನು ಸೃಷ್ಟಿಸುತ್ತಿದ್ದಾರೆ. ದೇಶದ ಆರ್ಥಿಕತೆಯನ್ನೇ ಸರ್ವನಾಶ ನಾಡಿ ಜನರ ಬದುಕನ್ನು ಸಂಕಷ್ಟಕ್ಕೆ ದೂಡಿದ ನರೇಂದ್ರ ಮೋದಿ ಸರಕಾರವನ್ನು ಅತ್ಯಂತ ಶೀಘ್ರದಲ್ಲಿ ಕಿತ್ತೆಸೆಯದಿದ್ದರೆ ದೇಶಕ್ಕೆ ಉಳಿಗಾಲವಿಲ್ಲ ಎಂದು ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸುನಿಲ್ ಕುಮಾರ್ ಬಜಾಲ್ ರವರು ಕೂಳೂರಿನಲ್ಲಿ ಜರುಗಿದ ಸಿಪಿಐ(ಎಂ) ಮಂಗಳೂರು ನಗರ ಉತ್ತರ ಸಮ್ಮೇಳನವನ್ನು ಉದ್ಘಾಟಿಸಿ ಈ ಮಾತುಗಳನ್ನು ಹೇಳಿದರು.





ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಮಾಜಿ ಕಾರ್ಪೋರೇಟರ್, ಸಿ ಪಿ ಐ (ಎ ಂ) ಮಂಗಳೂರು ನಗರ ಉತ್ತರ ಕಾರ್ಯದರ್ಶಿ ದಯಾನಂದ ಶೆಟ್ಟಿಯವರು ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರಕಾರಗಳು ಹೆಜ್ಜೆ ಹೆಜ್ಜೆಗೂ ಜನವಿರೋಧಿ ನೀತಿಗಳನ್ನು ಜಾರಿಗೊಳಿಸುತ್ತಿದ್ದು, ಅದರ ವಿರುದ್ದ ಪ್ರಬಲ ಜನಚಳುವಳಿಯು ಬೆಳೆದು ಬರಬೇಕಾಗಿದೆ. ಕಾರ್ಮಿಕ ವರ್ಗದ ಹಾಗೂ ರೈತಾಪಿ ಜನತೆಯ ಐಕ್ಯ ಚಳುವಳಿ ಮಾತ್ರವೇ ದೇಶಕ್ಕೆ ಆಶಾಕಿರಣ ಎಂದರು.

ಕಳೆದ ಹಲವು ವರ್ಷಗಳಿಂದ ದುಡಿಯುವ ವರ್ಗದ ಚಳುವಳಿಗಾಗಿ ಅವಿಶ್ರಾಂತ ವಾಗಿ ಶ್ರಮಿಸಿದ ಪಕ್ಷದ ಹಿರಿಯ ಸದಸ್ಯರಾದ ತುಕಾರಾಮ ಕೊಂಚಾಡಿ, ನಾರಾಯಣ ಕೊಂಚಾಡಿ, ಸುಕುಮಾರ್ ಮಾಲೆಮಾರ್ ರವರನ್ನು ಸಮ್ಮೇಳನದಲ್ಲಿ ಗೌರವಿಸಲಾಯಿತು. ಪ್ರಾರಂಭದಲ್ಲಿ ಪಕ್ಷದ ಹಿರಿಯ ಸದಸ್ಯರಾದ ನಾರಾಯಣ ಕೊಂಚಾಡಿಯವರು ಧ್ವಜಾರೋಹಣ ಮಾಡುವ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಿದರು.

ಸಿಪಿಐ(ಎಂ) ಮಂಗಳೂರು ನಗರ ಉತ್ತರ ಸಮಿತಿ ನಾಯಕರಾದ ಬಾಬು ದೇವಾಡಿಗ, ಅಶೋಕ್ ಶ್ರೀಯಾನ್, ಬಿ.ಕೆ.ಇಮ್ತಿಯಾಜ್, ರವಿಚಂದ್ರ ಕೊಂಚಾಡಿ, ನವೀನ್ ಕೊಂಚಾಡಿ, ಸಮ್ಮೇಳನದ ಸ್ವಾಗತ ಸಮಿತಿ ಮುಖಂಡರಾದ ಅಹಮ್ಮದ್ ಬಶೀರ್, ಅನಿಲ್ ಡಿಸೋಜ, ಮುಸ್ತಾಫ, ಶೆರೀಪ್ ಯವರು ಹಾಜರಿದ್ದರು. ಪ್ರಾರಂಭದಲ್ಲಿ ಅಹಮ್ಮದ್ ಬಶೀರ್ ರವರು ಸ್ವಾಗತಿಸಿದರೆ, ಕೊನೆಯಲ್ಲಿ ಸಂತೋಷ್ ಡಿಸೋಜರವರು ವಂದಿಸಿದರು. ಕಾಂ. ಜೆ. ಅಹಮ್ಮದ್ ಬಶೀರ್ ನೂತನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ■

ಪ್ರಧಾನಿ ಮೋದಿ ಆಡಳಿತದ ದುಷ್ಪರಿಣಾಮ ಹೊಳೆಯುವ ಭಾರತ ಹಾಗೂ ಹಸಿವಿನ ಭಾರತವಾಗಿ ಮಾರ್ಪಟ್ಟಿದೆ –ಎಸ್. ವರಲಕ್ಷ್ಮೀ

ಹುಬ್ಬಳ್ಳಿ: ಸಿಪಿಐಎಂ ಧಾರವಾಡ ಜಿಲ್ಲಾ 12ನೇ ಸಮ್ಮೇಳನ



ಸಿಪಿಐಎಂ ಧಾರವಾಡ (ಗದಗ ಹಾವೇರಿ ಜಿಲ್ಲೆಗಳು ಸೇರಿ) ಜಿಲ್ಲಾ 12ನೇ ಸಮ್ಮೇಳನವು ಅಕ್ಟೋಬರ್ 30–31 ರಂದು ಕಾಂ॥ ಮಾರುತಿ ಮಾನ್ಪಡೆ ವೇದಿಕೆ ಹಾಗೂ ಕಾಂ॥ ಆರ್ ಶ್ರೀನಿವಾಸ್ ಸಭಾಂಗಣದಲ್ಲಿ (ಹುಬ್ಬಳ್ಳಿಯ ಜೆಸಿ ನಗರದಲ್ಲಿರುವ ಅಕ್ಕನ ಬಳಗದಲ್ಲಿ) ಯಶಸ್ವಿಯಾಗಿ ನಡೆಯಿತು. ಪಕ್ಷದ ಹಿರಿಯ ಸಂಗಾತಿ ಕಾಂ॥ ಬಿ.ಐ.ಈಳಿಗೇರ ಧ್ವಜಾರೋಹಣ ನೆರವೇರಿಸಿದರು. ನಂತರ ಹುತಾತ್ಮ ಸ್ಥಂಭಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಪಕ್ಷ ಕಟ್ಟಲು ತಮ್ಮ ಪ್ರಾಣಗಳನ್ನು ತ್ಯಾಗ ಮಾಡಿರುವ ಹುತಾತ್ಮ ಸಂಗಾತಿಗಳಿಗೆ ಗೌರವ ನಮನ ಸಲ್ಲಿಸಲಾಯ್ತು.

ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕೇಂದ್ರ ಸದಸ್ಯೆ ಕಾಂ॥ ಎಸ್. ವರಲಕ್ಷ್ಮೀ 2014 ರಿಂದ ರಾಷ್ಟ್ರದ ಆಡಳಿತ ಚುಕ್ಕಾಣಿ ಹಿಡಿದ ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರದ ನೀತಿಗಳು ಬೆರಳೆಣಿಕೆಯಷ್ಟು ಶ್ರೀಮಂತರನ್ನು ಮತ್ತಷ್ಟು ಶ್ರೀಮಂತರನ್ನಾಗಿಸಲು ಹಾಗೂ ಬಡ ಜನರನ್ನು ಮತ್ತಷ್ಟು ಬಡತನಕ್ಕೆ ತಳ್ಳಿ, ಹಸಿವಿನಿಂದ ಸಾಯುವಂತೆ ಮಾಡಿವೆ ಎಂದು ಹೇಳಿದರು.

ಆಹಾರ ವಸ್ತುಗಳು, ಅಡುಗೆ ಅನಿಲ, ತೈಲಬೆಲೆ ಸೇರಿದಂತೆ ಜನರ ಬದುಕಿಗೆ ಅತ್ಯಗತ್ಯವಾಗಿ ಬೇಕಾದ ವಸ್ತುಗಳ ಬೆಲೆಗಳು ವಿಪರೀತವಾಗಿ ಏರಿಕೆಯಾಗುತ್ತಿವೆ. ಈ ಬೆಲೆ ಏರಿಕೆಗೆ ಕಡಿವಾಣ ಹಾಕಿ ಜನರಿಗೆ ಅನುಕೂಲ ಕಲ್ಪಿಸಬೇಕು ಅದಕ್ಕಾಗಿ ತೈಲದ ಮೇಲಿನ ತಮ್ಮ ಪಾಲಿನ ತೆರಿಗೆಯನ್ನು ತೆಗೆದು ಹಾಕಬೇಕೆಂದು ಒತ್ತಾಯಿಸಿದರು.

ಕೃಷಿ ಕಾಯಿದೆಗೆ ತಿದ್ದುಪಡಿ ತರುವ ಮೂಲಕ ಕೃಷಿಯನ್ನು ಕಂಪನಿಕರಣ ಮಾಡಲು ಹೊರಟಿದೆ. ಇದನ್ನು ವಿರೋಧಿಸಿ ರೈತರು ರಾಷ್ಟ್ರದ ರಾಜಧಾನಿ ದೆಹಲಿ ಗಡಿಯಲ್ಲಿ ವರ್ಷದಿಂದ ದಿಟ್ಟವಾಗಿ ಹೋರಾಟ ಮಾಡುತ್ತಿದೆ. ಈ ಹೋರಾಟವನ್ನು ಹತ್ತಿಕ್ಕಲು ಬಿಜೆಪಿ ಸರಕಾರದ ಅತ್ಯಂತ ಕ್ರೌರ್ಯ ಮೆರೆಯುತ್ತಿರುವುದು ಸರ್ವಾಧಿಕಾರಿ ನಡೆಯಾಗಿದ್ದು, ದೇಶದ ಅನ್ನದಾತರು ಮೋದಿ ಸರಕಾರವನ್ನು ಕಿತ್ತೊಗೆಯಲು ಐಕ್ಯ ಚಳುವಳಿಗೆ ಮುಂದಾಗಬೇಕೆಂದು ಕರೆ ನೀಡಿದರು.

ಡಾ. ಬಿ.ಆರ್. ಅಂಬೇಡ್ಕರ್ ಅವರು ದುಡಿಯುವ ಜನರ ಬದುಕನ್ನು ರಕ್ಷಿಸಲು ರಚಿಸಿದ ಕಾರ್ಮಿಕ ಕಾಯಿದೆಗಳನ್ನು ತಿದ್ದುಪಡಿ ಮಾಡಿ ಕಾರ್ಮಿಕ ಸಂಹಿತೆಗಳನ್ನು ಜಾರಿ ಮಾಡಲು ಹೊರಟಿರುವುದರಿಂದ ಕಾರ್ಮಿಕರನ್ನು ನವ ಗುಮಾಮಗಿರಿಗೆ ತಳ್ಳಲ್ಪಡುವಂತಾಗಿದೆ. ಇದರ ವಿರುದ್ದ ಎಲ್ಲ ಕಾರ್ಮಿಕರು ಒಂದಾಗಿ ತೀವ್ರತೆರನಾದ ಚಳುವಳಿಗೆ ಮುಂದಾಗಬೇಕು ಎಂದರು.

ದೇಶದ ಹಾಗೂ ರಾಜ್ಯದ ಐಕ್ಯತೆ ಹಾಗೂ ಸೌಹಾರ್ದತೆಗೆ ಬಿಜೆಪಿ ಹಾಗೂ ಸಂಘಪರಿವಾರಗಳು ಧಕ್ಕೆ ತರುತ್ತಿರುವುದು ಅತ್ಯಂತ ಅಪಾಯಕಾರಿಯಾಗಿದೆ. ಆಡಳಿತ ನಡೆಸುತ್ತಿರುವ ಮುಖ್ಯಮಂತ್ರಿ ಹಾಗೂ ಗೃಹ ಮಂತ್ರಿಗಳೇ ಪ್ರಚೋದನಕಾರಿ ಮತ್ತು ಹೊಣೆಗೇಡಿತನದ ಹೇಳಿಕೆ ನೀಡುತ್ತಿರುವುದು ಸಂವಿಧಾನ ಹಾಗೂ ಪ್ರಜಾಪ್ರಭುತ್ವಕ್ಕೆ ಎಸಗುತ್ತಿರುವ ದ್ರೋಹವಾಗಿದೆ ಎಂದು ಕಿಡಿಕಾರಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಿಪಿಐ(ಎಂ) ಪಕ್ಷದ ಮತ್ತೋರ್ವ ರಾಜ್ಯ ಸಮಿತಿ ಸದಸ್ಯ ಕಾಂ॥ ಶಾಂತಾರಾಮ್ ನಾಯಕ್ ಮಾತನಾಡಿ, ಕೇಂದ್ರ ಮತ್ತು ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಸರಕಾರಗಳು ರೈತ–ಕಾರ್ಮಿಕರನ್ನು ಬೀದಿಪಾಲು ಮಾಡಿ, ದೇಶದ ಆಸ್ತಿಗಳನ್ನು ಬಹುರಾಷ್ಟೀಯ ಕಂಪನಿಗಳಿಗೆ ಒತ್ತೆ ಇಡಲಿಕ್ಕೆ ಮುಂದಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಕಾಂ॥ ಮಹೇಶ ಪತ್ತಾರ ಮಾತನಾಡಿ, ಧಾರವಾಡ ಜಿಲ್ಲಾವ್ಯಾಪ್ತಿಯಲ್ಲಿ ಜನರ ಬದುಕು ಹಸನಾಗಲು ಅನೇಕ ಹೋರಾಟ, ಕಾರ್ಯಕ್ರಮಗಳನ್ನು ನಡೆಸಲಾಗಿದೆ. ರೈತ–ಕಾರ್ಮಿಕರು ಹಾಗೂ ಜನಸಾಮಾನ್ಯರ ಬದುಕಿಗೆ ಅಪಾಯ ತಂದೊಡ್ಡುತ್ತಿರುವ ಸರಕಾರಗಳ ನೀತಿಗಳ ವಿರುದ್ಧ ಪ್ರಬಲ ಹೋರಾಟಕ್ಕೆ ಜನತೆ ಮುಂದಾಗಬೇಕು ಎಂದರು.

ಬಿ.ಎನ್.ಪೂಜಾರಿ ಪ್ರಾಸ್ತಾವಿಕವಾಗಿ ಮಾತನಾಡಿದರು, ಬಸವರಾಜ ಪೂಜಾರ ನಿರ್ವಹಿಸಿದರು. ಗುರುಸಿದ್ದಪ್ಪ ಅಂಬಿಗೇರ ವಂದಿಸಿದರು.

ಪ್ರತಿನಿಧಿ ಅಧಿವೇಶನ:

ಎಂ.ಎಸ್ ಹಡಪದ, ಬಿ.ಎನ್ ಪೂಜಾರಿ, ಬಸವರಾಜ ಪೂಜಾರ, ಜನತ್‌ಭೀ ಮುಲ್ಲಾ ಒಳಗೊಂಡ ಅಧ್ಯಕ್ಷೀಯ ಮಂಡಳಿ ಪ್ರತಿನಿಧಿ ಅಧಿವೇಶನ ನಡೆಸಿಕೊಟ್ಟಿತು. 19 ಶಾಖೆಗಳಿಂದ 56 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯದರ್ಶಿ ಮಹೇಶ ಪತ್ತಾರ ಮಂಡಿಸಿದ ಕರಡು ವರದಿಯ ಮೇಲೆ 13 ಜನ ಸಂಗಾತಿಗಳು ಮಾತನಾಡಿದರು. ಸಮ್ಮೇಳನವು ಸರ್ವಾನುಮತದಿಂದ ವರದಿಯನ್ನು ಅಂಗೀಕರಿಸಿತು.

ಸಮ್ಮೇಳನದ ನಿರ್ಣಯಗಳು:

1. ತಾಂತ್ರಿಕ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಿಕೊಂಡು ಅಪೂರ್ಣಗೊಂಡ ಕಳಸಾ ಕಾಮಗಾರಿಯನ್ನು ಪೂರ್ಣಗೊಳಿಸಿ ಮಹದಾಯಿ ನದಿ ನೀರನ್ನು ಪಲಪ್ರಭೆಗೆ ಹರಿಸಲು ಮುಂದಾಗಬೇಕು.
2. ಗಜೇಂದ್ರಗಡ ಸುತ್ತಲ ಗ್ರಾಮಗಳಿಗೆ ಅನುಕೂಲವಾಗಿರುವ ಕೃಷ್ಣಾ ಬಿ ಸ್ಕೀಂ ಸೂಕ್ಷ ನೀರಾವರಿ ಯೋಜನೆಯನ್ನು ಜಾರಿ ಮಾಡಬೇಕು. ಜಿಗಳೂರು ಕೆರೆ ಯೋಜನೆಯನ್ನು ಪೂರ್ಣಗೊಳಿಸಿ ಕುಡಿಯುವ ನೀರಿನ ಯೋಜನೆ ಜಾರಿಮಾಡಬೇಕು.
3. ಬೆಳವಣಕಿ ಭಗತ್‌ಸಿಂಗ್ ಆಶ್ರಯ ಕಾಲನಿಗೆ ಮೂಲಭೂತ ಸೌಕರ್ಯ ಕಲ್ಪಿಸಬೇಕು.
4. ಹುಬ್ಬಳ್ಳಿ ಸ್ಮಾರ್ಟ ಸಿಟಿ ಯೋಜನೆಯನ್ನು ಭ್ರಷ್ಟಾಚಾರ ರಹಿತವಾಗಿ, ಜನಸ್ನೇಹಿಯಾಗಿ ವೈಜ್ಞಾನಿಕವಾಗಿ ಜಾರಿಮಾಡಬೇಕು.
5. ರೋಣ ತಾಲೂಕಿನ ಮಲಪ್ರಭಾ ಕೊನೆಯಂಚಿನ ನೀರಾವರಿ ಯೋಜನೆ ಜಾರಿಯಾಗಬೇಕು.
6. ಕೋವಿಡ್ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿದ ಎಲ್ಲಾ ಕಾರ್ಮಿಕರಿಗೆ ಪರಿಹಾರ ವಿತರಿಸಬೇಕು.
7. ದೆಹಲಿ ರೈತರ ಹೋರಾಟಕ್ಕೆ ಒಂದು ವರ್ಷ ನವೆಂಬರ್ 26–27 ಹೋರಾಟ ಯಶಸ್ವಿಗೊಳಿಸಲು ಕರೆ. ಮುಂತಾದ ನಿರ್ಣಯಗಳನ್ನು ಸಿಪಿಐಎಂ ಧಾರವಾಡ ಜಿಲ್ಲಾ 12ನೇ ಸಮ್ಮೇಳನವು ಕೈಗೊಂಡಿತು.





ಮಹೇಶ ಪತ್ತಾರ



ಎಂ.ಎಸ್. ಹಡಪದ

ಧಾರವಾಡ ಹಾವೇರಿ ಮತ್ತು ಗದಗ ಪ್ರತ್ಯೇಕ ಸಂಘಟನಾ ಸಮಿತಿಗಳ ಆಯ್ಕೆ:

ಸಿಪಿಐಎಂ ಧಾರವಾಡ ಜಿಲ್ಲಾ 12ನೇ ಸಮ್ಮೇಳನವು ಧಾರವಾಡ ಹಾವೇರಿ ಮತ್ತು ಗದಗ ಪ್ರತ್ಯೇಕ ಸಂಘಟನಾ ಸಮಿತಿಗಳನ್ನು ಆಯ್ಕೆಮಾಡಿತು. ಧಾರವಾಡ ಜಿಲ್ಲಾ ಸಂಘಟನಾ ಸಮಿತಿ ಕಾರ್ಯದರ್ಶಿಯಾಗಿ ಮಹೇಶ ಪತ್ತಾರ ಸಂಘಟನಾ ಸಮಿತಿ ಸದಸ್ಯರಾಗಿ ಬಿ.ಎನ್.ಪೂಜಾರಿ, ಬಿ.ಐ.ಈಳಿಗೇರ, ಬಸವರಾಜ ಪೂಜಾರ, ವಿನಾಯಕ ಕುರುಬರ, ಎ.ಎಂ.ಖಾನ್, ರೇಣುಕಾ ಕಹಾರ, ಗುರುಸಿದ್ದಪ್ಪ ಅಂಬಿಗೇರ, ರಾಘವೇಂದ್ರ ಪಾಟೀಲ ಆಯ್ಕೆಯಾಗಿದ್ದಾರೆ. ಗದಗ ಜಿಲ್ಲಾ ಸಂಘಟನಾ ಸಮಿತಿ ಕಾರ್ಯದರ್ಶಿಯಾಗಿ ಎಂ.ಎಸ್.ಹಡಪದ ಸಂಘಟನಾ ಸಮಿತಿ ಸದಸ್ಯರಾಗಿ ಬಸವರಾಜ ಮಂತೂರ, ಬಾಲು ರಾಠೋಡ, ಮಹೇಶ ಹಿರೇಮಠ, ಪೀರು ರಾಠೋಡ, ಫಯಾಜ್ ತೋಟದ, ಮಾರುತಿ ಚಿಟಗಿ, ಸಂಕಪ್ಪ ಕುರಹಟ್ಟಿ, ದಾಕ್ಷಾಯಿಣಿ ಶಿರೋಳ ಆಯ್ಕೆಯಾಗಿದ್ದಾರೆ.

ಹಿರಿಯ ಸಂಗಾತಿಗಳಿಗೆ ಗೌರವ:

ನರಗುಂದ ನವಲಗುಂದ ರೈತ ಬಂಡಾಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದ, ಜನಪರ ವಿಜ್ಞಾನ ಚಳುವಳಿಗೆ ಕೊಡುಗೆ ನೀಡಿದ, ರೈತ ಮುಖಂಡರಾಗಿರುವ ಮತ್ತು ಈ ಹಿಂದೆ ಪಕ್ಷದ ಮೂರು ಅವದಿಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ ಕಾಂ॥ ಬಿ.ಎಸ್.ಸೊಪ್ಪಿನ, ವಿಮಾ ನೌಕರರ ಮುಖಂಡರಾಗಿ, ಶಾಸ್ತ್ರೀಯ ಸಂಗೀತದ ವಿಮರ್ಶಕರಾಗಿ, ಕಾರ್ಮಿಕ ಮುಖಂಡರಾಗಿ ಮತ್ತು ಈ ಹಿಂದೆ ಪಕ್ಷದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ ಕಾಂ॥ ಆರ್.ಎಚ್.ಆಯಿ ಹಾಗೂ ಹಾವೇರಿಯ ಕರ್ನಾಟಕ ಏಕೀಕರಣ ಹೋರಾಟ ಸೇರಿದಂತೆ ಹಲವು ಹೋರಾಟಗಳಲ್ಲಿ ಬಾಗಿಯಾಗಿದ್ದ ಅತ್ಯಂತ ಹಿರಿಯ ಸಂಗಾತಿ ಕಾಂ॥ ರುದ್ರಪ್ಪ ಜಾಬೀನ ಅವರನ್ನು ಸಮ್ಮೇಳನ ಸಂದರ್ಭದಲ್ಲಿ ಸನ್ಮಾನಿಸಲಾಯಿತು.









'ದ್ವೇಷದ ವಾಹಕರಾಗಬೇಡಿ, ಇತರರನ್ನು ಗೌರವಿಸಿ, ಪ್ರೀತಿಸಿ': ಜಿ.ಎನ್.ದೇವಿ

ಎನ್.ಕೆ. ವಸಂತರಾಜ್

'ರಾಜಕೀಯ ಪಕ್ಷಗಳು ಸಂಘಟನೆಗಳು ಏನೇ ಹೇಳಲಿ, ನೀವೆಂದೂ ದ್ವೇಷದ ವಾಹಕರಾಗಬೇಡಿ. ಸೌಹಾರ್ದದ ಬದುಕು ನಿಮ್ಮ ಗುರಿಯಾಗಿರಲಿ. ಇತರರನ್ನು ಗೌರವಿಸಿ ಪ್ರೀತಿಸುವುದನ್ನು ಕಲಿತುಕೊಳ್ಳಿ. ಭಾರತದಲ್ಲಿ ಇಂದು ಎಲ್ಲರಿಗೂ ಸಮಾನವಾಗಿರುವ ಅವಕಾಶಗಳಿವೆ. ಆದರೆ ಇಂದು ಕೆಲವರಿಗೆ ಅದನ್ನು ನಿರಾಕರಿಸುವ ಪ್ರಯತ್ನ ನಡೆಯುತ್ತಿದೆ. ಇದನ್ನು ವಿದ್ಯಾರ್ಥಿಗಳು ವಿರೋಧಿಸಬೇಕು. ಇಂದು ಮನುಕುಲವೂ, ಮಾನವೀಯತೆಯೂ ತೀವ್ರ ಅಪಾಯದಲ್ಲಿದೆ. ವಿದ್ಯಾರ್ಥಿಗಳು ಮನಸ್ಸು ಮಾಡಿದರೆ ಅದನ್ನು ಉಳಿಸಿಕೊಳ್ಳಲು ಸಾಧ್ಯ'. ಹೀಗೆಂದವರು ಡಾ.ಜಿ.ಎನ್.ದೇವಿ. ಅವರದೇ ಆಯ್ದ ಬರಹಗಳ ಪುಸ್ತಕ ಬಿಡುಗಡೆ ಮತ್ತು ಸಂವಾದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಹೀಗೆಂದರು. 'ಜಿ.ನ್.ದೇವಿ – ಆಯ್ದ ಬರಹಗಳು' ಪುಸ್ತಕ ಬಿಡುಗಡೆ ಮತ್ತು ಸಂವಾದ ಕಾರ್ಯಕ್ರಮವನ್ನು, ಕ್ರಿಯಾ ಮಾಧ್ಯಮ ಮತ್ತು ಉಡುಪಿಯ ಎಂ.ಜಿ.ಎಂ ಕಾಲೇಜು ಜಂಟಿಯಾಗಿ ಕಾಲೇಜಿನಲ್ಲಿ ಅಕ್ಟೋಬರ್ 29ರಂದು ಏರ್ಪಡಿಸಿದ್ದವು. ಇದು ಕ್ರಿಯಾ ಮಾಧ್ಯಮ ಪ್ರಕಟಿಸಲಿರುವ 50 ಪ್ರಮುಖ ಆಧುನಿಕ ಭಾರತೀಯ ಚಿಂತಕರ ಆಯ್ದ ಬರಹಗಳ ಪುಸ್ತಕಗಳ ಮಾಲಿಕೆಯಾದ 'ಬೆಳಕಿನ ಬೆಳೆ'ಯ ಮೊದಲ ಕೃತಿಯಾಗಿತ್ತು.

ಈ ಸಮಾರಂಭದಲ್ಲಿ ದೇವಿ ಅವರ ಸರದಿ ಬಂದಾಗ ಸಭಾಂಗಣದಲ್ಲಿ ಕುಳಿತಿದ್ದ ಎಲ್ಲ ವಿದ್ಯಾರ್ಥಿಗಳನ್ನು ವೇದಿಕೆಗೆ ಕರೆದು ಕುಳ್ಳಿರಿಸಿ, ಅವರ ಜತೆಗೆ ನಿಜವಾದ ಅರ್ಥದಲ್ಲಿ ಸಂವಾದ ನಡೆಸಿದರು. 'ಬೆಳಕಿನ ಬೆಳೆ' ಮಾಲಿಕೆಯಲ್ಲಿ ಮುಂಬರಲಿರುವ ಚಿಂತಕರಾದ ರವೀಂದ್ರನಾಥ ಟಾಗೋರ್, ದಾದಾಭಾಯಿ ನವರೋಜಿ, ಅಮರ್ತ್ಯ ಸೇನ್, ಆನಂದ ಕುಮಾರಸ್ವಾಮಿ ಮುಂತಾದವರ ಬದುಕಿನ ಸಾಧನೆ, ಮಹತ್ವಗಳನ್ನು ವಿವರಿಸುತ್ತಾ ಅವರ ಬರಹಗಳನ್ನು ಯಾಕೆ ಓದಬೇಕು ಎಂದು ತಿಳಿಸುವ ಮೂಲಕ ಮಾಲಿಕೆಯನ್ನು ಪರಿಚಯಿಸಿದರು. ಈ ಚಿಂತಕರ ವಿಚಾರಗಳಿಗೆ ಸಾವಿಲ್ಲ ಎಂಬುದನ್ನು ಪ್ರತಿಪಾದಿಸಿದರು. ಸ್ವಂತ ಆಲೋಚನೆ, ವಿಚಾರಗಳಿಗೆ ಒದಗಿರುವ ತೀವ್ರ ಅಪಾಯಗಳು ಮತ್ತು ಅದನ್ನು ಪ್ರತಿರೋಧಿಸಬೇಕಾದ ಅಗತ್ಯವನ್ನು, '2+2 = 5' ಎಂದು ಎಲ್ಲರನ್ನು ಬೆದರಿಸುವ ಮೂಲಕ ಸಾಧಿಸಲು ಪ್ರಯತ್ನಿಸುವ ಕತೆಯ ಮೂಲಕ ಹೇಳಿದರು. ಯಾವುದೇ ಬೆಲೆ ತೆತ್ತಾದರೂ ಸತ್ಯವನ್ನು ಉಳಿಸಿಕೊಳ್ಳಲು ಮುಂದಾಗಬೇಕಿದೆ ಎಂದರು.

ರಂಗಕರ್ಮಿ ಡಾ.ಶ್ರೀಪಾದ ಭಟ್ ಪುಸ್ತಕದ ಆಯ್ದ ಭಾಗಗಳನ್ನು ಓದುವ ಮೂಲಕ ಪುಸ್ತಕವನ್ನು ಬಿಡುಗಡೆ ಮಾಡಿದ್ದು ಸಹ ಸಮಾರಂಭದ ಇನ್ನೊಂದು ವಿಶೇಷವಾಗಿತ್ತು. ಇದಕ್ಕಿಂತ ಮೊದಲು ಪ್ರಸಿದ್ಧ ಚಿಂತಕ ಡಾ. ರಾಜೇಂದ್ರ ಚೆನ್ನಿ ಅವರು ಪುಸ್ತಕದಲ್ಲಿರುವ ದೇವಿ ಅವರ ಪ್ರಬಂಧಗಳಲ್ಲಿ ಹಾಗೂ ಅವರ ದೊಡ್ಡ ಸಂಖ್ಯೆಯ ಪುಸ್ತಕಗಳಲ್ಲಿ ವ್ಯಕ್ತವಾಗಿರುವ ಅವರ ಚಿಂತನೆಗಳ ಸಾರ ಮತ್ತು ಬದುಕಿನ ಸಾಧನೆಗಳ ಕುರಿತು ಮಾತನಾಡಿದರು. ಜಿ.ಎನ್.ದೇವಿ ಅವರ ಮೂಲ ಲೇಖನಗಳ ಡಾ.ಎಂ.ಜಿ.ಹೆಗಡೆ ಅವರ ಅನುವಾದವನ್ನು ಅವರು 'ಮಾಂತ್ರಿಕ ಅನುವಾದ' ಎಂದು ಕರೆದರು. ಎಂ.ಜಿ.ಎಂ. ಕಾಲೇಜಿನ ಪ್ರಿನ್ಸಿಪಾಲ್ ಮತ್ತು ದೇವಿ ಅವರ ಭಾರತದ ಭಾಷೆಗಳ ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಡಾ.ದೇವಿದಾಸ್ ಎಸ್. ನಾಯ್ಕ ಅವರು ಅಧ್ಯಕ್ಷತೆ ವಹಿಸಿದ್ದರು.

ಮಾಲಿಕೆಯ ಸಂಪಾದಕರೂ ಬಿಡುಗಡೆಯಾದ ಪುಸ್ತಕದ ಅನುವಾದಕರೂ ಆಗಿದ್ದ ಡಾ.ಎಂ.ಜಿ.ಹೆಗಡೆ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಮಾಲಿಕೆ, ಪುಸ್ತಕದ ಹಾಗೂ ಎಲ್ಲ ಅತಿಥಿಗಳ ಪರಿಚಯವನ್ನು ಮಾಡಿದರು. ಇತ್ತೀಚೆಗೆ ಅಗಲಿದ ಮತ್ತು ಈ ಮಾಲಿಕೆಯ ಮೂಲಪ್ರೇರಕರಲ್ಲಿ ಒಬ್ಬರಾಗಿದ್ದ ಡಾ.ವಿಠ್ಠಲ ಭಂಡಾರಿ ಅವರಿಗೆ ನುಡಿನಮನವನ್ನೂ ಸಲ್ಲಿಸಿದರು. 'ಬೆಳಕಿನ ಬೆಳೆ' ಮಾಲಿಕೆಯ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ ಬೆಲೆಯಲ್ಲಿ ಕೊಡಬೇಕು ಎಂಬ ದೇವಿ ಅವರ ಸೂಚನೆಯನ್ನು ಜಾರಿ ಮಾಡುತ್ತೇವೆ. ಹಾಗೂ ಈ ಮಾಲಿಕೆಯ ಪುಸ್ತಕಗಳನ್ನು ಇಟ್ಟುಕೊಂಡು ವಿವಿಧ ಕಾಲೇಜುಗಳಲ್ಲಿ ವಾಚನಾಭಿರುಚಿ ಕಾರ್ಯಾಗಾರಗಳನ್ನು ಮಾಡುವ ಮೂಲಕ ಡಾ.ವಿಠ್ಠಲ ಭಂಡಾರಿ ಅವರ ಕನಸನ್ನು ನನಸು ಮಾಡುತ್ತೇವೆ ಎಂದು ವಂದನಾರ್ಪಣೆ ಮಾಡುತ್ತಾ ಕ್ರಿಯಾ ಮಾಧ್ಯಮದ ವಸಂತರಾಜ ಎನ್.ಕೆ. ಹೇಳಿದರು. ಎಂಜಿ.ಎಂ.ಕಾಲೇಜಿನ ಕನ್ನಡ ವಿಭಾಗದ ಡಾ. ಪುತ್ತಿ ವಸಂತಕುಮಾರ್ ಕಾರ್ಯಕ್ರಮ ನಿರೂಪಿಸಿದರು.

'ಜಿ.ಎನ್. ದೇವಿ-ಆಯ್ದ ಬರಹಗಳು' ಪರಿಚಯ



ಆಧುನಿಕ ಭಾರತೀಯ ಚಿಂತನೆ ಎಂದರೆ 'ಪ್ರಾಚೀನ ಭಾರತೀಯ' ಅಥವಾ 'ಆಧುನಿಕ ಪಾಶ್ಚಿಮಾತ್ಯ' ಚಿಂತನೆಗಳ ಕಾಪಿಯಷ್ಟೇ ಅಥವಾ ಅದರ ಭಾಷ್ಯವಷ್ಟೇ ಎಂಬುದು ಸಾಮಾನ್ಯ ಅನಿಸಿಕೆ. ಕನ್ನಡದಲ್ಲಿ ಪ್ರಕಟವಾದ ಪುಸ್ತಕಗಳೂ ಅದೇ ಚಿತ್ರಣ ನೀಡುತ್ತವೆ. ಇಂತಹ ಸಂದರ್ಭದಲ್ಲಿ ಆಧುನಿಕ ಭಾರತೀಯ ಚಿಂತಕರ ಆಯ್ದ ಬರಹಗಳ ಮೂಲಕ ಅವರ ಚಿಂತನೆ ಪರಿಚಯ ಮಾಡುವ 'ಬೆಳಕಿನ ಬೆಳೆ' ಎಂಬ ಮಾಲಿಕೆ ಗಮನ ಸೆಳೆದಿತ್ತು. ಈ ಮಾಲಿಕೆಯಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಿಸಿದ 7 ಪುಸ್ತಕಗಳು ಗಮನ ಸೆಳೆದಿದ್ದವು. ಆದರೆ ಈ ಮಾಲಿಕೆಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಮುಂದುವರೆಸುತ್ತಿಲ್ಲ ಎಂದು ತಿಳಿದು ಬಂದಿದೆ.. ..

ಈ ಮಾಲಿಕೆಯ ಪ್ರಕಟಣೆಯನ್ನು ಡಾ.ಎಂ.ಜಿ. ಹೆಗಡೆ ಅವರ ಸಂಪಾದಕತ್ವದಲ್ಲಿ ಮುಂದುವರೆಸಿ ಪೂರ್ಣಗೊಳಿಸುವ ಜವಾಬ್ದಾರಿಯನ್ನು ಕ್ರಿಯಾ ಮಾಧ್ಯಮ ವಹಿಸಿಕೊಂಡಿದೆ. 'ಬೆಳಕಿನ ಬೆಳೆ' ಮಾಲಿಕೆಯ ಎಂಟನೆಯ ಪುಸ್ತಕವಾಗಿ ಮತ್ತು ಈ ಮಾಲಿಕೆಯಲ್ಲಿ ಕ್ರಿಯಾ ಮಾಧ್ಯಮದ ಪ್ರಕಟಣೆಗಳಲ್ಲಿ ಮೊದಲನೆಯದಾಗಿ, ಪ್ರಸಿದ್ಧ ಚಿಂತಕ ಗಣೇಶ ದೇವಿ ಅವರ ಆಯ್ದ ಬರಹಗಳ ಪುಸ್ತಕ ಪ್ರಕಟವಾಗಿ (ಅಕ್ಟೋಬರ್ 29ರಂದು) ಉಡುಪಿಯ ಎಂ.ಜಿ.ಎಂ ಕಾಲೇಜಿನಲ್ಲಿ ಬಿಡುಗಡೆಯಾಗಿದೆ.

ಒರ್ಫಿಯಸ್‌ನ ಹಾಡು, ಅಪೂರ್ಣ ರಕ್ತಕಣ, ಕಳ್ಳನೆನಿಸಿಕೊಂಡ ಅಲೆಮಾರಿ, ಹಿಂಸೆಯ ಪೂರ್ವಾಪರ,

ಭಾಷೆಯ ಇರವು: ಜ್ಞಾನ, ಸಮಾಜ ಮತ್ತು ವಾಚೋಹೀನತೆ, ವಾಚೋಹೀನತೆ, ಸ್ಮೃತಿಯ ಭವಿಷ್ಯ – ದೇವಿ ಅವರ ಈ ಐದು ಪ್ರಸಿದ್ಧ ಲೇಖನಗಳು ಪುಸ್ತಕದಲ್ಲಿ ಇವೆ.

ಈ ಸಂದರ್ಭದಲ್ಲಿ ಜಿ.ಎನ್.ದೇವಿ ಅವರ ಕಿರು ಪರಿಚಯ, ಅನುವಾದಕರ (ಡಾ.ಎಂ.ಜಿ ಹೆಗಡೆ) ಮಾತುಗಳು, ಡಾ.ರಾಜೇಂದ್ರ ಚೆನ್ನಿ ಅವರು ಪುಸ್ತಕದ ಕುರಿತ ವಿದ್ವತ್ಪೂರ್ಣ ವಿಶ್ಲೇಷಣೆ, ದೇವಿ ಅವರ ಬರಹದ ಸ್ಯಾಂಪಲ್, 'ಬೆಳಕಿನ ಬೆಳೆ' ಮಾಲಿಕೆಯ ಪರಿಚಯ – ನೀಡುವ ಪುಸ್ತಕದ ಆಯ್ದ ಭಾಗಗಳನ್ನು ಇಲ್ಲಿ ಕೊಡುತ್ತಿದ್ದೇವೆ. ಪುಸ್ತಕದ ಮುಖಪುಟ ಜತೆಗಿದೆ.

ಜಿ. ಎನ್. ದೇವಿ – ಕಿರು ಪರಿಚಯ

ಮಹಾರಾಷ್ಟ್ರದ ಪುಣೆಯ ಭೋರ್ ಗ್ರಾಮದಲ್ಲಿ 1950ರ ಆಗಸ್ಟ್ 1 ರಂದು ಜನಿಸಿದ ಗಣೇಶ್ ದೇವಿಯವರು ವಿಮರ್ಶಕ, ಚಿಂತಕ, ಸಂಸ್ಥಾಪಕ, ಸಂಘಟಕ ಮತ್ತು ಶಿಕ್ಷಣ ತಜ್ಞರು.

ಮಹಾರಾಷ್ಟ್ರದ ಶಿವಾಜಿ ವಿಶ್ವವಿದ್ಯಾಲಯ ಮತ್ತು ಲಂಡನ್‌ನ ಲೀಡ್ಸ್ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಪಡೆದ ಅವರು ಲೀಡ್ಸ್ ಮತ್ತು ಯೇಲ್ ವಿಶ್ವವಿದ್ಯಾಲಯಗಳಲ್ಲಿ ಫೆಲೊಶಿಪ್‌ಗಳನ್ನು ಹೊಂದಿದ್ದರು; ಟಿ.ಎಚ್.ಬಿ.ಸೈಮನ್ಸ್ ಫೆಲೋ(1991–92) ಮತ್ತು ಜವಾಹರಲಾಲ್ ನೆಹರು ಫೆಲೋ(1994–96)ಆಗಿದ್ದರು.

ಬರೋಡಾದ ಸಯಾಜಿರಾವ್ ವಿಶ್ವವಿದ್ಯಾಲಯಲದಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದ (1980–96) ಅವರು ವಿಮುಕ್ತ ಮತ್ತು ಅಲೆಮಾರಿ ಬುಡಕಟ್ಟುಗಳು ಮತ್ತು ಆದಿವಾಸಿಗಳ ಭಾಷೆ–ಬದುಕು ಸಂರಕ್ಷಣೆಗಾಗಿ ಕೆಲಸ ಮಾಡಲು ತಮ್ಮ ಶೈಕ್ಷಣಿಕ ವೃತ್ತಿ ಜೀವನವನ್ನು ತ್ಯಜಿಸಿದರು. ಈ ಕೆಲಸದ ಸಮಯದಲ್ಲಿ ಅವರು ಬರೋಡಾದಲ್ಲಿ ಭಾಷಾ ಸಂಶೋಧನ ಮತ್ತು ಪ್ರಕಟಣೆ ಕೇಂದ್ರ, ತೇಜಗಡದಲ್ಲಿ ಆದಿವಾಸಿ ಅಕಾಡೆಮಿಯಂತಹ ಸಂಸ್ಥೆಗಳನ್ನು ಸ್ಥಾಪಿಸಿದರು; ಡಿಎನ್‌ಟಿ ಹಕ್ಕುಗಳ ಕ್ರಿಯಾ ಕೇಂದ್ರದಂತಹ ಉಪಕ್ರಮಗಳಿಗೆ ಚಾಲನೆ ನೀಡಿದರು. ನಂತರ ಅವರು ಇತಿಹಾಸದಲ್ಲಿ ಅತಿ ದೊಡ್ಡ ಭಾಷೆಗಳ ಸಮೀಕ್ಷೆಯಾದ 'ಭಾರತೀಯ ಭಾಷೆಗಳ ಲೋಕ ಸರ್ವೇಕ್ಷಣೆ'ಯನ್ನು ಸುಮಾರು ಮೂರು ಸಾವಿರ ಸ್ವಯಂ ಸೇವಕರ ಸಹಾಯದಿಂದ ನಡೆಸಿ ಐವತ್ತು ಬಹುಭಾಷಾ ಸಂಪುಟಗಳಲ್ಲಿ ಪ್ರಕಟಿಸಿದರು.

ಸದ್ಯ ಧಾರವಾಡದಲ್ಲಿ ನೆಲೆಸಿರುವ ಅವರು ಗಾಂಧಿ–ಅಂಬೇಡ್ಕರ್ ವಿಚಾರಗಳಿಂದ ಸ್ಫೂರ್ತವಾದ 'ದಕ್ಷಿಣಾಯಣ' ಆಂದೋಲನವನ್ನು ಮುನ್ನಡೆಸುತ್ತಿದ್ದಾರೆ. ಮರಾಠಿ, ಗುಜರಾತಿ ಮತ್ತು ಇಂಗ್ಲೀಷ್‌ನಲ್ಲಿ ಸಾಹಿತ್ಯ, ಭಾಷಾಶಾಸ್ತ್ರ, ತತ್ವಶಾಸ್ತ್ರ, ಸಂಸ್ಕೃತಿ ವಿಮರ್ಶೆಯಂತಹ ವಿವಿಧ ಕ್ಷೇತ್ರಗಳಲ್ಲಿ ತೊಂಭತ್ತರಷ್ಟು ಪ್ರಭಾವಶಾಲಿ ಕೃತಿಗಳನ್ನು ಪ್ರಕಟಿಸಿರುವ ಅವರಿಗೆ ಸಾಹಿತ್ಯ ಕ್ಷೇತ್ರದ ಕಾರ್ಯಕ್ಕಾಗಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (ಇಂಗ್ಲೀಷ್ ಸಾಹಿತ್ಯ ವಿಮರ್ಶೆಗಾಗಿ `After Amnesia' ಕೃತಿಗೆ, 1993), ಮಹಾರಾಷ್ಟ್ರ ಫೌಂಡೇಶನ್ ಪ್ರಶಸ್ತಿ (ಮರಾಠಿ ಕೃತಿ 'ವಾನಪ್ರಸ್ಥ'ಕ್ಕೆ, 2007)ಗಳಿಂದ ಹಿಡಿದು, ಯುನೆಸ್ಕೋದ ಲಿಂಗ್ವಾಪ್ಯಾಕ್ಸ್ ಪ್ರಶಸ್ತಿ (ಭಾಷಾ ವೈವಿಧ್ಯದ ಸಂರಕ್ಷಣಾ ಕಾರ್ಯಕ್ಕಾಗಿ, 2011); ಭಾರತ ಸರಕಾರದ ಪದ್ಮಶ್ರೀ (ಆದಿವಾಸಿ–ಬುಡಕಟ್ಟುಗಳ ಸೇವೆಗಾಗಿ, 2014) ಗಳವರೆಗೆ ಪ್ರಶಸ್ತಿಗಳ ಸರಮಾಲೆಯೇ ಅವರಿಗೆ ಸಂದಿದೆ.

'ಅನುವಾದಕರ ಮಾತು'ನಿಂದ

ಹೆಜ್ಜೆ ಹೆಜ್ಜೆಗೂ ಎಡರು ತೊಡರು, ಅನುಮಾನ ಅಪಮಾನ, ಪ್ರತಿಬಂಧ ಪ್ರತಿರೋಧಗಳನ್ನು ಎದುರಿಸುತ್ತ ಅಪಾಯದ ಅಂಚಿನಲ್ಲೇ ನಡೆಯಬೇಕಾದ, ಸಿದ್ಧಿಯ ಖಚಿತ ಭರವಸೆಯೂ ಇಲ್ಲದ ಸಾಧನೆಯ ದಾರಿಯದು. ಈ ಅನುಭವವೇ – ವಾನಪ್ರಸ್ಥದಲ್ಲಿ ಕಲಿತದ್ದು, ಧ್ಯಾನಿಸಿದ್ದು, ಕನಸು ಕಂಡಿದ್ದು, ಅದನ್ನು ನನಸಾಗಿಸಲು ಹೆಣಗಿದ್ದು – ಕಳೆದ ಇಪ್ಪತ್ತೈದು ವರ್ಷಗಳ ದೇವಿಯವರ ಬರವಣಿಗೆಯ ಕೇಂದ್ರವಾಗಿದೆ. 'ಪ್ರತಿ ಪೀಳಿಗೆಯಲ್ಲೂ ಪ್ರತಿ ಶತಮಾನದಲ್ಲೂ ಈ ಜಗತ್ತನ್ನು ಹೆಚ್ಚು ಸುಂದರವೂ ಮಾನವೀಯವೂ ➚

‘ಸರ್ದಾರ್ ಉದಮ್’ ನಲ್ಲಿ ಗೆದ್ದ ಶೂಜಿತ್ ಸರ್ಕಾರ್

ಬಿ. ಶ್ರೀಪಾದ ಭಟ್

ವಿಕಿ ಡೋನರ್, ಪಿಕು ನಂತಹ ಪಕ್ಕಾ ಮಧ್ಯಮವರ್ಗದ, ನಗರ ಪ್ರಜ್ಞೆಯ ಸಿನಿಮಾಗಳಲ್ಲಿ ತೇಲುತ್ತಿದ್ದ ಶೂಜಿತ್ ಇಂತಹ ರಾಜಕೀಯ ಸಿನಿಮಾ ಮಾಡುತ್ತಾನೆ ಎನ್ನುವ ನಿರೀಕ್ಷೆ ಇರಲಿಲ್ಲ ಮತ್ತು ‘ಉರಿ’ ಸಿನಿಮಾದ ಮೂಲಕ ಎಲ್ಲೋ ಒಂದೆಡೆ ಬಲಪಂಥೀಯನಂತೆ ವರ್ತಿಸುತ್ತಿದ್ದ ನಟ ವಿಕಿ ಕೌಸಲ್ ಇದರ ಪ್ರೊಟಗಾನಿಸ್ಟ್ ಆಗಿರುವುದೂ ಸಹ ನನಗೆ ಈ ಸಿನಿಮಾ ಅಂತಹ ಉತ್ಸಾಹ ಮೂಡಿಸಿರಲಿಲ್ಲ.

ಆದರೆ ‘ಉದಮ್’ ಸಿನಿಮಾ ಚೆನ್ನಾಗಿದೆ. ಚಿತ್ರಕತೆ ಬರೆದ ರಿತೇಶ್ ಶಾ ಮತ್ತು ಶುಬೇಂದು ಭಟ್ಟಾಚಾರ್ಯ ಈ ಸಿನಿಮಾದ ಗೆಲುವಿನ ಮುಖ್ಯ ರೂವಾರಿಗಳು. ಚಾರಿತ್ರಿಕ ಸಿನಿಮಾಗಳಿಗೆ ಒಂದು ಫಾರ್ಮ್, ನಿರಂತರ ಹರಿವು, ಕತೆಯ ಲಹರಿ ಮತ್ತು ಬಿಗಿಯಾದ ಬಂಧವನ್ನು ಕಟ್ಟಿಕೊಡಲು non - linear ಚಿತ್ರಕತೆ ಅಗತ್ಯ.

‘ಉದಮ್’ ನ ಆ non - linear ಚಿತ್ರಕತೆ ಇಡೀ ಸಿನಿಮಾವನ್ನು ಎಲ್ಲಿಯೂ ಜಾಳು ಜಾಳಾಗದಂತೆ ಪಾರು ಮಾಡಿದೆ. ಮತ್ತು ಈ ಸಿನಿಮಾದ ಬಹುಮುಖ್ಯ ಘಟ್ಟ ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ದೃಶ್ಯಕ್ಕಾಗಿ ಪ್ರೇಕ್ಷಕ ಕಾತರಿಸುತ್ತಿದ್ದಾಗ ಅದನ್ನು ಕ್ಲೈಮ್ಯಾಕ್ಸ್ ನಲ್ಲಿ ತಂದು ದೀರ್ಘವಾದ ಶಾಟ್ ನ ಮೂಲಕ ಭಾವುಕತೆಯನ್ನು (ಚಾರಿತ್ರಿಕ ಸಿನಿಮಾಗಳಿಗೆ ಇದರಿಂದ ಮುಕ್ತಿಯಿಲ್ಲ) ತುಂಬಿರುವುದು ಸಹ ಚಿತ್ರಕತೆಯ ಯಶಸ್ಸು.

ಎರಡೂವರೆ ಗಂಟೆ ಗಾಢವಾದ ವಿಷಾದ ಮತ್ತು ನಿರ್ವಾತವನ್ನು ಮೀರುವ ತುಡಿತವನ್ನು ಉಂಟುಮಾಡುವ ಹಿನ್ನೆಲೆ ಸಂಗೀತ ಇಲ್ಲಿನ ಮುಖ್ಯ ಅಂಶ ಮತ್ತು ಬೆನ್ನೆಲುಬು.

ಮುಖ್ಯವಾಗಿ ಸ್ವಾತಂತ್ರ್ಯ ಹೋರಾಟಗಾರರನ್ನು, ಕ್ರಾಂತಿಕಾರಿಗಳನ್ನು ಮನುಷ್ಯರಂತೆ ನಿರೂಪಿಸದೆ ಬದಲಿಗೆ ಅತ್ಯುನ್ನತ ಹೀರೋ ಎನ್ನುವ ವೈಭವೀಕರಣದ ಮೂಲಕ ಒಂದು ಬಲಪಂಥೀಯ ಸಂಕೇತವನ್ನು ನಿರ್ಮಿಸಿ ಬಿಡುವ ಅಪಾಯದಿಂದ ‘ಉದಮ್’ ಸಿನಿಮಾ ಪಾರಾಗಿದೆ. ಇದು ಶೂಜಿತ್ ನ ಗೆಲುವು ಮತ್ತು ಆ ಮೂಲಕ ಪ್ರಜಾಪ್ರಭುತ್ವದ ಗೆಲುವು.

ತೋಳ್ಬಲದ ದೇಶಪ್ರೇಮದ ಮೂಲಕ ಹೀರೋನನ್ನು ವಿಜೃಂಭಿಸಿ ಮಧ್ಯಮವರ್ಗದ ಆ ದ್ವೇಷದ ತೃಷೆಯನ್ನು ಹಿಂಗಿಸುವ ನಿರೂಪಣೆಯನ್ನು ಶೂಜಿತ್ ತಿರಸ್ಕರಿಸಿ ಉದಮ್ ಎನ್ನುವ ವ್ಯಕ್ತಿ ಮತ್ತು ಆ ಕಾಲಘಟ್ಟದ ಯಥಾವತ್ತಾದ ನಿರ್ಲಿಪ್ತ ನಿರೂಪಣೆಗಳು, ಈ ಸಿನಿಮಾವು ಮತ್ತೊಂದು ಎದೆತಟ್ಟಿಕೊಳ್ಳುವ ಹುಸಿ ದೇಶಪ್ರೇಮಿಗಳ ಸಿನಿಮಾವಾಗುವುದರಿಂದ ಬಚಾವ್ ಮಾಡಿದೆ. ಇಂದಿನ ಫ್ಯಾಸಿಸಂ ಸಂದರ್ಭದಲ್ಲಿ ಜನಪರ ಸಿನಿಮಾದ ನಿಜ ಮಾದರಿಯನ್ನು ತೋರಿಸಿಕೊಟ್ಟಿದೆ.

ಕ್ರಾಂತಿಕಾರಿ ಮತ್ತು ಅವನ /ಅವಳ ಸಿದ್ದಾಂತ, ಅವರ ಸಂಗಾತಿಗಳು, ಅವರ ಖಾಸಗಿ ಬದುಕು ಎಲ್ಲವೂ ಒಂದು ಸ್ಥಿತಪ್ರಜ್ಞತೆಯಲ್ಲಿ ನಿರೂಪಿತವಾಗಿದೆ.

ಭಾವುಕತೆಯೂ ಹುಸಿಯಾಗದಂತೆ ಮತ್ತು ಮುಖ್ಯವಾಗಿ ಇಲ್ಲಿ ‘ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ’ ಎನ್ನುವ ತಾತ್ವಿಕತೆಗೆ ಬದ್ದರಾಗಿ non - linear ಚಿತ್ರಕತೆ ಬರೆದ ಶಾ ಮತ್ತು ಶುಬೇಂದು ಇಬ್ಬರಿಗೆ ಶರಣು. ಮುಖ್ಯವಾಗಿ ಇತಿಹಾಸದ ಗ್ರಹಿಕೆ, ನಿರ್ವಹಣೆ ಎರಡೂ ಹಳಿ ತಪ್ಪದಿರುವುದು ಈ ಸಿನಿಮಾದ ಶಕ್ತಿ.



ರೇಮಂಡ್ ವಿಲಿಯಮ್ ‘ವಿಚಾರಗಳಿಗೆ ಇತಿಹಾಸವಿದೆ ಎನ್ನುವುದು ಅಷ್ಟು ಸತ್ಯವಲ್ಲ. ಸಮಾಜಗಳಿಗೆ ಇತಿಹಾಸವಿದೆ. ಆಗ ವಿರುದ್ಧವಾಗಿರುವ ವಿಚಾರಗಳು ಕೊನೆಗೆ ಒಂದೇ ಸಾಮಾಜಿಕ ಪ್ರಕ್ರಿಯೆಯ ಭಾಗವಾಗುತ್ತವೆ’ ಎಂದು ಹೇಳುತ್ತಾನೆ. ‘ಉದಮ್’ ಸಿನಿಮಾದ ವಿಷಯದಲ್ಲಿಯೂ ಇದು ನಿಜವಾಗಿದೆ ಮತ್ತು ಇದು ಸಮಾಧಾನಕರ ಅಂಶ.

ಕ್ರಾಂತಿ ಎಂಬುದು ಅಂಹಿಸೆಯೂ ಅಥವಾ ಹಿಂಸೆಯೋ? ವೈರುದ್ಯಗಳಿವೆ. ಆದರೆ ಆ ವಿಚಾರಗಳು ಎಂದಿಗೂ ಇತಿಹಾಸವಲ್ಲ. ಭಗತ್ ಸಿಂಗ್, ಉದಮ್, ಗಾಂಧಿ, ನೆಹರೂ ಮುಂತಾದವರ ಆ ಸ್ವಾತಂತ್ರ್ಯ ಹೋರಾಟದ ಎಲ್ಲಾ ಪ್ರಕ್ರಿಯೆಗಳು ಮಾತ್ರ ಇತಿಹಾಸ. ಅವರ ವಿಚಾರಗಳಲ್ಲ.

ಆದರೆ ಬಲಪಂಥೀಯ ಮತಾಂದರು ವಿಚಾರಗಳನ್ನು ಇತಿಹಾಸ ಎಂದು ಬಿಂಬಿಸುವ ಆ ವಿನಾಶಕಾರಿ ಧೋರಣೆಯನ್ನು ತಬ್ಬಿಕೊಂಡಿದ್ದ ಬಾಲಿವುಡ್ ಸಿನಿಮಾಗಳಿಗಿಂತ ಸಂಪೂರ್ಣವಾಗಿ ಬಿನ್ನವಾಗಿ ನಿಲ್ಲುವ ‘ಸರ್ದಾರ್ ಉದಮ್’ ಈ ಕಾರಣಕ್ಕಾಗಿ ಮಹತ್ವದ ಸಿನಿಮಾ. ಇತಿಹಾಸವನ್ನು ವ್ಯಕ್ತಿಯ ಮೂಲಕ ನೋಡದೆ ವ್ಯಕ್ತಿ ಮತ್ತು ಘಟನೆಗಳ ಕೊಲಾಜ್ ಮೂಲಕ ಗ್ರಹಿಸಿ ಶೂಜಿತ್ ನಮಗೆ ದೊಡ್ಡ ಉಪಕಾರ ಮಾಡಿದ್ದಾನೆ.

ವ್ಯಕ್ತಿಯನ್ನು iconicಗೊಳಿಸುವ, ದೇಶಪ್ರೇಮ ಭಾವುಕವಾಗುವ ದೃಶ್ಯಗಳಲ್ಲಿ ‘ಬ್ರೆಕ್ಟೇರಿಯನ್’ ತಂತ್ರ ಹೆಣೆದ ಶೂಜಿತ್ ಆ ಮೂಲಕ ಇಡೀ ಸಿನಿಮಾವನ್ನು ಎಲ್ಲರೂ ಒಂದಾಗಿ ಬಾಳುವ ದಡಕ್ಕೆ ತಂದಿದ್ದಾನೆ. ಇದೂ ಸಹ ಮುಖ್ಯ. ಉದಾಹರಣೆಗೆ ಸ್ವಾತಂತ್ರ್ಯ ಬಂದ ನಂತರ’ ನೀನು ಏನು ಮಾಡುತ್ತೀ’ ಎಂದು ಪ್ರಶ್ನಿಸಿದಾಗ ಭಗತ್ ಸಿಂಗ್ ‘ನಾನು ಮೊದಲು ಚಾರ್ಲಿ ಚಾಪ್ಲಿನ್ ಸಿನಿಮಾ ನೋಡತೀನಿ, ವೈನ್ ಕುಡೀತೀನಿ, ಉಣತೀನಿ, ಮಲಗತೀನಿ’ ಅಂತಾನೆ. ಇದು ಬ್ರೆಕ್ಟೇರಿಯನ್ ತಂತ್ರ. ಒಬ್ಬ ಕ್ರಾಂತಿಕಾರಿ ನಮ್ಮಂತಿದ್ದಾನಲ್ಲ ಎನ್ನುವುದೇ ನಮಗೆ ಹೃದಯಂಗಮವಾಗಿ ತಟ್ಟುತ್ತದೆ. ಈ ಸಿನಿಮಾದಲ್ಲಿ ಇಂತಹ ಹಲವು ಬ್ರೆಕ್ಟೇರಿಯನ್ ದೃಶ್ಯಗಳಿವೆ.

ಇತಿಹಾಸವನ್ನು ಸಿನಿಮಾ ಚೌಕಟ್ಟಿಗೆ ಒಗ್ಗಿಸುವಾಗ ಅದರ ಸಂಕೀರ್ಣತೆ,ವೈರುದ್ಯಗಳು,ಮತ್ತು ಸಾಂದರ್ಭಿಕ ಸನ್ನಿವೇಶಗಳನ್ನು ವಸ್ತುನಿಷ್ಠವಾಗಿ ನಿರೂಪಿಸಿರುವ ಶೂಜಿತ್ ಅನೇಕ ಮಿತಿಗಳ ನಡುವೆಯೂ ಗೆದ್ದಿದ್ದಾನೆ ಮತ್ತು ಬಲಪಂಥೀಯರಿಗೆ ಎದೆ ತಟ್ಟಿಕೊಳ್ಳುವ ಅಥವಾ ದಾಳಿ ಮಾಡುವ ಎರಡೂ ಅವಕಾಶಗಳನ್ನು ಕೊಟ್ಟಿಲ್ಲ. ಇದೇನು ಕಡಿಮೆ ಸಾಧನೆಯಲ್ಲ.

ಭಾರತವೆಂದರೇನು? ಭಾರತೀಯರೆಂದರೆ ಯಾರು ಎನ್ನುವ ಸಂಕೀರ್ಣತೆ ಎಲ್ಲಿಯೂ ಇತಿಹಾಸವಾಗದಂತೆ ಎಚ್ಚರ ವಹಿಸಿರುವ ಶೂಜಿತ್ ನಿಜಕ್ಕೂ ಅತ್ಯಂತ ಮಹತ್ವದ ಸಿನಿಮಾ ಕೊಟ್ಟಿದ್ದಾನೆ. ಅವನಿಗೆ ಥ್ಯಾಂಕ್ಸ್.

➘ ಆಗಿಸಲು ಚಿಮ್ಮುವ ಮನುಷ್ಯ ಚೈತನ್ಯ’ದಲ್ಲಿ ಅಪಾರವಾದ ಭರವಸೆ ಅವರ ವಾನಪ್ರಸ್ಥದ ಹಿಂದಿನ ಚೋದನೆಯಾಗಿರುವಂತೆ ‘ನಮ್ಮೆಲ್ಲರಿಗೂ ಲಭ್ಯವಿರುವ ಮಾನವೀಯ ಚೈತನ್ಯವನ್ನು ಮನುಕುಲ ಕಾಪಿಟ್ಟುಕೊಳ್ಳಬೇಕಾದರೆ ನಮ್ಮದೇ ಕಾಲದಲ್ಲಿ ನಾವು ಓರ್ಫಿಯಸ್‌ನ ಹಾಡನ್ನು ಹಾಡಲೇಬೇಕು’ ಎಂಬ ಒತ್ತಾಸೆ ಅವರ ಬರವಣಿಗೆಯ ಹಿಂದಿನ ಪ್ರೇರಕ ಶಕ್ತಿಯಾಗಿದೆ. ಈ ಇಪ್ಪತ್ತೈದು ವರ್ಷಗಳ ಬರವಣಿಗೆಯಿಂದ ಆಯ್ದ ಕೆಲವು ಮುಖ್ಯ ಲೇಖನಗಳ ಕನ್ನಡಾನುವಾದ ಪ್ರಸ್ತುತ ಸಂಪುಟದಲ್ಲಿದೆ.

ಆರಂಭದ ಮೂರು ಲೇಖನಗಳು ದೇವಿಯವರ ‘ತೇಜಗಡ ಪ್ರಯೋಗ’ವನ್ನು ಕುರಿತು ಹೇಳುವ ನೆಪದಲ್ಲಿ, ನಿಡುಗಾಲ ಪರೀಕ್ಷಿಸದೇ ಒಪ್ಪಿಕೊಂಡು ಈಗ ನಮ್ಮ ವಾಡಿಕೆಯ ಗ್ರಹಿಕೆಯ ಭಾಗವಾಗಿರುವ ಪರಿಕಲ್ಪನೆಗಳನ್ನು ಪ್ರಶ್ನಿಸುತ್ತವೆ; ನಮ್ಮ ಸಮಾಜ ಸಂಸ್ಕೃತಿಗಳ ಕುರಿತು ಪುನರಾಲೋಚಿಸುವಂತೆ ಒತ್ತಾಯಿಸುತ್ತವೆ.

ದೇವಿಯವರ ಬರಹದಲ್ಲಿ ಆಗೀಗ ಅನಿರೀಕ್ಷಿತ ಲಂಘನಗಳೂ ವಾಚಕರ ಧ್ಯಾನಕ್ಕೆ ಮತ್ತು ಶೋಧಕ್ಕೆ ಆಹ್ವಾನ ನೀಡುವ ಗ್ಯಾಪ್‌ಗಳೂ ಇರುವುದಿದೆ. ಉದಾಹರಣೆಗೆ ಅವರು ನಿರೂಪಿಸುವ ‘ಕತೆಯ ಕತೆ’ಯನ್ನು ನೋಡಬಹುದು. ಆ ಕತೆಯ ಪ್ರಕಾರ ಮನುಷ್ಯ ಪ್ರಜ್ಞೆಗೆ ದೇಶಕಾಲಗಳೊಂದಿಗೆ ವ್ಯವಹರಿಸಲು ಅನುವು ಮಾಡಿಕೊಡುವ ಭಾಷೆ, ಕಲ್ಪನೆ ಮತ್ತು ಸ್ಮೃತಿಗಳೇ ಕತೆಯ ಹುಟ್ಟಿಗೂ ಕಾರಣವಾಗುತ್ತವೆ. ಮನುಷ್ಯ ಜೀವಿಗೆ ಮಾತ್ರವೇ ಅನ್ಯದ ಬೋಧವಿರುವುದರಿಂದ ಅನ್ಯತೆಯನ್ನು ಮೀರುವ ಹಂಬಲದಲ್ಲಿ ಕತೆ ಕೇಳುವ ಒತ್ತಾಸೆಯೂ ಇರುತ್ತದೆ.

ಸಂಪುಟದ ಕೊನೆಯ ಲೇಖನ ಮನುಷ್ಯನ ಉತ್ಕ್ರಾಂತಿಯ ಚರಿತ್ರೆಯಲ್ಲಿ ಕಂಡುಬರುವ ಪ್ರಮುಖ ಪಲ್ಲಟಗಳ ತರ್ಕದ ಹಿನ್ನೆಲೆಯಲ್ಲಿ ಸದ್ಯ ಜಾಗತಿಕವಾಗಿ ಘಟಿಸುತ್ತಿರುವ ಡಿಜಿಟಲ್ ಕ್ರಾಂತಿಯ, ಅದರ ಪರಿಣಾಮವಾದ ಭಾಷೆಗಳ ಅವಸಾನದ ಕುರಿತು ಚಿಂತಿಸುತ್ತದೆ. *–ಡಾ.ಎಂ.ಜಿ.ಹೆಗಡೆ*

ಪರ್ಯಾಯದ ಹುಡುಕಾಟ

ಪ್ರಸ್ತುತ ಕೃತಿಯಲ್ಲಿ ಮೂರು ಬಹುಮುಖ್ಯ ವಿಷಯಗಳನ್ನು ಕುರಿತು ದೇವಿಯವರು ಧ್ಯಾನಿಸಿ ಬರೆದ ಬರಹಗಳ ಅನುವಾದಗಳಿವೆ. ಪಶ್ಚಿಮ ಹಾಗೂ ಪೂರ್ವಗಳ ವಿದ್ವತ್ತು, ಜಗತ್ತಿನ ಮಹಾನ್ ಕೃತಿಗಳ ಆಳವಾದ ಓದು, ಚರಿತ್ರೆಯ ದಾರ್ಶನಿಕವಾದ ತಿಳುವಳಿಕೆ ಹಾಗೂ ಸಾಮಾಜಿಕ ಬದ್ಧತೆಗಳು ಮುಪ್ಪುರಿಗೊಂಡು ಸೃಷ್ಟಿಸಿದ ಜ್ಞಾನವು ಈ ಬರಹಗಳಲ್ಲಿದೆ. ಅಪ್ರಾಮಾಣಿಕವಾದ ಭಾಷಾಡಂಬರದ “ಜಾಗತಿಕ” ಚಿಂತನೆಯ ಹಗಲುವೇಷದ ಬದಲಾಗಿ ಇಪ್ಪತ್ತನೆಯ ಶತಮಾನದಿಂದ ಇತ್ತೀಚೆಗೆ ಮನುಷ್ಯ ಕುಲವು ಎದುರಿಸಿದ ಆತ್ಮಘಾತುಕವಾದ ಹಿಂಸೆಗಳು, ಅತಾರ್ಕಿಕವಾದ ಸ್ವವಿನಾಶ, ಸಿನಿಕತನವುಳ್ಳ ಹತಾಶೆ ಇವುಗಳ ಜೊತೆಗೆ ಇವೆಲ್ಲವನ್ನು ಬದಲಾಯಿಸಬೇಕು ಎನ್ನುವ, ‘ಇನ್ನೊಂದು ಜಗತ್ತು ಸಾಧ್ಯವಿದೆ’ ಎನ್ನುವ ನೈತಿಕವಾದ ನಂಬಿಕೆ ಈ ಬರಹಗಳಲ್ಲಿದೆ .. ಎಂ.ಜಿ. ಹೆಗಡೆಯವರ ಮಾಂತ್ರಿಕ ಅನುವಾದವು ದಟ್ಟವಾದ, ಸಂಕೀರ್ಣವಾದ ಅನುಭವಗಳನ್ನು ಕನ್ನಡದಲ್ಲಿ ಅದ್ಭುತವಾಗಿ ಹಿಡಿದುಕೊಡುತ್ತದೆ . ನನಗಂತೂ ಈ ಕೃತಿಯನ್ನು ಓದಿದ್ದು ಇಳಿವಯಸ್ಸಿನಲ್ಲಿ ದೊರೆತ ಶಿಕ್ಷಣವಾಗಿದೆ.

– ಡಾ. ರಾಜೇಂದ್ರ ಚೆನ್ನಿ

ಓರ್ಫಿಯಸ್‌ನ ಹಾಡು

ಬಹಳ ಹಿಂದೆ ‘ಎಷ್ಟೆಂದರೆ ಐತಿಹಾಸಿಕ ಯುಗಗಳಲ್ಲಿ ಅಲ್ಲ, ಪೌರಾಣಿಕ ಕಲ್ಪಗಳಲ್ಲಿ– ಓರ್ಫಿಯಸ್ ತನ್ನ ಪ್ರೀತಿಯ ಯುರಿಡಿಸಿಯನ್ನು ಮೃತ್ಯುಲೋಕದಿಂದ ಮರಳಿ ತರಲು ಹೋರಾಟ ನಡೆಸಿದ. ಮೃತ್ಯುದೇವತೆಯು ಓರ್ಫಿಯಸ್‌ಗೆ ಯುರಿಡಿಸಿಯನ್ನು ಹಿಂತಿರುಗಿಸಲು ಒಪ್ಪಿದ. ಆದರೆ ಅವಳು ಅವನನ್ನು ಅನುಸರಿಸಿಕೊಂಡು ಹೋಗುತ್ತಿರುವಾಗ ನಿಜಕ್ಕೂ ಅವಳು ತನ್ನನ್ನು ಹಿಂಬಾಲಿಸುತ್ತಿರುವಳೆ ಎಂದು ಅವನು ಹಿಂತಿರುಗಿ ನೋಡುವಂತಿಲ್ಲ ಎಂದು ಷರತ್ತು ವಿಧಿಸಿದ. ಓರ್ಫಿಯಸ್ ಕತ್ತಲೆಯ ಜಗತ್ತಿನಿಂದ ಹೊರಬಂದಾಗ ಯುರಿಡಿಸಿ ದಿಟವಾಗಿಯೂ ತನ್ನನ್ನು ಹಿಂಬಾಲಿಸಿ ಬರುತ್ತಿದ್ದಾಳೆ ಎಂಬ ನಂಬಿಕೆಯ ಬಲದ ಮೇಲೇ ಕವನಗಳನ್ನು ರಚಿಸಿ ಗಟ್ಟಿಯಾಗಿ ಹಾಡುತ್ತಿದ್ದ’ ಯುರಿಡಿಸಿಗೆ ತನ್ನೆದೆಯ ತವಕ ತಲ್ಲಣಗಳ ನಿವೇದನೆಯಾಗಿ; ಪ್ರಿಯತಮೆಯನ್ನು ಮೃತ್ಯುಮುಖದಿಂದ ರಕ್ಷಿಸಿ ತಂದ ಯಶೋಗೀತೆಯಾಗಿ; ಅದೆಲ್ಲಕ್ಕಿಂತ, ಯುರಿಡಿಸಿ ವಾಸ್ತವವಾಗಿಯೂ ತನ್ನನ್ನು ಹಿಂಬಾಲಿಸುತ್ತಿರುವುದು ಹೌದೇ ಎಂಬ ಆಂತಕವನ್ನು ಗೆಲ್ಲುವ ಉಪಾಯವಾಗಿ. ಅವನ ದೈವಿಕ ಸಂಗೀತಕ್ಕೆ ಮರುಳಾಗಿ ಲಕ್ಷಾಂತರ ಹಕ್ಕಿಗಳು ಯುರಿಡಿಸಿಯನ್ನು ಹಿಂಬಾಲಿಸಿದವೆಂದು ಹೇಳುತ್ತಾರೆ. ಅವುಗಳ ಕಿವಿಗದು ಸಂಗೀತ; ಅದರೆ ಓರ್ಫಿಯಸ್‌ಗೆ ಅದು ಯಾತನೆಯ ಗೀತೆ; ಹಾಗೆಯೇ ನಂಬಿಕೆಯ ಘೋಷಣೆ! ಓರ್ಫಿಯಸ್‌ನ ಆ ಹಾಡು ಪ್ರತಿಯೊಬ್ಬ ಪ್ರವರ್ತಕನ ಕ್ರಿಯೆಯಲ್ಲೂ ಪ್ರತಿಧ್ವನಿಸುತ್ತದೆ

– ಗಣೇಶ್ ದೇವಿ (ಓರ್ಫಿಯಸ್‌ನ ಹಾಡು)

ಬೆಳಕಿನ ಬೆಳೆ ಮಾಲಿಕೆ

‘ಬೆಳಕಿನ ಬೆಳೆ’ ಬೇಂದ್ರೆಯವರಿಂದ ದೊರಕಿಸಿಕೊಂಡ ಪದಗುಚ್ಛ. ‘ಹುಲುಸಿರಲಮ್ಮ ಬೆಳಕಿನ ಬೆಳೆಗೆ’ ಅವರ ‘ಪ್ರಾರ್ಥನೆ’ಯ ಒಂದು ಸಾಲು,


‘ಬೆಳಕಿನ ಬೆಳೆ ಬೆಳೆಸಲಿಕ್ಕೆ
ಬೆಳೆಯ ಬಾಳು ಬೆಳೆದು ಬಂತು’

ಈ ಮಾಲಿಕೆಗೆ ಆದರ್ಶವಾಗಿದೆ. ಬೆಳೆಯ ಬಾಳಿನ ಸಾರ್ಥಕ್ಯವಿರುವುದೇ ಬೆಳಕಿನ ಬಾಳನ್ನು ಬೆಳೆಸುವುದರಲ್ಲಿ.

ಬಹುಭಾಷಿಕವಾದ ನಮ್ಮ ದೇಶದಲ್ಲಿ ಬೆಳಕಿನ ಬೆಳೆ ಹಲವು ಭಾಷೆಗಳಲ್ಲಿ ಬೆಳೆದು ಬಂದಿದೆ. ಇವನ್ನು ಕನ್ನಡದಲ್ಲಿ ದೊರಕಿಸಿಕೊಳ್ಳುವುದಕ್ಕಾಗಿ ಬೇರೆ ಬೇರೆ ಭಾಷೆಗಳ ಚಿಂತಕರ ಆಯಾ ಭಾಷಾವಲಯದಲ್ಲಿ ಚರ್ಚೆಯನ್ನು ಹುಟ್ಟುಹಾಕಿದ, ಕನ್ನಡದ ಸಂದರ್ಭಕ್ಕೂ ಪ್ರಸ್ತುತವಾದ ಆರೆಂಟು ಲೇಖನಗಳ ಅನುವಾದವನ್ನೂ, ಪ್ರಸ್ತಾವನೆ, ಪರಿಚಯವನ್ನೂ ಹೊಂದಿರುವ ಐವತ್ತು ಸಂಪುಟಗಳ ಮಾಲಿಕೆಯಾಗಿ ‘ಬೆಳಕಿನ ಬೆಳೆ’ಯನ್ನು ಯೋಜಿಸಲಾಗಿದೆ. ಈ ಮಾಲಿಕೆಯಲ್ಲಿ ಇರಾವತಿ ಕರ್ವೆ, ರವೀಂದ್ರನಾಥ ಟಾಗೋರ್, ಎಂ ಹಿರಿಯಣ್ಣ, ಡಿ.ಡಿ.ಕೊಸಾಂಬಿ, ಬಿಮಲಕೃಷ್ಣ ಮತಿಲಾಲ್, ನಿರ್ಮಲ ವರ್ಮ, ನಾಮವರ ಸಿಂಗ್ ರ ಬರಹಗಳ ಸಂಪುಟಗಳನ್ನು ‘ಕುವೆಂಪು ಭಾಷಾ ಭಾರತಿ ಪ್ರಾಧಿಕಾರ’ವು ಈಗಾಗಲೇ ಪ್ರಕಟಿಸಿದೆ. ಮಾಲಿಕೆಯ ಮುಂದಿನ ಸಂಪುಟಗಳನ್ನು ‘ಕ್ರಿಯಾ ಮಾಧ್ಯಮ’ವು ಬೆಳಕಿಗೆ ತರಲಿದೆ.

ದಾದಾಬಾಯಿ ನವರೋಜಿ, ಕಾಳಿದಾಸ ಭಟ್ಟಾಚಾರ್ಯ, ಸುದೀಪ್ತ ಕವಿರಾಜ, ಅಮರ್ತ್ಯ ಸೇನ್, ಆನಂದ ಕುಮಾರಸ್ವಾಮಿ, ಕಮಲಾದೇವಿ ಚಟ್ಟೋಪಧ್ಯಾಯ, ಸೂಸಿ ಥಾರು, ರೊಮಿಲಾ ಥಾಪರ್, ಐಜ಼ಾಜ್ ಅಹ್ಮದ್, ಎಂ.ಎನ್.ರಾಯ್, ದುರ್ಗಾ ಭಾಗವತ, ರಾಹುಲ ಸಾಂಕೃತ್ಯಾಯನ, ಭೀಖು ಪರೇಖ್, ವಿವೇಕಾನಂದ, ಗೋಪಿನಾಥ ಕವಿರಾಜ, ರಾಜಾಜಿ, ಗಾಯತ್ರಿ ಸ್ಪಿವಾಕ್, ಪಾರ್ಥ ಚಟರ್ಜಿ, ಲೀಲಾ ಗಾಂಧಿ, ರಾಧಾಕೃಷ್ಣನ್ ಮೊದಲಾದವರ ಬರಹಗಳ ಸಂಪುಟಗಳು ಈ ಮಾಲಿಕೆಯಲ್ಲಿ ಬರಲಿವೆ.

ಡಾ. ಎಂ.ಜಿ ಹೆಗ್ಡೆಯವರು ಪ್ರಧಾನ ಸಂಪಾದಕರಾಗಿರುವ ಈ ಮಾಲಿಕೆಯಲ್ಲಿ ಕನ್ನಡದ ನುರಿತ ಅನುವಾದಕರೂ ಕೆಲವರು ಹೊಸ ಅನುವಾದಕರೂ ಕೈಜೋಡಿಸಿದ್ದಾರೆ – ಬೆಳಕಿನ ಬೆಳೆ ಹುಲುಸಾಗಲೆಂದು.



ಸಿಪಿಐ(ಎಂ) ಬೆಂಗಳೂರು ಉತ್ತರ ವಲಯ 5ನೇ ಸಮ್ಮೇಳನ



ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲು ಪ್ರತಿವಿಧಾನ ಸಭಾ ಕ್ಷೇತ್ರಗಳಿಗೊಂದು ಸರ್ಕಾರಿ ಸುಸಜ್ಜಿತ ಅತ್ಯಾಧುನಿಕ ಆಸ್ಪತ್ರೆಗಳ ನಿರ್ಮಾಣಕ್ಕೆ ಒತ್ತಾಯಿಸಿ, ಬೆಲೆ ಏರಿಕೆ ನಿಯಂತ್ರಣಕ್ಕೆ ಆಗ್ರಹಿಸಿ, ಸಾರ್ವಜನಿಕ ಉದ್ದಿಮೆಗಳ ಮಾರಾಟ ವಿರೋಧಿಸಿ, ಉಚಿತ ಶಿಕ್ಷಣ ಹಾಗೂ ಎಲ್ಲರಿಗೂ ಉದ್ಯೋಗಕ್ಕಾಗಿ, ರೈತ–ಕಾರ್ಮಿಕರ ಹಕ್ಕುಗಳ ಉಳಿವಿಗಾಗಿ, ಮಹಿಳೆಯರ ಸುರಕ್ಷತೆಗಾಗಿದಿನಾಂಕ 31 ಅಕ್ಟೋಬರ್ 2021 ರಂದು ಟಿ.ದಾಸರಹಳ್ಳಿಯಸಿಪಿಐ(ಎಂ) ಕಚೇರಿಯಲ್ಲಿ ಸಿಪಿಐ(ಎಂ) ಬೆಂಗಳೂರು ಉತ್ತರ ವಲಯ5ನೇ ಸಮ್ಮೇಳನಯಶಸ್ವಿಯಾಗಿ ಜರುಗಿತು.

ಮೆರವಣಿಗೆ

ಬಹಿರಂಗ ಅಧಿವೇಶನಕ್ಕೂ ಮುನ್ನ ಪಕ್ಷದ ಸದಸ್ಯರು, ಮನೆಕೆಲಸಗಾರರು, ಕಟ್ಟಡ ಕಾರ್ಮಿಕರು, ಟೈಲರ್‌ಗಳು, ಕೈಗಾರಿಕಾ ಕಾರ್ಮಿಕರು, ಮಹಿಳೆಯರ ಬೃಹತ್ ಮೆರವಣಿಗೆ ದಾಸರಹಳ್ಳಿ ಮೆಟ್ರೋ ನಿಲ್ದಾಣದಿಂದ ಪ್ರಾರಂಭವಾಗಿ ದಾಸರಹಳ್ಳಿಯ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಸಿಪಿಐಎಂ ಕಚೇರಿಯಲ್ಲಿ ಸಮಾವೇಶಗೊಂಡಿತು. ನಂತರ ಸಿಪಿಐಎಂ ವಲಯ ಸಮಿತಿ ಸದಸ್ಯರಾದ ಕಾಮ್ರೇಡ್ ಲೀಲಾವತಿಯವರು ಪಕ್ಷದ ಧ್ವಜಾರೋಹಣ ಮಾಡಿದರು.

ಪ್ರಾಸ್ತಾವಿಕವಾಗಿ ವಲಯ ಕಾರ್ಯದರ್ಶಿ ಹುಳ್ಳಿ ಉಮೇಶ್ ಮಾತನಾಡುತ್ತಾಭಾರತದ ಚರಿತ್ರೆಯಲ್ಲಿ ಧೀರೋದ್ಧಾತ ಪರಂಪರೆ ಹೊಂದಿರುವ ಸಿಪಿಐ(ಎಂ) ಪಕ್ಷದ ಸಮ್ಮೇಳನಗಳು ಇಡೀ ದೇಶಾದ್ಯಂತ ನಡೆಯುತ್ತಿವೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಬ್ರಿಟೀಷರ ವಿರುದ್ಧದ ಕ್ರಾಂತಿಕಾರಿ ಹೋರಾಟದಲ್ಲಿ ದೀರ್ಘಾವಧಿ ಜೈಲುವಾಸ ಅನುಭವಿಸಿರುವವರು ಕಮ್ಯುನಿಷ್ಟರು. ದೇಶದ ರೈತ–ಕಾರ್ಮಿಕರು, ವಿದ್ಯಾರ್ಥಿ–ಯುವಜನರು, ಮಹಿಳೆಯರು ಹಾಗೂ ಪ್ರಗತಿಪರ ಲೇಖಕರನ್ನು ಕ್ರಾಂತಿಕಾರಿ ಹೋರಾಟದಲ್ಲಿ ಧುಮುಕಿಸಿ ವಿಮೋಚನಾ ಹೋರಾಟಕ್ಕೆ ಅಣಿನೆರೆಸಿದ ಪರಂಪರೆ ಸಿಪಿಐ(ಎಂ) ಪಕ್ಷಕ್ಕಿದೆ. ವಿಮೋಚನಾ ಹೋರಾಟದ ದಾರಿಯುದ್ದಕ್ಕೂ ಸಿಪಿಐ(ಎಂ) ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರು ಮಾಡಿದ ತ್ಯಾಗ ಮತ್ತು ಬಲಿದಾನಗಳು ಸಮಾನತೆಯ ಸಮಾಜ ನಿರ್ಮಾಣದ ದಾರಿಯಲ್ಲಿ ಬಿತ್ತಿದ ಬೀಜಗಳಾಗಿದ್ದಾರೆ. ಪೀಣ್ಯ ಕೈಗಾರಿಕಾ ಪ್ರದೇಶ ಸೇರಿದಂತೆ ಬೆಂಗಳೂರು ಉತ್ತರ ವಲಯದಲ್ಲಿ ಸಿಪಿಐ(ಎಂ) ಹೋರಾಟದ ಪರಂಪರೆಯನ್ನು ಮುಂದುವರೆಸುತ್ತಿದೆ. ದೇಶದಲ್ಲಿ ಸಾರ್ವಜನಿಕ ಉದ್ಯಮಗಳನ್ನು ಕೇಂದ್ರ ಸರ್ಕಾರ ಒಂದೆಡೆ ಖಾಸಗೀ ಬಂಡವಾಳದಾರರಿಗೆ ಮಾರುತ್ತಿದೆ. ಬೆಲೆ ಏರಿಕೆ ಮೂಲಕ ಸಾಮಾನ್ಯ ಜನರ ಮೇಲೆ ನಿರಂತರ ಪ್ರಹಾರ ನಡೆಸಿದೆ. ಕೋವಿಡ್ ನಿಂದಾಗಿ ಜನ ಸಾಮಾನ್ಯರು ತತ್ತರಿಸಿರುವ ಸಂದರ್ಭದಲ್ಲಿ ಸಿಪಿಐ(ಎಂ) ಈ ಪ್ರದೇಶದ ಜನರ ಸಹಾಯಕ್ಕೆ ಧಾವಿಸಿದೆ. ಜನಪರ ಕಾರ್ಯಕ್ರಮಗಳನ್ನು ಮತ್ತು ಹೋರಾಟಗಳನ್ನು ನಡೆಸುವ ಮೂಲಕ ಸಿಪಿಐ(ಎಂ) ಪಕ್ಷ ಜನರ ಜೊತೆ ನಿಂತಿದೆ ಎಂದರು.

ಸಿಪಿಐ(ಎಂ) ಹಿರಿಯ ಮುಖಂಡರಾದ ಕಾಮ್ರೇಡ್ ಜಿ.ಎನ್ ನಾಗರಾಜ್ ರವರು ಬಹಿರಂಗ ಅಧಿವೇಶನ ಉದ್ಘಾಟಿಸಿದರು. ಅವರು ಮಾತನಾಡುತ್ತಾ ದೇಶದಲ್ಲಿ ಸಿಪಿಐ(ಎಂ) ಪಕ್ಷವು ಜನರ ಆರೋಗ್ಯ ಶಿಕ್ಷಣ, ಉದ್ಯೋಗಕ್ಕಾಗಿ ಹಾಗೂ ದೇಶದ ಸಮಗ್ರತೆ ಮತ್ತು ಏಕತೆ ಹಾಗೂ ಜಾತ್ಯಾತೀತ ಮೌಲ್ಯಗಳ ಉಳಿವಿಗಾಗಿ ನಿರಂತರ ಹೋರಾಟ ನಡೆಸುತ್ತಾ ಬಂದಿದೆ. ಪೆಟ್ರೋಲ್, ಡೀಸೆಲ್, ಗ್ಯಾಸ್ ಬೆಲ ಹಾಘೂ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಸಾಮಾನ್ಯ ಜನರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಇನ್ನೊಂದೆಡೆ ಕೋಟ್ಯಾಧಿಪತಿಗಳ ಸಂಪತ್ತು ದಿನೇ ದಿನೇ ಹೆಚ್ಚುತ್ತಿದೆ. ಜಾಗತಿಕ ಮಟ್ಟದ ಹಸಿವಿನ ಸೂಚ್ಯಾಂಕ (Global Hunger Index) ದಲ್ಲಿ 101ನೇ ಸ್ಥಾನಕ್ಕೆ ಕುಸಿದಿದೆ. ಹಸಿವು ಜನರನ್ನು ಬಲಿ ಪಡೆಯುತ್ತಿದೆ. ಸಾಮಾನ್ಯ ಜನರ ಇಂತಹ ಸಾವಿರಾರು ಬಲಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನವಿರೋಧಿ, ಕೊಲೆಗಡುಕ ನೀತಿಗಳೇ ಕಾರಣವಾಗಿವೆ.

ದೇಶದ ಕೃಷಿ ಕ್ಷೇತ್ರ ತೀವ್ರ ಬಿಕ್ಕಟ್ಟಿನಲ್ಲಿದೆ. ಕಳೆದ ಒಂದು ವರ್ಷದಿಂದ ರೈತರು ಸಂಘಟಿತರಾಗಿ ದೇಹಲಿಯ ಗಡಿ ಪ್ರದೇಶಗಳಲ್ಲಿ ಬೀಡು ಬಿಟ್ಟು ಕೃಷಿ ಕ್ಷೇತ್ರವನ್ನು ಕಾರ್ಪೋರೇಟ್ ಕಂಪನಿಗಳಿಗೆ ಒತ್ತೆ ಇಡಲು ಕೇಂದ್ರದ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ನಿರಂತರ ಪ್ರಯತ್ನ ನಡೆಸಿದೆ. ದೇಶಕ್ಕೆ ಅನ್ನ ಕೊಡುವ ರೈತರ ಹೋರಾಟವನ್ನು ಮುರಿಯಲು ಸರ್ಕಾರವೇ ಪೋಲೀಸರನ್ನು ಮತ್ತು ಸೇನೆಯನ್ನು ಬಳಸಿ ದಮನ ಮಾಡಲು ಪ್ರಯತ್ನಿಸುತ್ತಿರುವುದು ದೇಶದ ಜನರು ಗಮನಿಸಿದ್ದಾರೆ. ಅನ್ನದಾತರ ಹೋರಾಟವನ್ನು ಅವಮಾನಿಸುತ್ತಾ ಸಂವಿಧಾನ ವಿರೋಧಿ ಮೂರು ಕೃಷಿ ಕಾನೂನುಗಳನ್ನು ಬಂಡವಾಳಗಾರರ ಲಾಭಕ್ಕಾಗಿ ಜಾರಿಗೊಳಿಸುತ್ತಿರುವ ಕೇಂದ್ರ ಸರ್ಕಾರದ ನಡೆ ಖಂಡನೀಯ. ರೈತರ ಹೋರಾಟದ ಜೊತೆ ನಿಲಬ್ಲೇಕಾಗಿರುವುದು ನಮ್ಮೆಲ್ಲರ ಜವಾಬ್ದಾರಿ.

ದೇಶದಲ್ಲಿ ಕೋವಿಡ್ –19 ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಹೇರಿದ್ದ ಅವೈಜ್ಞಾನಿಕ ಲಾಕ್‌ಡೌನ್‌ನಿಂದಾಗಿ ದೇಶದ ಶಿಕ್ಷಣ ಹಾಗೂ ಉದ್ಯೋಗದ ಕ್ಷೇತ್ರಗಳು ತತ್ತರಿಸಿ ಹೋಗಿವೆ. ವರ್ಷಕ್ಕೆ ಒಂದು ಕೋಟಿ ಉದ್ಯೋಗ ನೀಡುವ ಭರವಸೆ ಸುಳ್ಳಾಗ್ಗಿದೆ. ಮೋದಿ ಸರ್ಕಾರ ತನ್ನ ತಪ್ಪು ನಿರ್ಧಾರಗಳಿಂದಾಗಿ 20 ಲಕ್ಷ ಉದ್ಯೋಗಗಳನ್ನು ಕಳೆದಿದೆ ಹಾಗೂ ಇನ್ನೂ ಲಕ್ಷಾಂತರ ಜನ ಉದ್ಯೋಗ ಕಳೆದುಕೊಳುವ್ವ ಆತಂಕದಲ್ಲಿದ್ದಾರೆ. ಯುವಜನರು ನಿರುದ್ಯೋಗಿಗಳಾಗಿ ಬೀದಿಪಾಲಾಗಿದ್ದಾರೆ. ಲಾಕ್‌ಡೌನ್ ನಂತರ ಶಾಲಾ –ಕಾಲೇಜುಗಳನ್ನು ಪೂರ್ಣ ಪ್ರಮಾಣದಲ್ಲಿ ಪ್ರಾರಂಭಿಸದೇ ಆನ್‌ಲೈನ್ ಕ್ಲಾಸ್‌ಗಳಿಗೆ ಒತ್ತು ನೀಡಿದ್ದರಿಂದ ದೇಶದ ಲಕ್ಷಾಂತರ ವಿದ್ಯಾರ್ಥಿಗಳನ್ನು ಶಿಕ್ಷಣದಿಂದ ವಂಚಿಸಲಾಗಿದೆ. ಈ ಮಧ್ಯೆ ರಾಷ್ಟ್ರೀಯ ಶಿಕ್ಷಣ ನೀತಿ(NEP) 2020 ಯನ್ನು ಜಾರಿಗೊಳಿಸಲು ಕೇಂದ್ರ ಹಾಗೂ ಕರ್ನಾಟಕ ರಾಜ್ಯ ಸರ್ಕಾರಗಳು ಮುಂದಾಗಿವೆ.ರಾಷ್ಟ್ರೀಯ ಶಿಕ್ಷಣ ನೀತಿ (ಎನ್.ಇ.ಪಿ) 2020 ಯನ್ನು ಜಾರಿಗೆ ತರುವುದೆಂದರೆ ಗ್ರಾಮೀಣ ಬಡ, ದಲಿತ, ಹಿಂದುಳಿದ ಹಾಗೂ ಹೆಣ್ಣು ಮಕ್ಕಳನ್ನು ಶಿಕ್ಷಣದಿಂದ ವಂಚಿಸುವುದೇ ಆಗಿದೆ. ಕರೋನಾ ಸೋಂಕಿನಿಂದ ಜನರು ಬಳಲುತ್ತಿದ್ದಾಗ ಸರಿಯಾದ ವೈದ್ಯಕೀಯ ಚಿಕಿತ್ಸೆ ಸಿಗದೇ ಸಾವಿಗೀಡಾಗಿದ್ದಾರೆ. ಲಾಕ್‌ಡೌನ್ ಸಂದರ್ಭದಲ್ಲಿ ಹಸಿವಿನಿಂದ ಜನರು ಕಂಗಾಲಾಗಿದ್ದಾಗ ರಾಜ್ಯದ ಬಿ.ಜೆ.ಪಿ ಸರ್ಕಾರ ಜನರ ಸಹಾಯಕ್ಕೆ ಮುಂದಾಗದೇ ಬೆಡ್ ಹಗರಣ, ಔಷಧಿ ಹಗರಣದಲ್ಲಿ ಮುಳುಗಿದ್ದು ವರದಿಯಾಗಿದೆ.

ದಲಿತರ ಮೇಲಿನ ದೌರ್ಜನ್ಯಗಳಿಗೆ ಬಿ.ಜೆ.ಪಿ ಆಡಳಿತದ ಸರ್ಕಾರಗಳು ಮೌನ ಸಮ್ಮತಿ ವ್ಯಕ್ತಪಡಿಸುತ್ತಾ ದೌರ್ಜನ್ಯ ಮಾಡಿದವರ ಪರವಾಗಿ ಕೆಲಸ ಮಾಡುತ್ತಿವೆ. ಉತ್ತರ ಪ್ರದೇಶ ಸೇರಿದಂತೆ ದೇಶದಲ್ಲಿ ದಲಿತರ ಮತ್ತು ಮಹಿಳೆಯರ ಮೇಲೆ ದೌರ್ಜನ್ಯ ನಡೆಸುತ್ತಿರುವವರನ್ನು ಬಂಧಿಸಿ ಕಠಿಣ ಶಿಕ್ಷೆಗೊಳಪಡಿಸದೇ ಇನ್ನಷ್ಟು ಹಿಂಸೆ, ದೌರ್ಜನ್ಯಗಳಿಗೆ ಕುಮ್ಮಕ್ಕು ನೀಡಲಾಗುತ್ತಿದೆ. ಸರ್ಕಾರಗಳು ಜಾರಿಗೆ ತರುತ್ತಿರುವ ಜನ ವಿರೋಧಿ ನೀತಿಗಳು ಹಾಗೂ ಜನರನ್ನು ಬಾಧಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಸಿಪಿಐ(ಎಂ) ನೇತೃತ್ವದಲ್ಲಿ ನಿರಂತರ ದೃಢ ಹೋರಾಟಗಳೇ ಪರಿಹಾರ ಎಂದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕಾಮ್ರೇಡ್ ಎನ್.ಪ್ರತಾಪ್ ಸಿಂಹ ರವರು ಮಾತನಾಡುತ್ತಾ ಕೇಂದ್ರದ ಮೋದಿ ನೇತೃತ್ವದ ಬಿ.ಜೆ.ಪಿ ಸರ್ಕಾರ 29 ಕಾರ್ಮಿಕ ಕಾನೂನುಗಳನ್ನು ರದ್ದುಗೊಳಿಸಿ ನಾಲ್ಕು ಕಾರ್ಮಿಕ ಸಂಹಿತೆ (Labour Code) ಗಳನ್ನಾಗಿ ರೂಪಿಸಿದ್ದಾರೆ. ಈ ಸಂಹಿತೆಗಳ ಪ್ರಕಾರ ಖಾಯಂ ಉದ್ಯೋಗ, ಕಾರ್ಮಿಕರ ಮುಷ್ಕರದ ಹಕ್ಕನ್ನು ಕಸಿದು ಕಡಿಮೆ ವೇತನಕ್ಕೆ ಕಾರ್ಮಿಕರನ್ನು ದುಡಿಸಿಕೊಳ್ಳಲು ಅನುವು ಮಾಡಿಕೊಡಲಿವೆ. ಕಾರ್ಮಿಕರನ್ನು ಅಕ್ಷರಶಃ ಆಧುನಿಕ ಗುಲಾಮರನ್ನಾಗಿಸುವ, ಸಂವಿಧಾನ ವಿರೋಧಿಯಾಗಿರುವ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಜಾರಿಗೊಳಿಸದಂತೆ ಸಿಪಿಐ(ಎಂ) ನಿರಂತರವಾಗಿ ಹೋರಾಟ ನಡೆಸುತ್ತಿದೆ. ಇದರ ವಿರುದ್ಧ ಕಾರ್ಮಿಕ ವರ್ಗದ ಹೋರಾಟವನ್ನು ಇನ್ನಷ್ಟು ಬಲಿಷ್ಟಗೊಳಿಸಬೇಕು.



ಅಧ್ಯಕ್ಷತೆ ವಹಿಸಿದ್ದ ಕಾಮ್ರೇಡ್ ಟಿ.ಲೀಲಾವತಿಯವರು ಮಾತನಾಡುತ್ತಾ ಬೆಂಗಳೂರು ಅಂತರಾಷ್ಟ್ರೀಯ ಖ್ಯಾತಿಯನ್ನು ಹೊಂದಿದ್ದರೂ ಇಲ್ಲಿನ ಹದಗೆಟ್ಟ ರಸ್ತೆಗಳು, ಏರುತ್ತಿರುವ ಮನೆಬಾಡಿಗೆ, ಶಿಕ್ಷಣ, ಆರೋಗ್ಯದ ವೆಚ್ಚಗಳು, ರಾಜ ಕಾಲುವೆ ಹಾಗೂ ಕೆರೆಗಳ ಒತ್ತುವರಿಯಿಂದಾಗಿರುವ ಸಮಸ್ಯೆ, ನೀರು, ಮಣ್ಣು, ವಾಯು ಮಾಲಿನ್ಯ ಹಾಗೂ ಕಸ ನಿರ್ವಹಣೆಯಲ್ಲಿನ ಸಮಸ್ಯೆಗಳಿಂದಾಗಿ ಇಲ್ಲಿನ ಜನರು ರೋಸಿ ಹೋಗಿದ್ದಾರೆ. ಈ ಎಲ್ಲಾ ಸಮಸ್ಯೆಗಳನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ಬಿ.ಬಿ.ಎಂ.ಪಿ ವಿಫಲವಾಗಿದೆ. ಸರ್ಕಾರದ ಸಚಿವರು ಹಾಗೂ ಸ್ಥಳೀಯ ಜನಪ್ರತಿನಿಧಿಗಳ ಇಚ್ಛಾಶಕ್ತಿ ಹಾಗೂ ಅವರ ನಡುವಿನ ಹೊಂದಾಣಿಕೆಯ ಕೊರತೆಯಿಂದಾಗಿ ಬೆಂಗಳೂರಿನ ಜನ ಪ್ರತಿನಿತ್ಯ ಸಮಸ್ಯೆಗಳ ನಡುವೆಯೇ ಬದುಕುವಂತಾಗಿದೆ. ಇಂತಹ ಸಮಸ್ಯೆಗಳ ವಿರುದ್ದ ಜನರನ್ನು ಹೋರಾಟಕ್ಕೆ ಅಣಿನೆರೆಸಬೇಕಿದೆ ಎಂದರು.

ವೇದಿಕೆಯಲ್ಲಿ ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರಾದ ಹನುಮಂತರಾವ್ ಹವಲ್ದಾರ್, ವಲಯ ಸಮಿತಿ ಸದಸ್ಯರಾದ ಮಂಗಳ ಕುಮಾರಿ, ರೇಣುಕ ವಿಜಯಲಕ್ಷ್ಮಿ ಉಪಸ್ಥಿತರಿದ್ದರು.

ನಂತರ ಪ್ರತಿನಿಧಿ ಅಧಿವೇಶನ ನಡೆಯಿತು. ವಲಯ ಕಾರ್ಯದರ್ಶಿ ಹುಳ್ಳಿ ಉಮೇಶ್ ರವರು ಕರಡು ವರದಿ ಮಂಡಿಸಿದರು. ವರದಿ ಮೇಲೆ ಭಾಗವಹಿಸಿದ್ದ ಪ್ರತಿನಿಧಿಗಳು ಚರ್ಚಿಸಿದರು. ಕೆಲವು ತಿದ್ದುಪಡಿಗಳೊಂದಿಗೆ ಕರಡು ವರದಿಯನ್ನು ಅಂತಿಮಗೊಳಿಸಲಾಯಿತು. ಕಾಮ್ರೇಡ್ ಟಿ.ಲೀಲಾವತಿ, ಹನುಮಂತರಾವ್ ಹವಲ್ದಾರ್, ಮಂಗಳಕುಮಾರಿ ಯವರನ್ನೊಳಗೊಂಡ ಅಧ್ಯಕ್ಷೀಯ ಮಂಡಳಿಯು ಸಮ್ಮೇಳನದ ಕಾರ್ಯ ಕಲಾಪಗಳನ್ನು ನಡೆಸಿಕೊಟ್ಟಿತು.

ನಿರ್ಣಯಗಳು :

ದಾಸರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಸೇರಿದಂತೆ ಉತ್ತರ ವಲಯದಲ್ಲಿ ಬರುವ ಎಲ್ಲಾ ವಿಧಾನಸಭಾ ಕ್ಷೇತ್ರದಲ್ಲಿ ಸುಸಜ್ಜಿತ ಸರ್ಕಾರಿ ಆಸ್ಪತ್ರೆಗಳ ನಿರ್ಮಾಣಕ್ಕಾಗಿ ಒತ್ತಾಯಿಸಿ. ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯವನ್ನು ಖಂಡಿಸಿ. ಶಿಕ್ಷಣದ ವ್ಯಾಪಾರೀಕರಣಕ್ಕೆ ಒತ್ತು ಕೊಡುತ್ತಿರುವ ರಾಷ್ಟ್ರೀಯ ಶಿಕ್ಷಣ ನೀತಿಯನ್ನು 2020ನ್ನು ವಿರೋಧಿಸಿ. ಮನೆ ಬಾಡಿಗೆ ನಿಯಂತ್ರಣ ಕಾಯ್ದೆ ಸಮರ್ಪಕವಾಗಿ ಜಾರಿಗೊಳಿಸಲು ಒತ್ತಾಯಿಸಿ, ಎಲ್ಲಾ ಅಸಂಘಟಿತ ಕಾರ್ಮಿಕರಿಗೆ ಸರ್ಕಾರಿ ಸೌಲಭ್ಯಗಳಿಗಾಗಿ ಒತ್ತಾಯಿಸಿನಿರ್ಣಯಗಳನ್ನು ಕೈಗೊಳ್ಳಲಾಯಿತು. ಯಲಹಂಕದಲ್ಲಿ ನಡೆಯಲಿರುವ ಬೆಂಗಳೂರು ಉತ್ತರ ಜಿಲ್ಲಾ 23ನೇ ಸಮ್ಮೇಳನವನ್ನು ಯಶಸ್ವಿಗೊಳಿಸಲು ನಿರ್ಣಯಿಸಲಾಯಿತು.

ನೂತನ ಸಮಿತಿ:

ಸಮ್ಮೇಳನವು 7 ಜನರ ನೂತನ ವಲಯ ಸಮಿತಿಯನ್ನು ಸರ್ವಾನುಮತದಿಂದ ಆಯ್ಕೆ ಮಾಡಿತು. ಕಾಮ್ರೇಡ್ ಟಿ.ಲೀಲಾವತಿ, ಹನುಮಂತರಾವ್ ಹವಲ್ದಾರ್, ವಿಜಯಲಕ್ಷ್ಮಿ ಎ.ಹೆಚ್., ಮಂಗಳಕುಮಾರಿ, ರೇಣುಕ, ಹರೀಶ್. ಕೆ ಇವರನ್ನೊಳಗೊಂಡ ನೂತನ ವಲಯ ಸಮಿತಿ ಸಭೆ ಸೇರಿ ಕಾಮ್ರೇಡ್ ಹುಳ್ಳಿ ಉಮೇಶ್ ರವರನ್ನು ಕಾರ್ಯದರ್ಶಿಯನ್ನಾಗಿ ಮರು ಆಯ್ಕೆ ಮಾಡಿತು. ಗೆಲುವು ನಮ್ಮದು ಹಾಡಿನೊಂದಿಗೆ ಧ್ವಜಾವರೋಹಣ ಮಾಡಲಾಯಿತು.





ರೈತರ ಹೋರಾಟದ ವಿರುದ್ಧ ಎರಡು ತಪ್ಪು ಕಲ್ಪನೆಗಳು



ರೈತ ಕೃಷಿಯ ಮೇಲೆ ಕಾರ್ಪೊರೇಟ್ ಅತಿಕ್ರಮಣವು ರೈತರ ಆದಾಯವನ್ನು ಕಸಿಯುವ ಕಾರಣದಿಂದಾಗಿ ಅದೊಂದು ರೈತರು ಮತ್ತು ಕಾರ್ಪೊರೇಟ್‌ಗಳ ನಡುವಿನ ದ್ವಿಪಕ್ಷೀಯ ಸಮಸ್ಯೆ ಎಂಬ ಪ್ರತಿಪಾದನೆ ಮತ್ತು ಸಂದರ್ಭಗಳಿಗೆ ಅನುಗುಣವಾಗಿ ಎಂಎಸ್‌ಪಿಯಲ್ಲಿ ಸೂಕ್ತ ಏರಿಕೆ ಮಾಡಿ ಅದನ್ನು ಇಡೀ ದೇಶಕ್ಕೆ ವಿಸ್ತರಿಸುವ ಕ್ರಮವು ಕಾರ್ಯಸಾಧುವಲ್ಲ ಎಂಬ ಪ್ರತಿಪಾದನೆ, ಈ ಎರಡೂ ಪ್ರತಿಪಾದನೆಗಳೂ ಅಸಮರ್ಥನೀಯವಾಗಿವೆ. ಇಂತಹ ಪ್ರತಿಪಾದನೆಗಳು ರೈತ ಚಳುವಳಿಯನ್ನು ದುರ್ಬಲಗೊಳಿಸುತ್ತವೆ. ಇವಕ್ಕೆ ಅವಕಾಶ ನೀಡಬಾರದು.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ. ನಾಗರಾಜ್

ಭಾರತದ ಕೃಷಿಯ ಬಗ್ಗೆ ಕೆಲವು ತಪ್ಪು ಕಲ್ಪನೆಗಳಿವೆ. ಅವುಗಳನ್ನು ಕೂಡಲೇ ತೊಡೆದುಹಾಕದಿದ್ದರೆ, ಮೂರು ಕೃಷಿ ಕಾನೂನುಗಳ ವಿರುದ್ಧ ಒಂದು ವರ್ಷದಿಂದಲೂ ಸತತವಾಗಿ ನಡೆಯುತ್ತಿರುವ ರೈತ ಚಳುವಳಿಯ ಮೇಲೆ ಬೀಳುವ ಪರಿಣಾಮಗಳು ಪ್ರತಿಕೂಲವಾಗಬಹುದು.

ಈ ತಪ್ಪು ಕಲ್ಪನೆಗಳಲ್ಲಿ ಮೊದಲನೆಯದು, ರೈತ ಕೃಷಿಯ ಮೇಲಿನ ಕಾರ್ಪೊರೇಟ್ ಅತಿಕ್ರಮಣದ ವಿಷಯವು ಕಾರ್ಪೊರೇಟ್‌ಗಳು ಮತ್ತು ರೈತರಿಗೆ ಮಾತ್ರ ಸಂಬಂಧಿಸಿದೆ ಎಂಬ ನಂಬಿಕೆ. ಇದು ತಪ್ಪು. ರೈತ ಕೃಷಿಯ ಮೇಲಿನ ಕಾರ್ಪೊರೇಟ್ ಅತಿಕ್ರಮಣವು ರೈತರಿಗೆ ಮಾತ್ರ ಸಂಬಂಧಿಸಿದ ವಿಷಯವಲ್ಲ. ಇದು ಎಲ್ಲರಿಗೂ ಸಂಬಂಧಿಸಿದ ವಿಷಯ. ಏಕೆಂದರೆ, ಈ ಅತಿಕ್ರಮಣವು ಇಡೀ ಅರ್ಥವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ. ಹಾಗಾಗಿ, ಇದು ಎಲ್ಲರಿಗೂ ಸಂಬಂಧಿಸಿದ ವಿಷಯವೇ. ಇದು ಚತುರ ಮಾತುಗಾರಿಕೆಯ ವಿಷಯವೂ ಅಲ್ಲ. ಇದು ಅಕ್ಷರಶಃ ನಿಜ.

ಇಡೀ ಸಮಾಜದ ಹೋರಾಟ

ಇದು ಎಲ್ಲರಿಗೂ ಸಂಬಂಧಿಸಿದ ವಿಷಯವೆಂದು ಹೇಳುವ ಕಾರಣವೆಂದರೆ, ಕಾರ್ಪೊರೇಟ್ ಅತಿಕ್ರಮಣದ ವಿರುದ್ಧ ನಡೆಯುತ್ತಿರುವ ರೈತ ಚಳುವಳಿಯು, ಮಾಲೀಕರು ಮತ್ತು ಕಾರ್ಮಿಕರ ನಡುವೆ ಕಾರ್ಖಾನೆಗಳಲ್ಲಿ ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಉಂಟಾಗುವ ವಿವಾದಗಳ ರೀತಿಯ ದ್ವಿಪಕ್ಷೀಯ ಸಮಸ್ಯೆಯಲ್ಲ. ಕಾರ್ಪೊರೇಟ್ ಅತಿಕ್ರಮಣದ ವಿರುದ್ಧ ಹೋರಾಡುವ ಪ್ರಕ್ರಿಯೆಯಲ್ಲಿ ರೈತರು ವಸ್ತುಶಃ ಭಾರತವನ್ನು "ಆಹಾರ ಸಾಮ್ರಾಜ್ಯಶಾಹಿ"ಗೆ ಒಳಪಡಿಸುವ ನೀತಿಯ ವಿರುದ್ಧವಾಗಿ ಇಡೀ ಸಮಾಜದ ಪರವಾಗಿ ಹೋರಾಟ ಮಾಡುತ್ತಿದ್ದಾರೆ.

ರೈತ ಕೃಷಿಯ ಮೇಲೆ ಕಾರ್ಪೊರೇಟ್ ಅತಿಕ್ರಮಣ ಎಂದಾಗ, ಕಾರ್ಪೊರೇಟ್‌ಗಳು ರೈತರ ಆದಾಯದ ಒಂದು ಭಾಗವನ್ನು ಕಸಿಯುತ್ತವೆ ಎಂಬುದಷ್ಟೇ ಅದರ ಅರ್ಥವಲ್ಲ. ರೈತರಿಗೆ ದಕ್ಕಬೇಕಾದ ಆದಾಯದ ಪಾಲನ್ನು ಹಿಂಡುವ ಮೂಲಕ ನೇರವಾಗಿ ಅಥವಾ ಕೃಷಿ ಉತ್ಪನ್ನಗಳ ಬೆಲೆ ಏರಿದಾಗ ಅದನ್ನು ಜೇಬಿಗಿಳಿಸಿಕೊಳ್ಳುವ ಮತ್ತು ಬೆಲೆಗಳು ಕುಸಿದಾಗ ನಷ್ಟವನ್ನು ರೈತರಿಗೆ ವರ್ಗಾಯಿಸುವ ಮೂಲಕ ಪರೋಕ್ಷವಾಗಿ ರೈತರ ಆದಾಯವನ್ನು ಕಾರ್ಪೊರೇಟ್‌ಗಳು ಕಸಿಯುತ್ತವೆ ಎಂಬುದಷ್ಟೇ ವಿಷಯವಲ್ಲ. ಅದರ ಜೊತೆಗೆ ಭೂ-ಬಳಕೆಯ ವಿಷಯವೂ ಮುಖ್ಯವಾಗುತ್ತದೆ. ಮುಂದುವರಿದ ಬಂಡವಾಳಶಾಹಿ ದೇಶಗಳು ಹವಾಮಾನದ ಕಾರಣದಿಂದಾಗಿ ಆಹಾರ ಧಾನ್ಯಗಳನ್ನು ಮಾತ್ರ ಉತ್ಪಾದಿಸುತ್ತವೆ. ಅವುಗಳ ಬಳಿ ಧಾನ್ಯಗಳ ದಾಸ್ತಾನು ಯಾವತ್ತೂ ಹೆಚ್ಚುವರಿಯಾಗಿಯೇ ಇರುತ್ತದೆ. ಈ ಹೆಚ್ಚುವರಿ ದಾಸ್ತಾನನ್ನು ಅವು ಮೂರನೇ ಜಗತ್ತಿಗೆ ಮಾರಾಟ ಮಾಡಲು ಬಯಸುತ್ತವೆ. ಈ ದೇಶಗಳು ತಮಗೆ ಅಗತ್ಯವಾದ ಮತ್ತು ತಾವೇ ಬೆಳೆಯಲು ಸಾಧ್ಯವಾಗದ ಮತ್ತು ಭಾರತದಂತಹ ಉಷ್ಣವಲಯದ ದೇಶಗಳಲ್ಲಿ ಮಾತ್ರ, ಅದೂ ಸಹ ಋತುಮಾನಕ್ಕೆ ತಕ್ಕಂತೆ, ಬೆಳೆಯಬಹುದಾದ ಹಣ್ಣು ಹಂಪಲುಗಳನ್ನು ಬೆಳೆಯುವಂತೆ ಹಲವಾರು ವರ್ಷಗಳಿಂದಲೂ ಒತ್ತಾಯಿಸುತ್ತಲೇ ಬಂದಿವೆ. ಅವರ ಒತ್ತಡಕ್ಕೆ ಮಣಿದು, ಹಣದ ಆಮಿಷಕ್ಕೆ ಒಳಗಾಗಿ ಭಾರತದ ರೈತರು ಇಂತಹ ಆಹಾರೇತರ ಬೆಳೆಗಳನ್ನು ಬೆಳೆಯಬೇಕು ಎಂದಾದರೆ, ಭೂ-ಬಳಕೆಯ ಬದಲಾವಣೆ ಅಗತ್ಯವಾಗುತ್ತದೆ.

ಹಾಗಾಗಿ, ಕಾರ್ಪೊರೇಟ್ ಅತಿಕ್ರಮಣವು ಆಹಾರ ಧಾನ್ಯಗಳ ಉತ್ಪಾದನೆಯನ್ನು ಕಡಿಮೆ ಮಾಡುವುದರ ಜೊತೆಗೆ, ಮೆಟ್ರೊಪಾಲಿಟನ್ ದೇಶಗಳ ಅಗತ್ಯಗಳಿಗಾಗಿ ಆಹಾರ ಧಾನ್ಯಗಳನ್ನು ಬೆಳೆಯುವ ಭೂಮಿಯ ಭಾಗವನ್ನು ಇತರ ಬೆಳೆಗಳನ್ನು ತೆಗೆಯುವತ್ತ ತಿರುಗಿಸಬೇಕಾಗುತ್ತದೆ. ಭಾರತದ ಕೃಷಿಯನ್ನು ಈ ನಿಟ್ಟಿನಲ್ಲಿ ಕೊಂಡೊಯ್ಯಲು, ಒಂದು ಅಸ್ತ್ರವನ್ನು ಪ್ರಯೋಗಿಸಲಾಗುತ್ತಿದೆ. ಭಾರತದಲ್ಲಿ ಪ್ರಧಾನವಾಗಿ ಆಹಾರ ಧಾನ್ಯಗಳಿಗೆ ಅನ್ವಯವಾಗುವ ಕನಿಷ್ಠ ಬೆಂಬಲ ಬೆಲೆಗಳ ಕ್ರಮವನ್ನು ಕೈಬಿಡಲಾಗುತ್ತಿದೆ. ಕನಿಷ್ಠ ಬೆಂಬಲ ಬೆಲೆ(ಎಂಎಸ್‌ಪಿ) ಪದ್ಧತಿಯನ್ನು ಮುಂದುವರಿಸುವುದಾಗಿ ಮೋದಿ ಸರ್ಕಾರವು ಮತ್ತೆ ಮತ್ತೆ ಹೇಳುತ್ತಿರಬಹುದು. ಆದರೆ, ಒಂದು ತಿದ್ದುಪಡಿಯ ಮೂಲಕ, ಈ ಭರವಸೆಯನ್ನು ಕೃಷಿ ಕಾನೂನಿನಲ್ಲಿ ಅಳವಡಿಸುವಂತೆ ರೈತರು ಸಲ್ಲಿಸಿದ ಕೋರಿಕೆಯನ್ನು ಅದು ಒಪ್ಪಿಕೊಂಡಿಲ್ಲ ಎಂಬುದು ಗಮನಾರ್ಹವಾಗಿದೆ. ಮೋದಿ ಸರ್ಕಾರದ ಉದ್ದೇಶ ಸ್ಪಷ್ಟವಾಗಿದೆ: ಕನಿಷ್ಠ ಬೆಂಬಲ ಬೆಲೆ ಪದ್ಧತಿಯನ್ನು ರದ್ದು ಮಾಡುವುದು. ಹೀಗೆ, ಒಂದು ಕಡೆಯಲ್ಲಿ ಕಾರ್ಪೊರೇಟ್ ಅತಿಕ್ರಮಣ (ಅಂದರೆ, ಬೆಲೆ ಏರಿಳಿತಗಳ ಮೂಲಕ ರೈತರ ಆದಾಯವನ್ನು ಕಸಿಯುವುದು) ಮತ್ತೊಂದೆಡೆಯಲ್ಲಿ ಎಂಎಸ್‌ಪಿಯ ರದ್ದತಿ, ಇವುಗಳ ಒತ್ತಡಕ್ಕೆ ಒಳಗಾದ ರೈತರು ತಮ್ಮ ರಿಸ್ಕ್‌ಅನ್ನು ಕಡಿಮೆಮಾಡಿಕೊಳ್ಳಲು, ಆಹಾರ ಧಾನ್ಯಗಳನ್ನು ಬೆಳೆಯುವುದರ ಬದಲಾಗಿ ರೊಕ್ಕ ತರುವ ತೋಟಗಾರಿಕೆ ಬೆಳೆಗಳತ್ತ ಹೊರಳುತ್ತಾರೆ.

"ಆಹಾರ ಧಾನ್ಯಗಳನ್ನು ಉತ್ಪಾದಿಸುವುದರಿಂದ ಹಿಂದೆ ಸರಿದರೆ ತಪ್ಪೇನು?"

ಭಾರತದಂತಹ ದೇಶಗಳು ಆಹಾರ ಧಾನ್ಯಗಳನ್ನು ಉತ್ಪಾದಿಸುವುದರಿಂದ ಹಿಂದೆ ಸರಿದು, ಇತರೆ ಬೆಳೆಗಳನ್ನು ರಫ್ತು ಮಾಡಿ, ಆಹಾರ ಪದಾರ್ಥಗಳನ್ನು ಆಮದು ಮಾಡಿಕೊಂಡರೆ ತಪ್ಪೇನು? ಎಂಬ ಪ್ರಶ್ನೆಯನ್ನು ಯಾರಾದರೂ ಎತ್ತಬಹುದು. ಮೊದಲನೆಯದಾಗಿ, ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳಲು ಸಾಕಷ್ಟು ವಿದೇಶಿ ವಿನಿಮಯದ ಸಂಗ್ರಹವನ್ನು ಹೊಂದಿರಬೇಕಾಗುತ್ತದೆ. ಆಹಾರ ಧಾನ್ಯಗಳ ಆಮದುಗಳಿಗೆ ಸಾಕಾಗುವಷ್ಟು ಸಾಕಷ್ಟು ವಿದೇಶಿ ವಿನಿಮಯವು ಸದಾ ಕಾಲವೂ ಲಭ್ಯವಿಲ್ಲದೇ ಇರಬಹುದು. ಆಹಾರ ಧಾನ್ಯ ಮತ್ತು ಇತರ ಬೆಳೆಗಳ ಬೆಲೆಗಳಲ್ಲಿ ಎದುರಾಗುವ ಏರಿಳಿತಗಳ ಸಮಸ್ಯೆಯನ್ನು ಹೊರತುಪಡಿಸಿದರೂ ಸಹ, ಇತರ ಬೆಳೆಗಳ ಸಾಪೇಕ್ಷ ಕುಸಿತವು ಆಹಾರ ಧಾನ್ಯಗಳ ಆಮದಿಗೆ ವಿದೇಶಿ ವಿನಿಮಯದ ಕೊರತೆಯನ್ನು ಉಂಟುಮಾಡಬಹುದು. ಅದಕ್ಕಿಂತಲೂ ಮುಖ್ಯವಾಗಿ, ಬೃಹತ್ ಪ್ರಮಾಣದ ಜನಸಂಖ್ಯೆಯನ್ನು ಹೊಂದಿದ ಭಾರತದಂತಹ ದೇಶವು ಆಹಾರ ಧಾನ್ಯಗಳ ಆಮದಿಗಾಗಿ ವಿಶ್ವ ಮಾರುಕಟ್ಟೆಗೆ ಹೋದಾಗ, ಆಹಾರ ಧಾನ್ಯಗಳ ಜಾಗತಿಕ ಬೆಲೆಗಳು ತಕ್ಷಣವೇ ಏರಿಕೆಯಾಗುತ್ತವೆ. ಆಗ, ನಿರ್ದಿಷ್ಟ ಪ್ರಮಾಣದ ಧಾನ್ಯಗಳನ್ನು ಆಮದು ಮಾಡಿಕೊಳ್ಳಲು ಇನ್ನೂ ಹೆಚ್ಚಿನ ವಿದೇಶಿ ವಿನಿಮಯ ಬೇಕಾಗುತ್ತದೆ ಎಂಬುದನ್ನು ನಾವು ನೆನಪಿನಲ್ಲಿಡಬೇಕು.

ಎರಡನೆಯದಾಗಿ, ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳಲು ದೇಶದಲ್ಲಿ ಒಂದು ವೇಳೆ ವಿದೇಶಿ ವಿನಿಮಯವು ಲಭ್ಯವಿದ್ದರೂ ಸಹ, ಜನರು ಆಹಾರ ಧಾನ್ಯಗಳನ್ನು ಕೊಳ್ಳುವ ಶಕ್ತಿಯನ್ನು ಹೊಂದಿರಬೇಕಾಗುತ್ತದೆ. ಒಂದು ದೇಶವು ಆಹಾರ ಧಾನ್ಯಗಳ ಉತ್ಪಾನೆಯಿಂದ ದೂರ ಸರಿದಾಗ, ಅದರ ಪರಿಣಾಮವಾಗಿ ಜನರ ಕೊಳ್ಳುವ ಶಕ್ತಿಯು ಸಾಮಾನ್ಯವಾಗಿ ಕುಗ್ಗುತ್ತದೆ. ಆಹಾರ ಧಾನ್ಯಗಳಿಗೆ ಬದಲಾಗಿ ಬೆಳೆಯಲಾಗುವ ಅನೇಕ ಬೆಳೆಗಳನ್ನು ತೆಗೆಯಲು ವಾಸ್ತವವಾಗಿ ಆಹಾರ ಧಾನ್ಯಗಳನ್ನು ಬೆಳೆಯಲು ಬೇಕಾಗುವುದಕ್ಕಿಂತ ಕಡಿಮೆ ಸಂಖ್ಯೆಯ ಕೆಲಸಗಾರರು ಸಾಕಾಗುತ್ತಾರೆ. ಆದ್ದರಿಂದ, ಆಹಾರ ಧಾನ್ಯೇತರ ಬೆಳೆಗಳನ್ನು ಬೆಳೆಯುವುದೆಂದರೆ, ಕೃಷಿಯಲ್ಲಿ ಉದ್ಯೋಗ ಮಾಡುವವರ ಸಂಖ್ಯೆಯನ್ನು ಇಳಿಸಿದಂತೆಯೇ. ಈ ಇಳಿಕೆಯ ಪರಿಣಾಮವಾಗಿ, ಜನರ ಕೊಳ್ಳುವ ಶಕ್ತಿಯು ಕುಗ್ಗುತ್ತದೆ. ಆಗ, ಆಮದು ಮಾಡಿಕೊಂಡ ಧಾನ್ಯಗಳನ್ನು ದುಬಾರಿ ಬೆಲೆ ತೆತ್ತು ಕೊಳ್ಳುವುದು ಜನರಿಗೆ ಸಾಧ್ಯವಾಗುವುದಿಲ್ಲ.

ಈ ಅಂಶಗಳ ಜೊತೆಗೆ, ಸಾಮ್ರಾಜ್ಯಶಾಹಿಯ ಕೈತಿರುಚುವ ಪ್ರಯತ್ನಗಳೂ ಸೇರಿಕೊಳ್ಳುತ್ತವೆ. ಆಹಾರ ಧಾನ್ಯಗಳನ್ನು ಮೆಟ್ರೋಪಾಲಿಟನ್ ದೇಶಗಳಿಂದ ಕೊಳ್ಳುವುದರಿಂದ, ಯಾವುದೇ ವಿಷಯದ ಬಗ್ಗೆ ಅವರು ತಳೆಯುವ ನಿಲುವುಗಳನ್ನು ಭಾರತವು ಬೆಂಬಲಿಸದ ಸಂದರ್ಭದಲ್ಲಿ, ಅವರು ಭಾರತಕ್ಕೆ ಧಾನ್ಯಗಳನ್ನು ಮಾರಲು ನಿರಾಕರಿಸುತ್ತಾರೆ. ಆಹಾರ ಧಾನ್ಯಗಳ ಆಮದಿಗಾಗಿ ಈ ದೇಶಗಳನ್ನು ಅವಲಂಬಿಸಿದಾಗ ನಮ್ಮ ಸಾರ್ವಭೌಮತೆಯನ್ನು ಕಳೆದುಕೊಳ್ಳಬೇಕಾಗುತ್ತದೆ ಎಂಬ ಸರಳ ಸತ್ಯದ ಸಾಕ್ಷಾತ್ಕಾರವೇ ಇಂದಿರಾ ಗಾಂಧಿಯವರ ಸರ್ಕಾರವನ್ನು ಆಹಾರ ಸ್ವಾವಲಂಬನೆಯ ಉದ್ದೇಶಕ್ಕಾಗಿ ಹಸಿರು ಕ್ರಾಂತಿಗೆ ಮುಂದಾಗುವಂತೆ ಪ್ರೇರೇಪಿಸಿತು. ಗಡಿಯಾರವನ್ನು ಹಿಂದಕ್ಕೆ ತಿರುಗಿಸುವ ಮತ್ತು ದೇಶದ ಈ ಸ್ವಾವಲಂಬನೆಯನ್ನು (ಈ ಸ್ವಾವಲಂಬನೆಯಲ್ಲಿ ಜನರ ಕೊಳ್ಳುವ ಶಕ್ತಿಯು ಕಡಿಮೆ ಮಟ್ಟದಲ್ಲಿದ್ದರೂ ಸಹ) ನಾಶಪಡಿಸುವ ಕಾರ್ಯವನ್ನು ಮೋದಿ ಸರ್ಕಾರದ ಕೃಷಿ ಕಾನೂನುಗಳು ಮಾಡುತ್ತಿವೆ. ಸರ್ಕಾರದ ಈ ವಿಧೇಯತೆಯನ್ನು ಸಾಮ್ರಾಜ್ಯಶಾಹಿಯು ಬಹಳ ಸಮಯದಿಂದಲೂ ನಿರೀಕ್ಷಿಸುತ್ತಿತ್ತು. ಬೆನ್ನುಮೂಳೆಯಿಲ್ಲದ ಮೋದಿ ಸರ್ಕಾರವು ಸಾಮ್ರಾಜ್ಯಶಾಹಿಗೆ ಶರಣಾಗಿದೆ.

ಈ ಶರಣಾಗತಿಗೆ ವಿರೋಧವಾಗಿ ರೈತ ಚಳುವಳಿಯು ಸೆಟೆದು ನಿಂತಿದೆ. ಕಾರ್ಪೊರೇಟ್ ಕೃಷಿಯ ಜಾರಿಗೆ ಸಮ್ಮತಿಸುವುದು ಮತ್ತು ಕಾರ್ಪೊರೇಟ್ ಕೃಷಿಯಲ್ಲಿ ರೈತರಿಗೆ ಎಷ್ಟು ಪಾಲು ದೊರಕಬೇಕು ಮತ್ತು ಕಾರ್ಪೊರೇಟ್‌ಗಳಿಗೆ ಎಷ್ಟು ಪಾಲು ದೊರಕಬೇಕು ಎಂಬುದರ ಬಗ್ಗೆ ಮಾತ್ರ ಚೌಕಾಶಿ ಮಾಡಲು ಹೊರಟರೆ, ರೈತರು ತಮ್ಮ ಭವಿಷ್ಯವನ್ನು ನಿರ್ಲಕ್ಷಿಸಿದಂತಾಗುತ್ತದೆ. ಅದು, ದೇಶದ ಅಳಿದುಳಿದ ಸಾರ್ವಭೌಮತೆಯನ್ನು ಸಾಮ್ರಾಜ್ಯಶಾಹಿಗೆ ಗಿರವಿ ಇಡುವ ಹೀನ ಕೃತ್ಯವೂ ಆಗುತ್ತದೆ. ಅದರ ಜೊತೆಗೆ, ಸಾರ್ವಜನಿಕ ವಿತರಣಾ ವ್ಯವಸ್ಥೆಯು ಮತ್ತಷ್ಟು ದುರ್ಬಲಗೊಳ್ಳುತ್ತದೆ. ಮತ್ತು, ಪ್ರತಿ ವರ್ಷವೂ ಅನಿಶ್ಚಿತ ಪ್ರಮಾಣದ ಆಮದುಗಳ ಕಾರಣದಿಂದ ಈ ವ್ಯವಸ್ಥೆಯು ಉಳಿಯುವ ಸಾಧ್ಯತೆಯೂ ಇರುವುದಿಲ್ಲ.

ಎಂಎಸ್‌ಪಿ ಮತ್ತು ಆಹಾರ ದಾಸ್ತಾನು


ಎರಡನೆಯ ತಪ್ಪು ಕಲ್ಪನೆಯು ಎಂಎಸ್‌ಪಿಯನ್ನು ಮತ್ತು ಧಾನ್ಯಗಳ ಖರೀದಿಯನ್ನು ದೇಶದಾದ್ಯಂತ ಜಾರಿಗೊಳಿಸುವುದು ಭಾರತದಲ್ಲಿ ಅನಗತ್ಯ ಎಂಬ ನಂಬಿಕೆಗೆ ಸಂಬಂಧಿಸಿದೆ. ಧಾನ್ಯ ಹೆಚ್ಚುವರಿಯ ಕೇವಲ ಮೂರು ಪ್ರದೇಶಗಳಾದ ಪಂಜಾಬ್, ಹರಿಯಾಣ ಮತ್ತು ಪಶ್ಚಿಮ ಉತ್ತರ ಪ್ರದೇಶದಿಂದ ಭಾರತ ಆಹಾರ ನಿಗಮವು(ಎಫ್‌ಸಿಐ) ಕೈಗೊಳ್ಳುತ್ತಿರುವ ಒಟ್ಟಾರೆ ಖರೀದಿಯು ದೇಶದ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಹಂಚಲು ಸಾಕಾಗುತ್ತದೆ ಎಂದು ವಾದಿಸಲಾಗಿದೆ. ಜೊತೆಗೆ, ದೇಶಾದ್ಯಂತ ಧಾನ್ಯಗಳನ್ನು ಕೊಳ್ಳುವುದರಿಂದ ಗೋದಾಮುಗಳಲ್ಲಿ ದಾಸ್ತಾನುಗಳು ಹೆಚ್ಚುತ್ತವೆ, ಸಂಗ್ರಹಣೆಯ ವೆಚ್ಚಗಳು ಹೆಚ್ಚುತ್ತವೆ ಮತ್ತು ಅಂಥಹ ಸಂಗ್ರಹಣೆಗಾಗಿ ಬ್ಯಾಂಕ್‌ಗಳಿಂದ ಪಡೆದ ಸಾಲದ ಮೇಲಿನ ಬಡ್ಡಿ ಹೆಚ್ಚುತ್ತದೆ. ಹಾಗಾಗಿ, ಖರ್ಚಿನ ಹೊರೆ ಹೆಚ್ಚುತ್ತದೆ. ಆದ್ದರಿಂದ, ಧಾನ್ಯ ಹೆಚ್ಚುವರಿಯ ಮೂರು ಪ್ರದೇಶಗಳಿಂದ ಆಚೆಯ ರಾಜ್ಯಗಳಿಗೆ ಖರೀದಿಯ ಜಾಲದ ವಿಸ್ತರಣೆಯು ಎರಡು ಪಟ್ಟು ಹೆಚ್ಚು ದುಂದು ವೆಚ್ಚದ ಕ್ರಮವಾಗುತ್ತದೆ – ಸರ್ಕಾರದ ಗೋದಾಮುಗಳಲ್ಲಿ ತುಂಬಿ ತುಳುಕುವ ಧಾನ್ಯಗಳು ವ್ಯರ್ಥವಾಗುತ್ತವೆ. ಆದ್ದರಿಂದ, ಅವುಗಳ ಖರೀದಿಗೆ ಮತ್ತು ಸಂಗ್ರಹಕ್ಕೆ ಬಳಸಿದ ಹಣವೂ ವ್ಯರ್ಥವಾಗುತ್ತದೆ. ಹಾಗಾಗಿ, ಬೆಂಬಲ ಬೆಲೆ ಮತ್ತು ಖರೀದಿ ಕಾರ್ಯಾಚರಣೆಗಳ ವ್ಯಾಪ್ತಿಯನ್ನು ಸೀಮಿತಗೊಳಿಸುವುದೇ ಒಳ್ಳೆಯದು ಎಂಬುದಾಗಿ ವಾದಿಸಲಾಗಿದೆ.

ಈ ವಾದವೂ ತಪ್ಪೇ. ಅದು ಭಾರತೀಯ ಕೃಷಿಯ ಬಗ್ಗೆ ಹೊಂದಿರುವ ಜ್ಞಾನದ ಕೊರತೆಯನ್ನು ಬಯಲುಮಾಡಿಕೊಳ್ಳುತ್ತದೆ. ಅದೇನೇ ಇರಲಿ, ಎಫ್‌ಸಿಐ ಹೇಗೂ ಇತರ ರಾಜ್ಯಗಳಿಂದ ಹೆಚ್ಚು ಧಾನ್ಯಗಳನ್ನು ಸಂಗ್ರಹಿಸುತ್ತಿಲ್ಲ. ಆದ್ದರಿಂದ, ಎಂಎಸ್‌ಪಿಯ ಏರಿಕೆಯು ಧಾನ್ಯಗಳ ಸಂಗ್ರಹಣಾ ವೆಚ್ಚದ ಮೊತ್ತವನ್ನು ಹೆಚ್ಚಿಸುವುದಿಲ್ಲ. ಎಂಎಸ್‌ಪಿ ಎಂಬುದು ಒಂದು ಕನಿಷ್ಠ ಮಟ್ಟದ ಬೆಲೆಯಾಗಿರುತ್ತದೆ ಮತ್ತು ಈ ಕನಿಷ್ಠ ಮಟ್ಟದ ಬೆಲೆಯಲ್ಲಿನ ಏರಿಕೆಯು ಧಾನ್ಯಗಳ ಮುಕ್ತ ಮಾರುಕಟ್ಟೆ ಮಾರಾಟದ ಬೆಲೆಯನ್ನು ಹೆಚ್ಚಿಸುತ್ತದೆ, ನಿಜ. ಆದರೆ, ಈ ಎಂಎಸ್‌ಪಿಯ ಏರಿಕೆಯ ಪರಿಣಾಮವು ನೈಜವಾಗಿ ಏನಾಗುತ್ತದೆ ಎಂದರೆ, ಅದು ರೈತರ ಆದಾಯವನ್ನು ಹೆಚ್ಚಿಸುತ್ತದೆ. ಹೇಗೆಂದರೆ, ಎಫ್‌ಸಿಐ ಹೊರಗಿನ (ಮುಕ್ತ ಮಾರುಕಟ್ಟೆ) ಮಾರಾಟದ ಮೇಲೆ ರೈತರು ಪಡೆಯುವ ಬೆಲೆಯನ್ನು ಹೆಚ್ಚಿಸುತ್ತದೆ. ಈ ಏರಿಕೆಯು ಸರ್ಕಾರದ ಸಂಗ್ರಹಣೆಯ ಹೆಚ್ಚಳದ ಕಾರಣದಿಂದಾಗಿ ಆದದ್ದಲ್ಲ. ಅಂತಹ ಹೆಚ್ಚಳವಿಲ್ಲದೆಯೂ ಆದ ಏರಿಕೆ.

ಆದರೆ, ಮುಕ್ತ ಮಾರುಕಟ್ಟೆಯ ಬೇಡಿಕೆಯ ಕುಸಿತವಿಲ್ಲದೆ ಮುಕ್ತ ಮಾರುಕಟ್ಟೆಯ ಬೆಲೆ ಏರುವುದಾದರೂ ಹೇಗೆ? ಮುಕ್ತ ಮಾರುಕಟ್ಟೆಯಲ್ಲಿ ಬೇಡಿಕೆ ಕುಸಿತವಾಗಿದೆ ಎಂದರೆ ಎಫ್‌ಸಿಐ ನಿಂದ ದೊಡ್ಡ ಪ್ರಮಾಣದ ಸಂಗ್ರಹಣೆ ಆಗಿದೆ ಎಂಬುದನ್ನು ಸೂಚಿಸುತ್ತದಲ್ಲವೇ? ಈ ಒಗಟಿನ ಪ್ರಶ್ನೆಗೆ ಉತ್ತರ– ಹೆಚ್ಚು ಆದಾಯ ಗಳಿಸುವವರ (ಅಂದರೆ, ರೇಷನ್ ವ್ಯಾಪ್ತಿಯಿಂದ ಹೊರಗಿರುವವರ) ಆಹಾರ ಧಾನ್ಯಗಳ ಬೇಡಿಕೆಯು ಸಾಮಾನ್ಯವಾಗಿ ಬೆಲೆ ಮಟ್ಟವನ್ನು (ಹಿಗ್ಗುವ–ಕುಗ್ಗುವ ಪರಿಸ್ಥಿತಿ)ಅವಲಂಬಿಸಿರುವುದಿಲ್ಲ. ಅಂದರೆ, ಮುಕ್ತ ಮಾರುಕಟ್ಟೆಯಲ್ಲಿ ಆಹಾರ ಧಾನ್ಯಗಳ ಬೆಲೆ ಏರಿದರೂ ಸಹ ಅವರ ಬೇಡಿಕೆಯು ಹೆಚ್ಚು ಕುಗ್ಗುವುದಿಲ್ಲ. ಆದ್ದರಿಂದ, ಎಂಎಸ್‌ಪಿಯ ಏರಿಕೆಯನ್ನನುಸರಿಸಿ ಮುಕ್ತ ಮಾರುಕಟ್ಟೆಯಲ್ಲಿ ಸಮಾನಾಂತರವಾಗಿ ಬೆಲೆಗಳು ಏರುವ ಕಾರಣದಿಂದಾಗಿ ಎಫ್‌ಸಿಐನಲ್ಲಿ ಧಾನ್ಯಗಳು ಮಾರಾಟವಾಗದೆ ಉಳಿದುಬಿಡುತ್ತವೆ (ಅಂದರೆ, ಎಫ್‌ಸಿಐನಲ್ಲಿ ಅಧಿಕ ದಾಸ್ತಾನು ಉಳಿದುಬಿಡುತ್ತದೆ) ಎಂಬ ಪ್ರಶ್ನೆಯು ಉದ್ಭವಿಸುವುದೇ ಇಲ್ಲ.

ಪುಟ 15 ನೋಡಿ

ರೈತ ಕೃಷಿಯ ಮೇಲಿನ ಕಾರ್ಪೊರೇಟ್ ಅತಿಕ್ರಮಣವು ರೈತರು ಮತ್ತು ಕಾರ್ಪೊರೇಟ್‌ಗಳ ನಡುವಿನ ದ್ವಿಪಕ್ಷೀಯ ಸಮಸ್ಯೆಯಲ್ಲ.. ಇದು ಎಲ್ಲರಿಗೂ ಸಂಬಂಧಿಸಿದ ವಿಷಯ. ಏಕೆಂದರೆ, ಈ ಅತಿಕ್ರಮಣವು ಇಡೀ ಅರ್ಥವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ. ಇದು ಚತುರ ಮಾತುಗಾರಿಕೆಯಲ್ಲ, ಅಕ್ಷರಶಃ ನಿಜ. ಕಾರ್ಪೊರೇಟ್ ಅತಿಕ್ರಮಣದ ವಿರುದ್ಧ ಹೋರಾಡುವ ಪ್ರಕ್ರಿಯೆಯಲ್ಲಿ ರೈತರು ವಸ್ತುಶಃ ಭಾರತವನ್ನು "ಆಹಾರ ಸಾಮ್ರಾಜ್ಯಶಾಹಿ"ಗೆ ಒಳಪಡಿಸುವ ನೀತಿಯ ವಿರುದ್ಧವಾಗಿ ಇಡೀ ಸಮಾಜದ ಪರವಾಗಿ ಹೋರಾಟ ಮಾಡುತ್ತಿದ್ದಾರೆ.



ಕಾಂ. ಪ್ರಮೀಳಾ ಪಂಧೆ ನಿಧನ





ಸಿಪಿಐ(ಎಂ)ನ ಹಿರಿಯ ಮುಖಂಡರೂ, ಜನವಾದಿ ಮಹಿಳಾ ಸಂಘಟನೆಯ ಸಂಸ್ಥಾಪಕರಲ್ಲಿ ಒಬ್ಬರು ಹಾಗೂ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಸಂಸ್ಥಾಪಕರಲ್ಲೊಬ್ಬರೂ ಆಗಿದ್ದ ಕಾಂ. ಪ್ರಮೀಳಾ ಪಂಧೆ ಅಕ್ಟೋಬರ್ 31 ರಂದು ನಿಧನರಾಗಿದ್ದಾರೆ. ಅವರಿಗೆ 94 ವರ್ಷವಾಗಿತ್ತು.

ಮಹಾರಾಷ್ಟ್ರದ ಭುಸಾವಳದಲ್ಲಿ ನವಂಬರ್ 26, 1927ರಲ್ಲಿ ಜನಿಸಿದ ಪ್ರಮೀಳಾರವರ ತಂದೆ ಲೋಕಮಾನ್ಯ ತಿಳಕರ ಅನುಯಾಯಿಯಾಗಿದ್ದರು. ಬಾಲಕಿ ಯಾಗಿದ್ದಾಗಲೇ ಸ್ವಾತಂತ್ರ್ಯ ಆಂದೋಲನದ ಭಾಗವಾಗಿದ್ದ 'ಪ್ರಭಾತ ಫೇರಿ'ಗಳಲ್ಲಿ ಭಾಗವಹಿಸುತ್ತಿದ್ದ ಪ್ರಮೀಳಾ ಮುಂದೆ ಪಿಕೆಟಿಂಗ್‌ಗಳಲ್ಲೂ ಭಾಗವಹಿಸಲಾರಂಭಿಸಿದರು. 1937ರಲ್ಲಿ ಉಪ್ಪಿನ ಸತ್ಯಗ್ರಹದಲ್ಲಿ ಭಾಗವಹಿಸಿದರು. 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ 15 ವರ್ಷ ವಯಸ್ಸಿನಲ್ಲೇ 5 ದಿನ ಜೈಲುವಾಸವನ್ನೂ ಅನುಭವಿಸಿದರು.

1946ರಲ್ಲಿ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ಸದಸ್ಯರಾದ ಅವರು ವಿದ್ಯಾರ್ಥಿ ಚಳುವಳಿಯಲ್ಲಿ ಸಕ್ರಿಯರಾದರು. 1947ರಿಂದ ಕಮ್ಯುನಿಸ್ಟ್ ಪಕ್ಷದ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ಭಾಗವಹಿಸಲಾರಂಭಿಸಿದ ಕಾಂ. ಪ್ರಮೀಳಾ ಪಕ್ಷ ಭೂಗತವಾಗಿ ಕೆಲಸ ಮಾಡಬೇಕಾಗಿದ್ದ ಸಮಯದಲ್ಲಿ ಪಕ್ಷದ ಸದಸ್ಯರಾದರು. ಅಂದಿನಿಂದ ತಮ್ಮನ್ನು ಪೂರ್ಣವಾಗಿ ವಿವಿಧ ಜನಸಮೂಹಗಳ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು.

ಮಹಿಳಾ ಹಕ್ಕುಗಳ ಹೋರಾಟಗಾರರಾಗಿದ್ದ ಅವರು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಸ್ಥಾಪನೆಯಲ್ಲಿ ಮಹತ್ವದ ಪಾತ್ರ ವಹಿಸಿದರು. ದಿಲ್ಲಿಯಲ್ಲಿ ಸಿಐಟಿಯು ಸ್ಥಾಪನೆಯಲ್ಲಿ ಮತ್ತು ಸಿಐಟಿಯುನ ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಸ್ಥಾಪನೆಯಲ್ಲೂ ಮಹತ್ವದ ಪಾತ್ರ ವಹಿಸಿದರು.

ಸಿಐಟಿಯುನ ಪ್ರಧಾನ ಕಾರ್ಯದರ್ಶಿ ಮತ್ತು ಅಧ್ಯಕ್ಷರಾಗಿದ್ದ ಕಾಂ. ಎಂ.ಕೆ. ಪಂಧೆಯವರ ಬಾಳ ಸಂಗಾತಿಯೂ ಆಗಿದ್ದ ಕಾಂ. ಪ್ರಮೀಳಾ ಪಂಧೆಯವರು ದೇಶದ ಕಾರ್ಮಿಕ ಆಂದೋಲನಕ್ಕೆ ಮತ್ತು ಮಹಿಳಾ ಚಳುವಳಿಗೆ ನೀಡಿದ ಕೊಡುಗೆಗಳು ಸದಾ ಸ್ಮರಣೀಯ ಎಂದು ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ಸಿಐಟಿಯು ಹೇಳಿದೆ.

ಮಹಿಳಾ ಆಂದೋಲನ ತನ್ನ ಇಡೀ ಬದುಕನ್ನು ಬಡವರು ಮತ್ತು ಮಹಿಳೆಯರ ವಿಮೋಚನೆಗೆ ಸಮರ್ಪಿಸಿಕೊಂಡಿದ್ದ ಅಮೂಲ್ಯ ಮುಖಂಡೆಯೊಬ್ಬರನ್ನು ಕಳಕೊಂಡಿದೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸಿದೆ.

ತ್ರಿಪುರಾದಲ್ಲಿ ಕೋಮುವಾದಿ ಹಿಂಸಾಚಾರ–ದುರಾಡಳಿತದ ವಿರುದ್ಧ ಆಕ್ರೋಶವನ್ನು ಬೇರೆಡೆಗೆ ತಿರುಗಿಸಲು ಬಿಜೆಪಿ ಹುನ್ನಾರ

ಅಕ್ಟೋಬರ್ 13ರ ನಡುರಾತ್ರಿ ಬಾಂಗ್ಲಾದೇಶದ ಕೊಮಿಲ್ಲಾದಲ್ಲಿ ದುರ್ಗಾಪೂಜಾ ಪಂಡಾಲೊಂದರಲ್ಲಿ ಒಂದು ಮೂರ್ತಿಯ ಹಿಂದೆ ಕುರಾನನ್ನು ರಹಸ್ಯವಾಗಿ ಇಟ್ಟ ಕುಕೃತ್ಯ ಅಲ್ಲಿನ ಹತ್ತು ಜಿಲ್ಲೆಗಳಲ್ಲಿ ಹಿಂದೂ–ವಿರೋಧಿ ಹಿಂಸಾಚಾರದ ಕಿಡಿ ಹೊತ್ತಿಸಿತು. ಅದು ಆ ಪ್ರದೇಶದಲ್ಲಿ ಹಿಂದೂಗಳು ಮತ್ತು ಮುಸ್ಲಿಮರ ನಡುವಿನ ದೀರ್ಘಕಾಲದ ಸಾಮರಸ್ಯದ ಪರಂಪರೆಯನ್ನು ಮುರಿಯುವ ಮೂಲಭೂತವಾದಿಗಳ ಪಿತೂರಿಯಾಗಿತ್ತು ಎಂಬುದಲ್ಲೇನೂ ಯಾರಿಗೂ ಸಂದೇಹವಿರಲಿಲ್ಲ.

ಆದರೆ ಬಾಂಗ್ಲಾದೇಶ ಸರಕಾರ ತಕ್ಷಣವೇ ಶಾಂತಿ, ಪರಸ್ಪರ ವಿಶ್ವಾಸವನ್ನು ಮತ್ತೆ ನೆಲೆಗೊಳಿಸುವ ಕ್ರಮಗಳನ್ನು ಕೈಗೊಂಡಿತು. ಈ ಕುಕೃತ್ಯ ಎಸಗಿದವರನ್ನು ಗುರುತಿಸಿ ಕಸ್ಟಡಿಗೆ ಒಯ್ಯಲಾಯಿತು.

ಈ ಘಟನೆಗಳನ್ನು ಅಲ್ಲಿನ ಮತ್ತು ಗಡಿಯೀಚೆಗಿನ, ಮತ್ತು ನಮ್ಮ ಸಮಸ್ತ ಉಪಖಂಡದ ವಿವೇಚನಾಶೀಲ ಜನಗಳೆಲ್ಲರೂ ಬಲವಾಗಿ ಖಂಡಿಸಿದ್ದಾರೆ. ಬಾಂಗ್ಲಾದೇಶದ ಶಾಂತಿಪ್ರಿಯ ಜನಗಳು, ಅದರಲ್ಲೂ ಎಡಪಂಥೀಯರು ಇದಕ್ಕೆ ನೇತೃತ್ವ ನೀಡಿದ್ದಾರೆ. ಇದರಿಂದಾಗಿ ಬಾಂಗ್ಲಾದೇಶದ ಸರಕಾರ ಕಿಡಿಗೇಡಿಗಳ ವಿರುದ್ಧ ತಕ್ಷಣವೇ ಕ್ರಮಗಳನ್ನು ಕೈಗೊಂಡಿದೆ.

ಗಡಿಯ ಈಚೆ ತ್ರಿಪುರಾದಲ್ಲಿ ಜನರು ಆರಂಭದಲ್ಲಿ ಅದಕ್ಕೆ ಸಂಯಮದಿಂದಲೇ ಸ್ಪಂದಿಸಿದರು. ಆದರೆ ಬಿಜೆಪಿ ಇದನ್ನು ಒಂದು ಸಾಧನವಾಗಿ ಬಳಸಿ ರಾಜ್ಯದಲ್ಲಿ ತನ್ನ ದುರಾಡಳಿತದಿಂದ ಆಕ್ರೋಶಗೊಂಡಿರುವ ಜನಗಳ ಗಮನವನ್ನು ಬೇರೆಡೆಗೆ ತಿರುಗಿಸುವ ಪ್ರಯತ್ನಕ್ಕೆ ಮುಂದಾಯಿತು ಎಂದು ಸಿಪಿಐ(ಎಂ) ತ್ರಿಪುರಾ ರಾಜ್ಯ ಕಾರ್ಯದರ್ಶಿ ಜಿತೇಂದ್ರ ಚೌಧುರಿ ಹೇಳಿದ್ದಾರೆ.

ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಸಂದರ್ಭದಲ್ಲಿ ಇದರ ಪ್ರಯೋಜನ ಪಡೆಯಲು ವಿಹೆಚ್‌ಪಿಯನ್ನು ಅದು ಛೂ ಬಿಟ್ಟಿತು. ಅಕ್ಟೋಬರ್ 21ರಂದು ಅಗರ್ತಲಾದಲ್ಲಿ ಒಂದು ಪ್ರತಿಭಟನಾ ಮತಪ್ರದರ್ಶನ ಸಂಘಟಿಸಿತು. ಅದರಲ್ಲಿ ಪ್ರಚೋದನಾಕಾರಿ ಮುಸ್ಲಿಂ–ವಿರೋಧಿ ಘೋಷಣೆಗಳನ್ನು ಕೂಗಲಾಯಿತು. ರಾಜ್ಯದ ಇತರೆಡೆಗಳಲ್ಲೂ ಇಂತಹುದೇ ಪ್ರಚೋದನಾಕಾರಿ ಪ್ರತಿಭಟನೆಗಳನ್ನು ನಡೆಸಲಾಯಿತು. ಇದನ್ನನುಸರಿಸಿ ವಿಹೆಚ್‌ಪಿ ಅನುಯಾಯಿಗಳು ಮಸೀದಿಗಳ ಮೇಲೆ ಹಿಂಸಾತ್ಮಕ ಹಲ್ಲೆಗಳನ್ನು ಆರಂಭಿಸಿದರು. ಉತ್ತರ ತ್ರಿಪುರ, ಗೋಮತಿ ಮತ್ತು ಸೆಪಾಹಿಜಾಲಾದಲ್ಲಿ 14 ಮಸೀದಿಗಳ ಮೇಲೆ ಹಲ್ಲೆಗಳು ನಡೆದವು. ಬಿಸಾಲಗಡ್ ಮತ್ತು ಉದಯಪುರದಲ್ಲಿ ಕನಿಷ್ಟ ಎರಡು ಮಸೀದಿಗಳಿಗೆ ಬೆಂಕಿ ಹಚ್ಚಲಾಯಿತು. ಮೂರು ಮಸೀದಿಗಳಲ್ಲಿ ದಾಂಧಲೆ ನಡೆಯಿತು. ಹೆಚ್ಚಿನ ಕಡೆಗಳಲ್ಲಿ ಮಸೀದಿಗಳ ಗೋಪುರಗಳ ಮೇಲಿದ್ದ ಧ್ವನಿವರ್ಧಕಗಳನ್ನು ತೆಗೆದರು. ರೋವಾ ಎಂಬಲ್ಲಿ ಸಣ್ಣ ಮುಸ್ಲಿಂ ಅಂಗಡಿಗಳಿಗೆ, ಮನೆಗಳಿಗೆ ಬೆಂಕಿ ಹಚ್ಚಿದರು

ಆದರೆ ಈ ಮತೀಯ ಉನ್ಮಾದ ಹೆಚ್ಚು ಕಾಲ ನಡೆಯಲಿಲ್ಲ. ಇದನ್ನು ರಾಜ್ಯದ ಎಲ್ಲ ವಿಚಾರವಂತ, ಶಾಂತಿಪ್ರಿಯ ಶಕ್ತಿಗಳು ಮತ್ತು ಜನಗಳು, ಮಾಧ್ಯಮಗಳ ದೊಡ್ಡ ವಿಭಾಗದವರೂ ಖಂಡಿಸಿದರು. ಸಿಪಿಐ(ಎಂ) ತ್ರಿಪುರಾ ರಾಜ್ಯಸಮಿತಿ ಪ್ರಚೋದಕರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದೆ ಮತ್ತು ಎಲ್ಲ ದೇಶಪ್ರೇಮಿ, ಜಾತ್ಯತೀತ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಎಚ್ಚರದಿಂದಿದ್ದು ಎಲ್ಲ ಜಾತಿ–ಮತಗಳ ನಡುವೆ ಶಾಂತಿ ಮತ್ತು ಸೌಹಾರ್ದದ ತ್ರಿಪುರಾದ ದೀರ್ಘಕಾಲದ ಪರಂಪರೆಯನ್ನು ಉಳಿಸಿಕೊಳ್ಳಬೇಕು ಎಂದು ಕರೆ ನೀಡಿದೆ.

ನೂರು ಕೋಟಿ ಲಸಿಕೆ ಸಾಧನೆಯ ಹಿಂದೆಮುಂದೆ........ ಪುಟ 6 ರಿಂದ

ಅನ್ನು ಪಡೆದಿದ್ದಾರೆ, ಇಂದಿನಿಂದ ಒಂದು ವರ್ಷದೊಳಗೆ ಇದೇ ಸಂಖ್ಯೆಯ ಲಸಿಕೆಯನ್ನು ನೀಡಬೇಕಾಗಬಹುದು. ಇದರ ಅರ್ಥವೇನೆಂದರೆ, ಒಂದು ವರ್ಷದೊಳಗೆ, ಭಾರತವು ಈ ವರ್ಷ ಸಜ್ಜುಗೊಳಿಸಿದ ಅದೇ ಪ್ರಮಾಣದ ಲಸಿಕೆ ಗಳನ್ನು ಪೂರೈಸಬೇಕಾಗಬಹುದು. ಪೂರೈಕೆಗಳ ಪ್ರಮಾಣವು ಈಗಾಗಲೇ ಅಸ್ತಿತ್ವದಲ್ಲಿರುವ ಬ್ಯಾಕ್‌ಲಾಗ್ ಅನ್ನು ಸಹ ಒಳಗೊಂಡಿಲ್ಲ. ಹೀಗಾಗಿ ಕೇಳಬೇಕಾದ ಪ್ರಶ್ನೆಯೆಂದರೆ: ಭವಿಷ್ಯದಲ್ಲಿ ಬಹುಶಃ ಬೇಕಾಗಬಹುದಾದ ಪೂರೈಕೆಗಳನ್ನು ಭಾರತ ಸರ್ಕಾರ ಪಡೆದುಕೊಂಡಿದೆಯೇ? ಅಥವಾ,ಈಗಿನ ಸುತ್ತಿನ ಲಸಿಕೆಗಾಗಿ ಸಾಕಷ್ಟು ಸರಬರಾಜುಗಳನ್ನು ಪಡೆಯಲು ಸಾಕಷ್ಟು ತ್ವರಿತವಾಗಿ ಕಾರ್ಯನಿರ್ವಹಿಸದಿರುವ ತನ್ನ ವೈಫಲ್ಯದಿಂದ ಕಲಿಯಲು ವಿಫಲವಾಗುತ್ತದೆಯೇ? ಎರಡನೇ ತಲೆಮಾರಿನ ಕೋವಿಡ್ ಲಸಿಕೆಗಳನ್ನು ಅಭಿವೃದ್ಧಿಪಡಿಸುವ ವಿಷಯದಲ್ಲಿ ಭಾರತದ ಸನ್ನದ್ಧತೆಯ ಬಗ್ಗೆ ನಾವು ಇನ್ನೂ ಚರ್ಚಿಸುತ್ತಿಲ್ಲ ಎಂಬುದು ನೆನಪಿರಲಿ.

ಕೋವಾಕ್ಸಿನ್ ಫ್ಲಾಪ್ ಶೋ

ಸ್ವಪ್ರಶಂಸೆಯ ಭಂಡ ತೋರಿಕೆಯ ಹೊರತಾಗಿಯೂ, ಭಾರತದ ಲಸಿಕೆ ಉತ್ಪಾದನಾ ಸಾಮರ್ಥ್ಯವು ಅದರ ದುರ್ಬಲತೆಯಾಗಿದೆ. ಇದಕ್ಕೆ ಸರಳ ಕಾರಣವೆಂದರೆ ಒಂದೇ ಮೂಲದಿಂದ ಸರಬರಾಜು ಮಾಡಲಾದ ಒಂದು ಲಸಿಕೆಯ ಮೇಲೆ ಅಗಾಧವಾದ ಅವಲಂಬನೆಯಾಗಿದೆ. ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ (SII).

ಈ ಕಂಪನಿಯ ಲಸಿಕೆಯಾದ ಕೋವಿಶೀಲ್ಡ್, ಇದುವರೆಗೆ ಭಾರತೀಯರಿಗೆ ತಲುಪಿಸಲಾದ 88 ಪ್ರತಿಶತದಷ್ಟು ಪ್ರಮಾಣ ಹೊಂದಿದೆ. ಗಮನಾರ್ಹವಾದ ಸಾರ್ವಜನಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಅಭಿವೃದ್ಧಿಪಡಿಸಲಾದ ದೇಸೀ ಲಸಿಕೆಯಾದ ಕೋವಾಕ್ಸಿನ್ ಹಿಂದುಳಿದಿದೆ.

ಹಲವಾರು ಸುಳ್ಳು ಭರವಸೆಗಳ ನಂತರವೂ ಕೋವಾಕ್ಸಿನ್ ಉತ್ಪಾದನೆಯು ನಿರೀಕ್ಷಿತ ದರದಲ್ಲಿ ಹೆಚ್ಚಿಲ್ಲ.

ಸೆಪ್ಟೆಂಬರ್‌ನಲ್ಲಿ, ಕೋವಾಕ್ಸಿನ್‌ನ ದೈನಂದಿನ ವಿತರಣೆಗಳು ಅತ್ಯಲ್ಪ 7.88 ಲಕ್ಷ ಡೋಸ್‌ಗಳಾಗಿವೆ;

ಅಕ್ಟೋಬರ್‌ನಲ್ಲಿ ಇಲ್ಲಿಯವರೆಗೆ, ಇದು 5.85 ಲಕ್ಷಕ್ಕೆ ಇಳಿದಿದೆ. ಇದು ಶೇಕಡಾ 25 ಕ್ಕಿಂತ ಹೆಚ್ಚು ಕುಸಿತವಾಗಿದೆ.

ಆಗಸ್ಟ್ 2 ರಂದು, ಈ ಬರಹಗಾರ ಸಹ ಭಾಗವಹಿಸಿದ ಟಿವಿ ಶೋನಲ್ಲಿ ಭಾಗವಹಿಸುವಾಗ, NK ಅರೋರಾ, ಅಧ್ಯಕ್ಷರು, ಪ್ರತಿರಕ್ಷಣೆ ಕುರಿತ ರಾಷ್ಟ್ರೀಯ ತಾಂತ್ರಿಕ ಸಲಹಾ ಗುಂಪು, ಮುಂದಿನ ನಾಲ್ಕರಿಂದ ಆರು ವಾರಗಳಲ್ಲಿ ಗಮನಾರ್ಹವಾದ 'ಉತ್ಪಾದನೆಯಲ್ಲಿ ಹೆಚ್ಚಳ" ಸನ್ನಿಹಿತವಾಗಿದೆ ಎಂದು ಭರವಸೆ ನೀಡಿದರು;

ಕೋವಾಕ್ಸಿನ್ ಸರಬರಾಜು ತಿಂಗಳಿಗೆ 10ರಿಂದ 12 ಕೋಟಿಗೆ ಹೆಚ್ಚಾಗುತ್ತದೆ ಎಂದು ಅವರು ಭರವಸೆ ನೀಡಿದರು.

ಆದರೆ ಸೆಪ್ಟೆಂಬರ್‌ನಲ್ಲಿ, ಅಕ್ಟೋಬರ್‌ನಲ್ಲಿ ಹಿಂದಿನ 1.8 ಕೋಟಿ ಯೋಜಿತ ಪೂರೈಕೆಗಳಿಗೆ ಹೋಲಿಸಿದರೆ, ಒಟ್ಟು ಕೇವಲ 2.4 ಕೋಟಿ ಲಸಿಕೆಗಳನ್ನು ವಾಸ್ತವವಾಗಿ ವಿತರಿಸಲಾಗಿದೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಆ "ಉಬ್ಬರದಂತಹ ಹೆಚ್ಚಳ" ಕಾರ್ಯರೂಪಕ್ಕೆ ಬರಲು ನಾವು ಇನ್ನೂ ಕಾಯುತ್ತಿದ್ದೇವೆ.

ಕೊವಿಡ್ ಶೀಲ್ಡ್ ಪೂರೈಕೆಯಲ್ಲೂ ತೊಡಕುಗಳು

ಏತನ್ಮಧ್ಯೆ, ಈ ಮಸುಕಾದ ಸನ್ನಿವೇಶದಲ್ಲಿ ಏಕೈಕ ಬೆಳ್ಳಿ ರೇಖೆಯೆಂದರೆ, ಸೀರಮ್ ಇನ್‌ಸ್ಟಿಟ್ಯೂಟ್‌ನ ಸಿಇಓ ಆದರ್ ಪೂನಾವಾಲಾ ಅವರು ಭರವಸೆ ನೀಡಿದ ಸಾಮರ್ಥ್ಯಗಳನ್ನು ತಲುಪಿದ ಹಾಗೆ ಕಾಣುತ್ತಿದೆ. ಕೋವಿಶೀಲ್ಡ್‌ನ ವಿತರಣೆಗಳು ಪ್ರತಿ ತಿಂಗಳು 22.0–24.0 ಕೋಟಿ ಡೋಸ್ ಆಗುತ್ತವೆ ಎಂದು SII ಹೇಳಿಕೊಂಡ ಸಾಮರ್ಥ್ಯಗಳಿಗೆ ಹತ್ತಿರದಲ್ಲಿವೆ.

ಸೆಪ್ಟೆಂಬರ್‌ನಲ್ಲಿ, 21.3 ಕೋಟಿ ಡೋಸ್‌ಗಳನ್ನು ವಿತರಿಸಲಾಯಿತು, ಆದರೆ ಅಕ್ಟೋಬರ್‌ನಲ್ಲಿ ವಿತರಣೆ ನಿಧಾನವಾಯಿತು. ಪ್ರತಿರಕ್ಷಣೆ ಕೇಂದ್ರಗಳಲ್ಲಿ ಕೋವಿಶೀಲ್ಡ್ ವಿತರಣೆಯು ಸೆಪ್ಟೆಂಬರ್‌ನಲ್ಲಿ ದೈನಂದಿನ ಸರಾಸರಿ 70.9 ಲಕ್ಷ ಡೋಸ್‌ಗಳಿಂದ ದಿನಕ್ಕೆ ಸುಮಾರು 47.0 ಲಕ್ಷ ಡೋಸ್‌ಗಳಿಗೆ ಇಳಿದಿದೆ. ಈ ದರದಲ್ಲಿ, ಅಕ್ಟೋಬರ್‌ನಲ್ಲಿ SII ನ ಕೋವಿಶೀಲ್ಡ್ ವಿತರಣೆಗಳು ಕೇವಲ 14.6 ಕೋಟಿ ಡೋಸ್‌ಗಳಾಗಿವೆ.

ಈ ಮಟ್ಟದ ಪೂರೈಕೆಯು SII ಯ ಘೋಷಿತ ಸಾಮರ್ಥ್ಯದ ಕನಿಷ್ಠ ಮಿತಿಯ ಮೂರನೇ ಎರಡರಷ್ಟು ಮಾತ್ರ.

ಸೀರಮ್ ಇನ್‌ಸ್ಟಿಟ್ಯೂಟ್‌ನಿಂದ ಆಗುವ ಸರಬರಾಜುಗಳಿಗೆ ಮತ್ತೊಂದು ತೊಡಕು ಸಹ ಕಾಡುತ್ತಿದೆ. ಇದು ಈಗಾಗಲೇ ಹಣವನ್ನು ಪಡೆದಿರುವ ವಿಶ್ವಸಂಸ್ಥೆಯ ಆರೋಗ್ಯ ಸಂಸ್ಥೆಯ ಕೊವ್ಯಾಕ್ಸ್ ಸೌಲಭ್ಯಕ್ಕೆ ಅದರ ಬಾಕಿ ಉಳಿದಿರುವ ಬದ್ಧತೆಗಳು. ವಾಸ್ತವವಾಗಿ, ಕೊವ್ಯಾಕ್ಸ್ ನಿಂದ ಧನಸಹಾಯವು SII ಗೆ ಕೊವಿಡ್ ಲಸಿಕೆ ಸಾಮರ್ಥ್ಯಗಳನ್ನು ಸ್ಥಾಪಿಸಲು ಅನುವು ಮಾಡಿಕೊಟ್ಟಿತು. ಏಕೆಂದರೆ ಮೋದಿ ಸರ್ಕಾರವು ಆ ಸಮಯದಲ್ಲಿ ಭಾರತೀಯ ಜನಸಂಖ್ಯೆಗೆ ಲಸಿಕೆ ಹಾಕಲು ನಿರ್ಧರಿಸಿರಲಿಲ್ಲ. ಅದು ಒಪ್ಪಂದದ ಬಾಧ್ಯತೆಗಳ ಉಲ್ಲಂಘನೆಯಾಗುವುದರಿಂದ ಕೊವ್ಯಾಕ್ಸ್ ಗೆ ಸರಬರಾಜುಗಳನ್ನು ಮುಂದೂಡುವ ಆಯ್ಕೆಯು SII ಗೆ ಅನಿರ್ದಿಷ್ಟವಾಗಿ ಲಭ್ಯವಾಗಿಲ್ಲ. ಈ ದೃಷ್ಟಿಕೋನದಿಂದ ನೋಡಿದಾಗ, ಮೋದಿ ಸರ್ಕಾರವು ವಿಶ್ವದ ಬಡ ದೇಶಗಳ ಸಂರಕ್ಷಕನೆಂದು ಪೋಸು ಕೊಡುವುದು ನಗು ತರಿಸುತ್ತದೆ.

ಮಕ್ಕಳಿಗಾಗಿ ಲಸಿಕೆಗಳನ್ನು ಅಧಿಕೃತಗೊಳಿಸುವ ಇತ್ತೀಚಿನ ಕ್ರಮಗಳು ಮೋದಿ ಆಡಳಿತವು ತನ್ನ ತಪ್ಪುಗಳಿಂದ ಅಷ್ಟೇನೂ ಕಲಿತಿಲ್ಲ ಎಂಬುದನ್ನು ತೋರಿಸುತ್ತದೆ. ಏಪ್ರಿಲ್ ಮತ್ತು ಮೇ ತಿಂಗಳಲ್ಲಿ, ಲಸಿಕೆಗಳ ತೀವ್ರ ಕೊರತೆಯ ನಡುವೆ, ಸರ್ಕಾರವು 18–45 ವಯೋಮಾನದವರಿಗೆ ವ್ಯಾಪ್ತಿಯನ್ನು ವಿಸ್ತರಿಸಿದ್ದಲ್ಲದೆ,ಅದರ ಕೋವಿಡ್ ಲಸಿಕೆ ಕಾರ್ಯಕ್ರಮಕ್ಕೆ ನಾಟಕೀಯ ಬದಲಾವಣೆಗಳನ್ನು ತಂದಿತು, ಇದು ಅದರ ಬದ್ಧತೆಯಾದ ದೀರ್ಘಕಾಲದ ಮತ್ತು ಯಶಸ್ವಿ ಸಾರ್ವತ್ರಿಕ ಮತ್ತು ಉಚಿತ ವ್ಯಾಪ್ತಿಯನ್ನು ಆಧರಿಸಿದ ರೋಗನಿರೋಧಕ ಕಾರ್ಯಕ್ರಮದಿಂದ ಗಮನಾರ್ಹ ವಿಚಲನವಾಗಿತ್ತು.

ತರುವಾಯ, ಅನೇಕ ರೋಲ್‌ಬ್ಯಾಕ್‌ಗಳನ್ನು ಮಾಡಲಾಗಿದ್ದರೂ, ಆ ವೈಫಲ್ಯದ ಪಾಠಗಳನ್ನು ಕಲಿಯಬೇಕಾಗಿದೆ.

ಮಕ್ಕಳಿಗೆ ಲಸಿಕೆಯನ್ನು ಪರಿಚಯಿಸುವ ಕ್ರಮವು ವೈಜ್ಞಾನಿಕ ಪುರಾವೆಗಳನ್ನು ಆಧರಿಸಿಲ್ಲ ಅಥವಾ ಆದ್ಯತೆಗಳ ತರ್ಕಬದ್ಧ ಕ್ರಮಕ್ಕೆ ಅನುಗುಣವಾಗಿಲ್ಲ. ಬದಲಾಗಿ, ಕೊವಾಕ್ಸಿನ್ ಅನ್ನು 'ಟ್ರಂಪ್ ಕಾರ್ಡ್' ಎಂದು ಹೇಳಲಾಗಿತ್ತು. ಆದರೆ ಅದು. ಪ್ಯಾಕ್ ನಲ್ಲಿ ಇರುವ ಜೋಕರ್ ಮಾತ್ರ ಎಂದು ಸಾಬೀತಾಗಿದೆ, ಅದರ ಬದ್ಧತೆಗಳನ್ನು ತಪ್ಪಿಸಲು ಮತ್ತು ಈ ಸಮಯದಲ್ಲಿ ದೇಶಕ್ಕೆ ಅಗತ್ಯವಿಲ್ಲದ ಉತ್ಪನ್ನಗಳ ವರ್ಗದಲ್ಲಿ ಅದರ ಸರಕುಗಳನ್ನು ಪ್ರಚಾರ ಮಾಡಲು ಅನುಮತಿಸಲಾಗುತ್ತಿದೆ.

ಬಾಂಗ್ಲಾದೇಶದಲ್ಲಿ ಕೋಮು ಹಿಂಸಾಚಾರ ಏಕೆ?

ಬಾಂಗ್ಲಾದೇಶದ ಕೆಲವು ಭಾಗಗಳಲ್ಲಿ ಅಕ್ಟೋಬರ್ 13 ರಿಂದ 16 ರ ಅವಧಿಯಲ್ಲಿ ದುರ್ಗಾ ಪೂಜಾ ಸಂಭ್ರಮಾಚರಣೆಗಳ ಮೇಲೆ ಅಭೂತಪೂರ್ವ ದಾಳಿ ಮತ್ತು ಹಿಂಸಾಚಾರ ನಡೆಯಿತು. ಭಾರತ ಸೇರಿದಂತೆ ಇಡೀ ಜಗತ್ತೇ ಈ ವಿದ್ಯಮಾನಗಳಿಂದ ಆಘಾತ ಮತ್ತು ಆಕ್ರೋಶಗೊಳಗಾಗಿದ್ದವು. ಕೊಮಿಲ್ಲಾದ ನಾನುವರ್ ದಿಘಿ ಯಲ್ಲಿ ಆರಂಭವಾಗಿ ದಾಳಿ ಮತ್ತು ಹಿಂಸಾಚಾರಗಳು ಚಾಂದ್ ಪುರ್, ನೌಖಾಲಿ ಮತ್ತು ಚಿತ್ತಗಾಂಗ್ ಗಳಿಗೆ ಹರಡಿದ್ದವು. ದೇಶದ 70 ದುರ್ಗಾ ಪೂಜಾ ಪೆಂಡಾಲುಗಳ ಮೇಲೆ ದಾಳಿ, ಅಗ್ನಿಸ್ಪರ್ಶ, ಹಿಂಸಾಚಾರಗಳು ನಡೆದವು ಈ ಘಟನೆಗಳು ಬಾಂಗ್ಲಾದೇಶದಲ್ಲಿ ವಾಸಿಸಿರುವ ಹಿಂದೂ ಮತ್ತಿತರ ಧಾರ್ಮಿಕ ಅಲ್ಪಸಂಖ್ಯಾತರಲ್ಲಿ ಭಯ. ಆತಂಕ, ಅಸುರಕ್ಷೆಯ ಭಾವ ಉಂಟು ಮಾಡಿವೆ. ಇದು ಭಾರತದಲ್ಲಿ (ಅದರಲ್ಲೂ ವಿಶೇಷವಾಗಿ ಆಸ್ಸಾಂ, ತ್ರಿಪುರಾ, ಪಶ್ಚಿಮ ಬಂಗಾಳಗಳಲ್ಲಿ ವಾಸಿಸಿರುವ) ಬಂಗಾಳಿಗಳಲ್ಲೂ ತೀವ್ರ ಆತಂಕ ಉಂಟು ಮಾಡಿದೆ.

ನಡೆದಿದ್ದೇನು?

ಈ ಹಿಂಸಾಚಾರಗಳಿಗೆ ಕಿಡಿಯಾದ ಘಟನೆ ಪೂರ್ವನಿಯೋಜಿತ ಮತ್ತು ಸಂಘಟಿತ ಪ್ರಯತ್ನವಾಗಿತ್ತು ಎಂಬುದು ಆ ಮೇಲಿನ ಅಧಿಕೃತ ತನಿಖೆಗಳಿಂದಲೇ ಸಿದ್ಧವಾಗಿದೆ. ಕೊಮಿಲ್ಲಾದ ನಾನುವರ್ ದಿಘಿ ಯಲ್ಲಿ ಮೂವರು ಪಿತೂರಿಗಾರರ ಗುಂಪೊಂದು ಕುರಾನನ್ನು ಸ್ಥಳೀಯ ಮಸೀದಿಯಿಂದ ತಂದು ಪೂಜಾ ಪೆಂಡಾಲಿನಲ್ಲಿದ್ದ ಹನುಮಾನ್ ವಿಗ್ರಹದ ತೊಡೆಯ ಮೇಲೆ ಇಟ್ಟಿದ್ದಾರೆ, ಇಟ್ಟ ಮೇಲೆ ಅವರಲ್ಲಿ ಒಬ್ಬ ಅದರ ಫೇಸ್ ಬುಕ್ ಲೈವ್ ಪ್ರಸಾರ ಸಹ ಮಾಡಿದ ಎಂದು ಸಿಸಿಟಿವಿ ವಿಡಿಯೊಗಳಿಂದ ತಿಳಿದು ಬಂದಿದೆ. ಅವರನ್ನು ಬಂಧಿಸಲಾಗಿದೆ. ಇದು ಅಲ್ಪಸಂಖ್ಯಾತ ಹಿಂದೂಗಳ ಮತ್ತು ಬಹುಸಂಖ್ಯಾತ ಮುಸ್ಲಿಮರ ಧಾರ್ಮಿಕ ಭಾವನೆಗಳನ್ನು ನೋಯಿಸಿ ಕೆರಳಿಸಲು ಎಂಬುದು ಸ್ವಯಂವಿದಿತವಾಗಿದೆ. ಫೇಸ್ ಬುಕ್ ಲೈವ್ ಪ್ರಸಾರದ ಜತೆ ಪ್ರಚೋದಕ ಧಾರ್ಮಿಕ ಅಪೀಲು ಸೇರಿ ಹಲವು ಕಡೆ ಹಿಂಸಾಚಾರ, ದಾಳಿಗಳು ಆರಂಭವಾದವು. ನಾನುವರ್ ದಿಘಿ ಅಲ್ಲದೆ ಹಿಂಸಾಚಾರ ನಡೆದ ಇತರ ಕಡೆ ಸಹ ಈ ಪಿತೂರಿಗಾರ ಗುಂಪಿನ ಸದಸ್ಯರು ಓಡಾಡಿದ್ದು ಸಿಸಿಟಿವಿಗಳಿಂದ ಪತ್ತೆಯಾಗಿದೆ.

ಜಗದ ಸುತ್ತ

ಮೂಲ: ನೀಲೊತ್ಪಲ ಬಸು

ಸಂಗ್ರಹಾನುವಾದ: ವಸಂತರಾಜ ಎನ್.ಕೆ

ಈ ಹಿಂಸಾಚಾರದ ವಿರುದ್ಧ ಬಾಂಗ್ಲಾದೇಶದ ಸರಕಾರ ಶೀಘ್ರ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿತು ಎಂದು ಭಾರತ ಸರಕಾರ ಸೇರಿದಂತೆ ಎಲ್ಲರೂ ಒಪ್ಪುತ್ತಾರೆ. ಆದರೆ ಹಿಂದೂ ಅಲ್ಪಸಂಖ್ಯಾತರನ್ನು ಗುರಿ ಮಾಡಿ ವಿವಿಧ ರೀತಿಯ ದಾಳಿಯ ಘಟನೆಗಳು ಸತತವಾಗಿ ನಡೆಯುತ್ತಲೇ ಇವೆ ಎನ್ನಲಾಗಿದೆ. ಜನವರಿ 2013ರಿಂದ ಸೆಪ್ಟೆಂಬರ್ 2021 ವರೆಗೆ ಇಂತಹ 3710 ಘಟನೆಗಳು ನಡೆದಿವೆ ಎಂದು ಸ್ಥಳೀಯ ಮಾನವ ಹಕ್ಕು ಸಂಘಟನೆಗಳು ಎತ್ತಿ ತೋರಿಸಿವೆ. ಆದರೆ ನಡೆಯುತ್ತಿರುವ ಹಿಂಸಾಚಾರದ ಪ್ರಮಾಣ, ತೀವ್ರತೆಗಳು ಬಲಪಂಥೀಯ ಶಕ್ತಿಗಳು, ವಿಶೇಷವಾಗಿ ಭಾರತದ ಬಲಪಂಥೀಯ ಶಕ್ತಿಗಳು, ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಚಾರ ಮಾಡುತ್ತಿರುವಂತೆ 'ನರಮೇಧ' ಖಂಡಿತ ಅಲ್ಲ ಎಂಬುದನ್ನು ಗಮನಿಸಬೇಕು.

ಹಿಂಸಾಚಾರದ ಮೂಲ ಎಲ್ಲಿದೆ?

ಈ ಹಿಂಸಾಚಾರದ ಮೂಲದಲ್ಲಿರುವುದು ಧಾರ್ಮಿಕ ಆಧಾರದ ಮೇಲೆ ಒಡೆದು ಆಳುವ, ಅದು ಸಾಧ್ಯವಾಗದಾಗ ಧಾರ್ಮಿಕ ಆಧಾರಿತ ದೇಶಗಳ ನಿರ್ಮಾಣದ ವಸಾಹತುಶಾಹಿಯ ಹುನ್ನಾರಗಳೇ. ಇದು ಈಗಿನ ಬಾಂಗ್ಲಾದೇಶ ಸೇರಿದಂತೆ ಪಾಕಿಸ್ತಾನದ ನಿರ್ಮಾಣಕ್ಕೆ ಕಾರಣವಾಯಿತು. ಆದರೆ ಧಾರ್ಮಿಕ ಆಧಾರಿತ ದೇಶದಲ್ಲಿ ಮಾನ್ಯತೆ ಪಡೆಯದ ಬಂಗಾಳಿ ಭಾಷಾ–ಸಾಂಸ್ಕೃತಿಕ ಅಸ್ಮಿತೆಗೆ ನಡೆದ ಹೋರಾಟ 1971ರಲ್ಲಿ ಅದರ ವಿಮೋಚನೆ ಮತ್ತು ಬಾಂಗ್ಲಾದೇಶದ ಸ್ಥಾಪನೆಯಲ್ಲಿ ಕೊನೆಗೊಂಡಿತು. ಸ್ವತಂತ್ರ ಬಾಂಗ್ಲಾದೇಶ ತನ್ನ ಸಂವಿಧಾನದಲ್ಲಿ ಸೆಕ್ಯುಲರ್ ಎಂದು ಘೋಷಿಸಿಕೊಂಡಿತು. ಇದು ಧಾರ್ಮಿಕ ಆಧಾರಿತ ದೇಶದ ಪರಿಕಲ್ಪನೆಯ ವೈಫಲ್ಯವನ್ನು ಎತ್ತಿ ತೋರಿಸಿತು. ಆದರೆ ಮುಸ್ಲಿಂ ಮೂಲಭೂತವಾದಿಗಳು, ಪಾಕಿಸ್ತಾನ ಪರಿಕಲ್ಪನೆಯ ಬೆಂಬಲಿಗರು ಮತ್ತು ಅವರ ಮಿಲಿಟರಿ ಸಮರ್ಥಕರು ಯಾವತ್ತೂ ಇದನ್ನು ಒಪ್ಪಿಕೊಳ್ಳಲೇ ಇಲ್ಲ. ಸ್ವತಂತ್ರ ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರಾಗಿದ್ದರೂ ಈ ವಿಭಾಗ ತನ್ನ ಹಠ ಸಾಧಿಸಲು ತನ್ನ ಪ್ರಯತ್ನವನ್ನು ಮುಂದುವರೆಸಿತು. ಇದೇ ಬಾಂಗ್ಲಾದೇಶದ ವಿಮೋಚನಾ ಹೋರಾಟದ ನಿರ್ವಿವಾದಿತ ನಾಯಕ ಮುಜಿಬುರ್ ರಹಮಾನ್ ಅವರ ಬರ್ಬರ ಹತ್ಯೆ ಮತ್ತು ಎರಡು ಮಿಲಿಟರಿ ಸರ್ವಾಧಿಕಾರಿಗಳ ಆಳ್ವಿಕೆಗೆ ಎಡೆ ಮಾಡಿತು. ಮಿಲಿಟರಿ ಸರ್ವಾಧಿಕಾರದ ಅವಧಿಯಲ್ಲಿ ಸಂವಿಧಾನದಲ್ಲಿ ಸೆಕ್ಯುಲರ್ ಎಂಬ ಪದವನ್ನು ತೆಗೆದು ಹಾಕಿ ಇಸ್ಲಾಂ ಅಧಿಕೃತ ಮತಧರ್ಮ ಎಂದು ಸೇರಿಸಲಾಯಿತು. ಪ್ರಾಯೋಗಿಕವಾಗಿ ಎಲ್ಲ ಮತಧರ್ಮಗಳ ಸ್ವಾತಂತ್ರ್ಯ ಮುಂದುವರೆದರೂ ಸೆಕ್ಯುಲರ್ ಮತ್ತು ಧಾರ್ಮಿಕ ಶಕ್ತಿಗಳ ನಡುವೆ ಸಂಘರ್ಷ ಮುಂದುವರೆದಿದೆ.

ಬಾಂಗ್ಲಾದೇಶದ ವಿಮೋಚನಾ ಹೋರಾಟದ ಮೌಲ್ಯಗಳು ಪ್ರಬಲವಾಗಿ ಜನಜನಿತವಾಗಿದ್ದರಿಂದ ಸಂವಿಧಾನದಲ್ಲಿ ಬದಲಾವಣೆಯಾದರೂ ರಾಜಕಾರಣದಲ್ಲಿ ಈ ಶಕ್ತಿಗಳಿಗೆ ಹೆಚ್ಚಿನ ಅವಕಾಶವಿರಲಿಲ್ಲ. ಜಮಾತೇ ಇಸ್ಲಾಮಿ, ರಜಾಕಾರ್ ಮುಂತಾದ ಈ ಶಕ್ತಿಗಳು ವಿಮೋಚನಾ ಹೋರಾಟವನ್ನು ವಿರೋಧಿಸಿ ಪಾಕಿಸ್ತಾನಿ ಮಿಲಿಟರಿ ದೌರ್ಜನ್ಯಗಳಲ್ಲಿ ಪಾಲುಗೊಂಡಿದ್ದರಿಂದಲೂ ಅವುಗಳಿಗೆ ಹೆಚ್ಚಿನ ಜನಬೆಂಬಲವಿರಲಿಲ್ಲ. ಆದರೆ ಬಾಂಗ್ಲಾದೇಶ ನ್ಯಾಶನಲ್ ಪಾರ್ಟಿ (ಬಿ.ಎನ್.ಪಿ) ಯ ಖಲೀದಾ ಜಿಯಾ ಜಮಾತೇ ಇಸ್ಲಾಮಿ ಯನ್ನು ಆಗಿನ ಆಳುವ ಕೂಟದಲ್ಲಿ ಸೇರಿಸಿಕೊಂಡ ನಂತರ, ಇವು ರಾಜಕಾರಣದ ಮುಖ್ಯಧಾರೆ ಪ್ರವೇಶಿಸಿ ಅಧಿಕಾರದಲ್ಲೂ ಪಾಲು ಪಡೆದಿದ್ದು, ಈ ಶಕ್ತಿಗಳಿಗೆ ಬಲ ಬಂದಿದೆ. ಆ ಮೇಲಿನ ಚುನಾವಣೆಯಲ್ಲಿ ಅವಾಮಿ ಲೀಗ್ ನಾಯಕತ್ವದ ಕೂಟವು ಅಧಿಕಾರಕ್ಕೆ ಬಂದು 'ಸೆಕ್ಯುಲರಿಸಂ"ನ್ನು ಮತ್ತೆ ಸಂವಿಧಾನದಲ್ಲಿ ಸೇರಿಸಲಾಯಿತು. ಆದರೆ ಇಸ್ಲಾಂ ಅಧಿಕೃತ ಮತಧರ್ಮ ಎಂಬುದು ಮುಂದುವರೆದಿದ್ದು ವಿಚಿತ್ರ ಪರಿಸ್ಥಿತಿ ಉಂಟಾಗಿದೆ. ಅವಾಮಿ ಲೀಗ್ ಅಧಿಕಾರಕ್ಕೆ ಬಂದರೂ ಈ ಧಾರ್ಮಿಕ ರಾಜಕಾರಣದ ಶಕ್ತಿಗಳನ್ನು ಪೂರ್ಣವಾಗಿ ನೆಲೆ ಇಲ್ಲದಂತೆ ಮಾಡುವುದು ಸಾಧ್ಯವಾಗಲಿಲ್ಲ.

ಹಿಂಸಾಚಾರ ಯಾರ ಪ್ರಯೋಜನಕ್ಕಾಗಿ?

ಯು.ಎಸ್–ಸೌದಿ ಅರೇಬಿಯ ಸರಕಾರಗಳ ಹಣಕಾಸು–ಸಂಘಟನಾತ್ಮಕ ಕುಮ್ಮಕ್ಕಿನಿಂದಾಗಿ ಜಾಗತಿಕವಾಗಿ ಇಸ್ಲಾಮಿಕ್ ಮೂಲಭೂತವಾದದ ಹರಡುವಿಕೆ ಬಾಂಗ್ಲಾದೇಶವನ್ನೂ ತಟ್ಟದೆ ಬಿಟ್ಟಿಲ್ಲ. ಈ ಸನ್ನಿವೇಶದಲ್ಲಿ ಜೆ.ಎಂ.ಬಿ (ಜಮಾತೇ ಮುಜಹಿದ್ದೀನ್ ಬಾಂಗ್ಲಾದೇಶ) ಎಂಬ ಉಗ್ರಗಾಮಿ ಸಂಘಟನೆ ತಲೆಯೆತ್ತಿದೆ. ಅದು 2005 ರಲ್ಲಿ 63 ಜಿಲ್ಲೆಗಳಲ್ಲಿ 300 ಸ್ಥಳಗಳಲ್ಲಿ ಒಂದೇ ಸಮಯದಲ್ಲಿ ಸ್ಫೋಟಗಳನ್ನು ನಡೆಸಿ ತನ್ನ ಇರವನ್ನು ಸಾರಿತು. 1996–2001 ಅವಧಿಯಲ್ಲಿ ಅಫ್ಘಾನಿಸ್ತಾನದಿಂದ



ವಾಪಸು ಬಂದ ಮುಜಾಹಿದ್ ಗಳು ಸ್ಥಾಪಿಸಿದ ಹೂಜಿ ಎಂಬ ಉಗ್ರಗಾಮಿ ಸಂಘಟನೆ ಶೇಖ್ ಹಸೀನಾ ಅವರ ಕೊಲೆ ಪ್ರಯತ್ನ ಮಾಡಿತು. 2008ರ ನಂತರ 'ಇಸ್ಲಾಮಿಕ್ ಸ್ಟೇಟ್' ಉಗ್ರಗಾಮಿ ಸಂಘಟನೆಯಿಂದ ಸ್ಫೂರ್ತಿ ಪಡೆದ ಹಲವು ಗುಂಪುಗಳು ಹುಟ್ಟಿಕೊಂಡಿವೆ. ಇವೆಲ್ಲ ಸಂಘಟನೆಗಳು ಸೆಕ್ಯುಲರ್ ಉದಾರವಾದಿ ಚಿಂತಕರು, ಲೇಖಕರು, ಕಲಾವಿದರು, ಬುದ್ಧಿಜೀವಿಗಳು, ಕೆಲವು ಧಾರ್ಮಿಕ ಮುಖಂಡರು, ಶಿಯಾ ಪಂಥೀಯರ ಮೇಲೆ ದಾಳಿ, ಮರಣಾಂತಿಕ ಹಲ್ಲೆಗಳನ್ನು ಮಾಡಿವೆ.

ಈ ಸರಣಿ ದಾಳಿ ಮತ್ತು ಹಿಂಸಾಚಾರದ ಉದ್ದೇಶ ಈಗ ದುರ್ಬಲಗೊಂಡಿರುವ ಬಲಪಂಥೀಯ ರಾಜಕೀಯ ಶಕ್ತಿಗಳ ಚುನಾವಣಾ ಭವಿಷ್ಯ ಉತ್ತಮ ಪಡಿಸಲು ಎಂಬುದು ಸ್ಪಷ್ಟ. ವಿಮೋಚನಾ ಹೋರಾಟವನ್ನು ವಿರೋಧಿಸಿದ ಮತ್ತು ಪಾಕಿಸ್ತಾನಿ ಮಿಲಿಟರಿಯ ಯುದ್ಧಕಾಲದ ದೌರ್ಜನ್ಯಗಳಲ್ಲಿ ಸಾಥ್ ಕೊಟ್ಟ ಜಮಾತೇ ಇಸ್ಲಾಮಿ, ರಜಾಕಾರ್ ಮುಂತಾದ ಪಡೆಗಳ ನಾಯಕರು ಕಾರ್ಯಕರ್ತರನ್ನು ಶಿಕ್ಷಿಸುವ ಹೋರಾಟವನ್ನು, ಪ್ರಜಾಸತ್ತಾತ್ಮಕ ಚಳುವಳಿ ಮತ್ತು ಸರಕಾರ ಸುಪ್ರೀಂ ಕೋರ್ಟಿನವರೆಗೆ ಹೋಗಿ ಅದರ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ದಿತ್ತು. ಇದರಿಂದಾಗಿ ಈ ಸಂಘಟನೆಗಳ ಹಲವು ಹಿರಿಯ ನಾಯಕರು ಮತ್ತು ಪ್ರಮುಖ ಕಾರ್ಯಕರ್ತರು ಮರಣದಂಡನೆ ಎದುರಿಸುತ್ತಿದ್ದಾರೆ. ಇದರಿಂದಾಗಿ ಅದರ ಉಳಿದ ಕಾರ್ಯಕರ್ತರಲ್ಲಿ ಆತಂಕ, ಹಿಂಜರಿಕೆ ಮೂಡಿದೆ. ಸಾಲದೆಂಬಂತೆ ಶೇಖ್ ಹಸೀನಾ ಸರಕಾರದ ಆಡಳಿತದ ಕಾಲದಲ್ಲಿ ಸೀಮಿತವಾದರೂ ಆರ್ಥಿಕ ಬೆಳವಣಿಗೆ, ಮಾನವ ಅಭಿವೃದ್ಧಿಯ ಸೂಚಕಗಳಲ್ಲಿ ದೇಶ ಗಮನಾರ್ಹ ಪ್ರಗತಿ ಸಾಧಿಸಿದೆ. ಇದು ಬಲಪಂಥೀಯ ಮತ್ತು ಉಗ್ರಗಾಮಿ ಸಂಘಟನೆಗಳಲ್ಲಿ ಏನಾದರೂ ಮಾಡಬೇಕೆಂಬ ಹತಾಶೆ ಮೂಡಿಸಿದೆ. ಈ ದಾಳಿಗಳ ಮೂಲಕ ತಮ್ಮ ಇರವನ್ನು ಮತ್ತೆ ಘೋಷಿಸುವುದು ಮತ್ತು ರಾಜಕಾರಣದ ಸಂಕಥನವನ್ನು ಮತ್ತೆ ಧಾರ್ಮಿಕ ಪ್ರಚೋದನೆಗಳತ್ತ ತಿರುಗಿಸಲು ಪ್ರಯತ್ನಿಸುವುದು ಅವಕ್ಕೆ ಅನಿವಾರ್ಯವಾಗಿದೆ.

ಮುಂದೇನು?

ಯಾವ ಉಗ್ರಗಾಮಿ ಸಂಘಟನೆ ಈ ದಾಳಿಗಳನ್ನು ಎಸಗಿತು ಎಂದು ಇನ್ನೂ ತಿಳಿದು ಬಂದಿಲ್ಲ. ಬಂಗಾಳಿ ಹಿಂದುಗಳು ಸಾಮಾನ್ಯವಾಗಿ ರಾಮ, ಸೀತೆ, ಹನುಮಾನ್ ಮೂರ್ತಿಗಳ ಪೂಜೆ ಮಾಡುವುದಿಲ್ಲ. ಅದರಲ್ಲೂ ದುರ್ಗಾಪೂಜೆ ಪೆಂಡಾಲುಗಳಲ್ಲಂತೂ ಖಂಡಿತ ಇಡುವುದಿಲ್ಲ. ಇದು ಹಿಂದುತ್ವದ ಪ್ರತೀಕವಾದ ಆಚರಣೆ. ಆದರೆ ಕೊಮಿಲ್ಲ ಪೆಂಡಾಲಿನಲ್ಲಿ ಈ ರಾಮ, ಸೀತೆ, ಹನುಮಾನ್ ಮೂರ್ತಿಗಳನ್ನು 'ಅಪವಿತ್ರ' ಗೊಳಿಸಿರುವುದು ಮತ್ತು ಅದೇ ನೆಪದಲ್ಲಿ ಹಿಂಸಾಚಾರ ನಡೆದಿರುವುದು, ಪಶ್ಚಿಮ ಬಂಗಾಳದಲ್ಲಿ ಭಜರಂಗ ದಳ ಮತ್ತಿತರ ಸಂಘಪರಿವಾರದ ಸಂಘಟನೆಗಳು ಈ ವಿಷಯದಲ್ಲಿ (ಬಾಂಗ್ಲಾದೇಶದಲ್ಲಿ ಹಿಂದೂಗಳ 'ನರಮೇಧ' ನಡೆಯುತ್ತಿದೆ ಎಂಬಂತಹ) ಭಾರೀ ಅಪಪ್ರಚಾರ ಮಾಡುತ್ತಿರುವುದು, ಹಲವು ನಿಗೂಢ ಶಕ್ತಿಗಳ ಕೂಟ ಈ ಹಿಂಸಾಚಾರದ ಹಿಂದಿವೆ ಎಂಬ ಅನುಮಾನ ಹುಟ್ಟಿಸುತ್ತವೆ.

ಈಗಾಗಲೇ ಹೇಳಿದ ಹಾಗೆ ಅವಾಮಿ ಲೀಗ್ ಸರಕಾರ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದೆ. ಈ ಹಿಂಸಾಚಾರದಲ್ಲಿ ತೊಡಗಿದ್ದ ನೂರಾರು ಪುಂಡರನ್ನು ಬಂಧಿಸಲಾಗಿದೆ. ಈ ವ್ಯಾಪಕ ಪಿತೂರಿ ಹಿಂದಿರುವ ಶಕ್ತಿಗಳು ಸಂಘಟನೆಗಳು ಯಾವುದು ಎಂಬುದರ ಬಗ್ಗೆ ತನಿಖೆ ನಡೆದಿದೆ. ಹಿಂದೂ ಅಲ್ಪ ಸಂಖ್ಯಾತರಿಗೆ ಸುರಕ್ಷೆಯ ಭಾವ ಕೊಡುವ ಪ್ರಯತ್ನ ಮಾಡುತ್ತಿದೆ. ಆದರೆ ಬಾಂಗ್ಲಾದೇಶದಲ್ಲಿ ಸೆಕ್ಯುಲರಿಸಂ ನ ಎಳೆಗಳು ದುರ್ಬಲವಾಗಿವೆ. ಇಸ್ಲಾಮಿಕ್ ಮೂಲಭೂತವಾದದ ದಾಳಿ ತಾಳಿಕೊಂಡು ಸೆಕ್ಯುಲರಿಸಂನ್ನು ರಕ್ಷಿಸಿ ಮುನ್ನಡೆಯಬೇಕಾದರೆ ಸರಕಾರ, ಶಾಂತಿಯುತ ಪ್ರಗತಿಯಲ್ಲಿ ನಂಬಿಕೆಯಿರುವ ಶಕ್ತಿಗಳು ಮತ್ತು ಜನತೆ ಹಲವು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಐದು ದಶಕಗಳ ನಂತರ ವಿಮೋಚನಾ ಸಮರದ ನೆನಪು ಮಾಸುತ್ತಿರುವಂತೆ, ಈ ನೆನಪುಗಳೇ ಇಲ್ಲದ ಹೊಸ ಪೀಳಿಗೆ ಮೂಡುತ್ತಿರುವಾಗ ಇದಕ್ಕೆ ಹಲವು ಹೊಸ ಕ್ರಮಗಳ ಅಗತ್ಯವಿದೆ. ಈ ಹಿಂಸಾಚಾರದ ದಾಳಿಗಳು ಇದಕ್ಕೆ ಎಚ್ಚರಿಕೆಯ ಗಂಟೆಯಾಗಿವೆ.

ಎಡ ಪ್ರಗತಿಪರ ಶಕ್ತಿಗಳು ಈ ದಾಳಿಯನ್ನು ಅರ್ಥ ಮಾಡಿಕೊಂಡು ಕಾರ್ಯಪ್ರವೃತ್ತವಾಗಿವೆ ಎಂಬ ವರದಿಗಳು ಬರುತ್ತಿವೆ. ದೇಶದ ಧಾರ್ಮಿಕ ಸೌಹಾರ್ದತೆ, ಉದಾರವಾದಿ ಸೆಕ್ಯುಲರ್ ಪರಂಪರೆಗಳನ್ನು ಎತ್ತಿ ಹಿಡಿಯುವ ಸಾಂಸ್ಕೃತಿಕ ಚಳುವಳಿ, ಯುವ ನಿರುದ್ಯೋಗ (ಇವರನ್ನೆ ಯಾವುದೇ ಧಾರ್ಮಿಕ ಮೂಲಭೂತವಾದ ದಾಳವಾಗಿ ಬಳಸುವುದು) ಕ್ಕೆ ಪರಿಹಾರ? ಇವೆರಡನ್ನೂ ಒಟ್ಟಿಗೆ ತೆಗೆದುಕೊಂಡು ಹೋಗಬೇಕಿದೆ. ಅವಾಮಿ ಲೀಗ್ ಸರಕಾರದಲ್ಲಿ ಈ ಕುರಿತು ಇನ್ನೂ ಸಾಕಷ್ಟು ಸ್ಪಷ್ಟತೆಯಿಲ್ಲ. ವಿಮೋಚನಾ ಸಮರದ ಮೌಲ್ಯಗಳು ಇನ್ನೂ ಬಲವಾಗಿವೆ ಎಂದು ಅದು ನಂಬಿದಂತಿದೆ. ಹಾಗಾಗಿ ಅದನ್ನು ಅರ್ಥ ಮಾಡಿಸಲು ಎಡ ಶಕ್ತಿಗಳು ಒತ್ತಡ ಹೇರುತ್ತಿವೆ.

ಎರಡು ತಪ್ಪು ಕಲ್ಪನೆಗಳು

ಪುಟ 13 ರಿಂದ

ಈ ರೀತಿಯಲ್ಲಿ ಎಂಎಸ್‌ಪಿ ಪದ್ಧತಿಯು, ಎಫ್‌ಸಿಐನ ದಾಸ್ತಾನಿನ ಮೇಲೆ ಹೆಚ್ಚು ಪರಿಣಾಮವನ್ನು ಉಂಟುಮಾಡದ ರೀತಿಯಲ್ಲಿ, ದೇಶದಾದ್ಯಂತ ರೈತರಿಗೆ ಒಂದು ಖಾತರಿಯಾದ ವರಮಾನ ಸಿಗುವಂತೆ ಮಾಡುತ್ತದೆ. ಮತ್ತು, ಎಂಎಸ್‌ಪಿಯನ್ನು ಏರಿಸಿದಾಗ, ಎಫ್‌ಸಿಐನ ದಾಸ್ತಾನಿನ ಮೇಲೆ ಹೆಚ್ಚು ಪರಿಣಾಮವನ್ನು ಉಂಟುಮಾಡದ ರೀತಿಯಲ್ಲಿ ರೈತರಿಗೆ ಒಂದು ಖಾತರಿಯಾದ ವರಮಾನವೂ ಸಿಗುತ್ತದೆ. ಹೆಚ್ಚುವರಿ ಧಾನ್ಯಗಳು ಇರುವ ಮೂರು ರಾಜ್ಯಗಳನ್ನು ಬಿಟ್ಟು ಇತರ ರಾಜ್ಯಗಳಲ್ಲಿ ಕಾರ್ಯನಿರ್ವಹಿಸುವ ಬಗ್ಗೆ ಎಫ್‌ಸಿಐ ಆಸಕ್ತಿ ಹೊಂದಿಲ್ಲ. ಎಫ್‌ಸಿಐನ ಈ ಲೋಪದಿಂದಾಗಿ ಕೆಲವು ರಾಜ್ಯ ಸರ್ಕಾರಗಳು ತಮ್ಮದೇ ಆದ ಏರ್ಪಾಟುಗಳನ್ನು ಮಾಡಿಕೊಂಡಿವೆ. ರಾಜ್ಯ ಸರ್ಕಾರಗಳ ಈ ಏರ್ಪಾಟುಗಳು ಹೆಚ್ಚು ಮಟ್ಟದ ಸಂಗ್ರಹಣೆಯನ್ನು ಕೈಗೊಳ್ಳದಿದ್ದರೂ ಸಹ, ರೈತರಿಗೆ ಖಾತರಿಯಾದ ವರಮಾನ ಸಿಗುವಂತೆ ನೋಡಿಕೊಂಡಿವೆ. ಆದ್ದರಿಂದ, ಎಫ್‌ಸಿಐನ ಕಾರ್ಯಾಚರಣೆಗಳನ್ನು ಕೇವಲ ಮೂರು ರಾಜ್ಯಗಳಿಗೆ ಸೀಮಿತಗೊಳಿಸದೆ, ಎಲ್ಲ ರಾಜ್ಯಗಳಿಗೂ ವಿಸ್ತರಿಸುವುದು ಬಹಳ ಮುಖ್ಯವಾಗುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ರೈತ ಕೃಷಿಯ ಮೇಲೆ ಕಾರ್ಪೊರೇಟ್ ಅತಿಕ್ರಮಣವು ರೈತರ ಆದಾಯವನ್ನು ಕಸಿಯುವ ಕಾರಣದಿಂದಾಗಿ ಅದೊಂದು ರೈತರು ಮತ್ತು ಕಾರ್ಪೊರೇಟ್‌ಗಳ ನಡುವಿನ ದ್ವಿಪಕ್ಷೀಯ ಸಮಸ್ಯೆ ಎಂಬ ಪ್ರತಿಪಾದನೆ ಮತ್ತು ಸಂದರ್ಭಗಳಿಗೆ ಅನುಗುಣವಾಗಿ ಎಂಎಸ್‌ಪಿಯಲ್ಲಿ ಸೂಕ್ತ ಏರಿಕೆ ಮಾಡಿ ಅದನ್ನು ಇಡೀ ದೇಶಕ್ಕೆ ವಿಸ್ತರಿಸುವ ಕ್ರಮವು ಕಾರ್ಯಸಾಧುವಲ್ಲ ಎಂಬ ಪ್ರತಿಪಾದನೆ, ಈ ಎರಡೂ ಪ್ರತಿಪಾದನೆಗಳೂ ಅಸಮರ್ಥನೀಯವಾಗಿವೆ. ಇಂತಹ ಪ್ರತಿಪಾದನೆಗಳು ರೈತ ಚಳುವಳಿಯನ್ನು ದುರ್ಬಲಗೊಳಿಸುತ್ತವೆ. ಇವಕ್ಕೆ ಅವಕಾಶ ನೀಡಬಾರದು.

JANASHAKTHI KANNADA VARA PATRIKE NOVEMBER 8-14, 2021 Price: Rs. 10/- Date of Publication: 5 NOVEMBER 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21



ದೀರ್ಘ ಕಾಲ ಕಾಡುವ 'ಜೈ ಭೀಮ್'

ಹೆಚ್.ಆರ್. ನವೀನ್ ಕುಮಾರ್

'ಜೈ ಭೀಮ್' ಇದು ಕೇವಲ ಒಂದು ಸಿನಿಮಾ ಮಾತ್ರವಲ್ಲ, ಬದಲಾಗಿ ಆದಿವಾಸಿಗಳ ಕರಾಳ ಬದುಕಿನ ಚಿತ್ರಣ. ಇದು ಕಥೆಯಲ್ಲ, ನೈಜ ಘಟನೆ ಆಧಾರಿತ ಚಿತ್ರ.

ಸೂಕ್ಷ್ಮ ಸಂವೇದನೆಯ ನಟ ಸೂರ್ಯ ಒಬ್ಬ ಮಾರ್ಕ್ಸ್‌ವಾದಿ ವಕೀಲನ ಪಾತ್ರ ವಹಿಸಿದ್ದಾನೆ. ತನ್ನ ಮಾರ್ಕ್ಸ್‌ವಾದಿ ಹೋರಾಟ ಮತ್ತು ಅಂಬೇಡ್ಕರ್ ರವರ ಕಾನೂನಿನ ಬಲವಾದ ಅಸ್ತ್ರ ಹಾಗೂ ಪೆರಿಯಾರ್ ರವರ ಸ್ವಾಬಿಮಾನವನ್ನು ಮೈಗೂಡಿಸಿಕೊಂಡಿದ್ದಾನೆ.

ಅನ್ಯಾಯ ಮತ್ತು ಶೋಷಣೆಗೆ ಒಳಗಾಗಿರುವ ಸಮಾಜ ಮತ್ತು ವ್ಯವಸ್ಥೆ ಕಡೆಗಣಿಸುವುದು ಮಾತ್ರವಲ್ಲ, ಅತ್ಯಂತ ತುಚ್ಚವಾಗಿ ಕಾಣುವ ಆದಿವಾಸಿಗರ ಪರವಾಗಿ ಬೀದಿ ಹೋರಾಟ ಮತ್ತು ಕಾನೂನಿನ ಅಸ್ತ್ರವನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಾನೆ. ಪೊಲೀಸ್ ವ್ಯವಸ್ಥೆ, ಸಮಾಜ ಮತ್ತು ಆಳುವ ವರ್ಗದ ಮನಸ್ಥಿತಿಗಳನ್ನು ಬೆತ್ತಲುಗೊಳಿಸುವ ಪ್ರಯತ್ನವನ್ನು ನಡೆಸುತ್ತಾನೆ.

ಇಡೀ ಸಿನಿಮಾ ಹಿರೋ ಹಿಂದೆ ಗಿರಿಕಿ ಹೊಡೆಯುವುದರ ಬದಲು 2 ಗಂಟೆ 44 ನಿಮಿಷಗಳು ಆದಿವಾಸಿಗಳ ಬದುಕು ಮತ್ತು ಪೋಲಿಸ್ ವ್ಯವಸ್ಥೆಯ ಕ್ರೌರ್ಯವನ್ನು ಮತ್ತು ನ್ಯಾಯಾಲಯ ಪ್ರಕ್ರಿಯೆಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದೆ. ಯಾರ ಮುಖಗಳಲ್ಲೂ ನಟನೆಯ ಛಾಯೆ ಡಾಳಾಗಿ ಕಾಣಿಸದೇ ಪ್ರತಿಯೊಬ್ಬರೂ ಪಾತ್ರಗಳಿಗೆ ಜೀವ ತುಂಬಿದ್ದಾರೆ.

1993 ರಲ್ಲಿ ನ್ಯಾಯಮೂರ್ತಿ ಕೆ.ಚಂದ್ರುರವರು ಇರುಳರ್ ಬುಡಕಟ್ಟುಗಳ ಬಗ್ಗೆ ನಡೆಸಿದ ಹೋರಾಟದ ಸತ್ಯ ಘಟನೆಯನ್ನು ಆಧರಿಸಿ ಟಿ.ಜೆ. ಜ್ಞಾನವೇಲ್ "ಜೈ ಭೀಮ್" ಸಿನಿಮಾವನ್ನು ನಿರ್ದೇಶಿಸಿದ್ದಾರೆ. ಚಿತ್ರದಲ್ಲಿ ಸೂರ್ಯನ ಜೊತೆ ಪ್ರಕಾಶ್ ರಾಜ್, ರಜಿಶಾ ವಿಜಯನ್, ಲಿಜೊಮೋಲ್ ಜೋಶ್, ರಮೇಶ್ ಮತ್ತು ಮಣಿಕಂದನ್ ರವರು ಇದ್ದಾರೆ. ರಾಜಾ ಕಣ್ಣು ಮತ್ತು ಸಿಂಗಾನಿ ಇಡೀ ಸಿನಿಮಾದಲ್ಲಿ ಕಾಡುತ್ತಾರೆ.

ಜಾತಿಯ ಕಾರಣಕ್ಕಾಗಿ ತನ್ನದಲ್ಲದ ತಪ್ಪಿಗೆ ಪೋಲೀಸರ ಕೇಸುಗಳಿಗೆ ಆಯುಧಗಳಾಗುವ ಕೆಳ ಜಾತಿಗಳ ಜನ ಜೈಲು ಶಿಕ್ಷೆ ಅನುಭವಿಸಿ ಹೊರಬಂದರೂ, ಮತ್ತೆ ಪೊಲೀಸ್ ವ್ಯವಸ್ಥೆ ಅವರನ್ನ ತಮ್ಮ ಕುತಂತ್ರಗಳಿಗೆ ಹೇಗೆ ಬಲಿಕೊಡುತ್ತದೆ ಎನ್ನುವ ದೃಶ್ಯದ ಮೂಲಕ ಸಿನಿಮಾ ಪ್ರಾರಂಭವಾಗುತ್ತದೆ. ಅಂತಿಮವಾಗಿ ನಾಯಕ ವಕೀಲ ಚಂದ್ರು ತನ್ನ ಮನೆಯಲ್ಲಿ ಪೇಪರ್ ಓದುತ್ತಾ ಕುಳಿತಿರುವಾಗ ಅವನ ಪಕ್ಕದ ಕುರ್ಚಿಯಲ್ಲಿ ಇರುಳರ್ ಆದಿವಾಸಿ ಬುಡಕಟ್ಟು ಜನರಾದ ಸಿಂಗಾನಿ ಮತ್ತು ರಾಜಾ ಕಣ್ಣನ್ ಮಗಳು ಕಾಲಮೇಲೆ ಕಾಲು ಹಾಕಿಕೊಂಡು ಕೈಯಲ್ಲಿ ಪತ್ರಿಕೆಯನ್ನು ಹಿಡಿದುಕೊಂಡು ಓದುವ ದೃಶ್ಯದ ಮೂಲಕ ಮುಕ್ತಾಯವಾಗುತ್ತದೆ. ಅವರ ಮುಂದಿನ ಟೇಬಲ್ ಮೇಲೆ ಮಹಾನ್ ಮಾನವತಾವಾದಿ, ಮನುಕುಲದ ವಿಮೋಚನೆಗೆಂದು ದುಡಿದ, ಶೋಷಣಾ ಮುಕ್ತ ಸುಂದರ ಸಾಮಾಜಿಕ ವ್ಯವಸ್ಥೆಯನ್ನು ಕ್ರಾಂತಿ ಮೂಲಕ ರಷ್ಯಾದಲ್ಲಿ ಸಾಧಿಸಿ ತೋರಿಸಿದ ಕಾಮ್ರೇಡ್ ಲೆನಿನ್ ರವರ ಪ್ರತಿಮೆಯು ನಮಗೆ ಗೋಚರಿಸುತ್ತದೆ.

ಇಡೀ ಸಿನಿಮಾದಲ್ಲಿ ಶಿಕ್ಷಣದ ಮಹತ್ವ ಮತ್ತು ಯಾರ ಅರಿವಿಗೂ ಬಾರದಂತೆ ಆದಿವಾಸಿಗಳಿಗೆ ಶಿಕ್ಷಣ ನೀಡುವ ಟೀಚರ್ ಗಮನ ಸೆಳೆಯುವ ಪಾತ್ರವಾಗಿದೆ. ಇನ್ನೂ ಇಡೀ ಸಿನಿಮಾದ ಉದ್ದಕ್ಕೂ ಬರುವ ಸಂಭಾಷಣೆ, ಚಿತ್ರೀಕರಣ ಎಲ್ಲವನ್ನೂ ಸಿನಿಮಾ ನೋಡಿಯೇ ಅನುಭವಿಸಬೇಕು.



ಸೈರಾಟ್, ಅಸುರನ್, ಫಂಡ್ರಿ ತರದ ಸಿನಿಮಾಗಳ ರೀತಿಯಲ್ಲಿಯೇ "ಜೈ ಭೀಮ್" ಬಹಳ ದೀರ್ಘ ಕಾಲ ಕಾಡುತ್ತದೆ. ಸಿನಿಮಾ ಮಾರ್ಕ್ಸ್, ಅಂಬೇಡ್ಕರ್, ಪೆರಿಯಾರ್ ಅವರುಗಳ ಚಿಂತನೆಗಳನ್ನ ಸಮಕಾಲೀನಗೊಳಿಸಿಕೊಂಡು, ಎಲ್ಲ ಚಿಂತನೆಯ ಅಸ್ತ್ರಗಳನ್ನು ಪರಿಣಾಮಕಾರಿಯಾಗಿ ಬಳಸಿ, ದುರುಳ ಶೋಷಕ ವ್ಯವಸ್ಥೆಯ ವಿರುದ್ದ ಎಲ್ಲರೂ ಒಟ್ಟಾಗಿ ಹೋರಾಟ ಮಾಡುವ ಅನಿವಾರ್ಯತೆಯನ್ನು ಸೂಚಿಸುತ್ತದೆ.

ಸಿಪಿಐ(ಎಂ) ಕುಂದಾಪುರ ವಲಯ ಸಮ್ಮೇಳನ



ಲಾಭಕೋರ ಹಣಕಾಸು ಬಂಡವಾಳ ಮತ್ತು ಬಂಡವಾಳಶಾಹಿಯ ವಿರುದ್ಧದ ಸಮರವನ್ನು ಇನ್ನೂ ತೀವ್ರಗೊಳಿಸಲು ಆ ಮುಖಾಂತರ ಸಾಮಾಜಿಕ ವ್ಯವಸ್ಥೆಯ ಬದಲಾವಣೆಗಾಗಿ ಮತ್ತಷ್ಟು ತನ್ನನ್ನು ಹೇಗೆ ಸಮರ್ಪಿಸಿಕೊಳ್ಳಬೇಕೆಂದೂ ಅದಕ್ಕೆ ಬೇಕಾಗಿರುವ ಸಂಘಟನೆಯನ್ನು ಮತ್ತಷ್ಟು ಬಲಪಡಿಸಲು ಈ ಸಮ್ಮೇಳನವು ಚರ್ಚಿಸಬೇಕು ಎಂದು ಸಿಪಿಐ(ಎಂ) ಪಕ್ಷದ ರಾಜ್ಯ ಮುಖಂಡರಾದ ಕೆ. ಶಂಕರ್ ಕುಂದಾಪುರ ವಲಯ ಸಮ್ಮೇಳನದಲ್ಲಿ ಕರೆ ನೀಡಿದರು. ಕುಂದಾಪುರ ಕಾರ್ಮಿಕ ಭವನದ ಸಭಾಂಗಣದಲ್ಲಿ ಜರಗಿದ ಸಿಪಿಐ(ಎಂ) ಕುಂದಾಪುರ ವಲಯದ ಮೂರನೇ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪಕ್ಷದ ಹಿರಿಯ ಮುಖಂಡ ಯು. ದಾಸ ಭಂಡಾರಿ ಧ್ವಜಾರೋಹಣ ನೆರವೇರಿಸಿದರು. ರವಿ. ವಿ.ಎಂ. ಶ್ರದ್ಧಾಂಜಲಿ ಠರಾವು ಮಂಡಿಸಿದರು. ಹಿರಿಯ ನ್ಯಾಯವಾದಿ ಶಿರಿಯಾರ ಮುದ್ದಣ್ಣ ಶೆಟ್ಟಿ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿ, ಶುಭಾಶಯ ಕೋರಿದರು. ಬೈಂದೂರು ವಲಯ ಕಾರ್ಯದರ್ಶಿ ಎಚ್. ನರಸಿಂಹ ಪ್ರಾಸ್ತಾವನೆ ಭಾಷಣ ಮಾಡಿದರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಿ. ನರಸಿಂಹ ವಹಿಸಿದ್ದರು. ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಹಾಬಲ ವಡೇರ ಹೊಬಳಿ, ಸುರೇಶ್ ಕಲ್ಲಾಗರ್, ವೆಂಕಟೇಶ್ ಕೋಣಿ ಉಪಸ್ಥಿತರಿದ್ದರು.



ಸಮ್ಮೇಳನದ ಪ್ರತಿನಿಧಿ ಅಧಿವೇಶನದಲ್ಲಿ ಕಾರ್ಯದರ್ಶಿ ಎಚ್. ನರಸಿಂಹ ಚಟುವಟಿಕೆ ವರದಿ ಮಂಡಿಸಿದರು. ವರದಿಯ ಮೇಲೆ ಚರ್ಚೆ ನಡೆದು ವರದಿಯನ್ನು ಅಂಗೀಕರಿಸಲಾಯಿತು. ಕೇಂದ್ರ ಮತ್ತು ರಾಜ್ಯ ಸರಕಾರದ ರೈತ, ಕಾರ್ಮಿಕ ವಿರೋಧಿ ನೀತಿ ವಿರುದ್ಧ, ಬೆಲೆ ಏರಿಕೆ ವಿರುದ್ದ, ಕರಾವಳಿ ನಿಯಂತ್ರಣ ವಲಯ ಕಠಿಣ ನಿಯಯಮಾವಳಿ ಸಡಿಲಗೊಳಿಸಲು, ಕುಂದಾಪುರ ಬೊಬ್ಬರ್ಯನ ಕಟ್ಟೆ ಬಳಿ ಹೆದ್ದಾರಿ ರಸ್ತೆ ದಾಟಲವಕಾಶಕ್ಕೆ ಒತ್ತಾಯಿಸಿ, ಪುರಸಭೆ ವ್ಯಾಪ್ತಿ ರಸ್ತೆ ದುರಸ್ತಿ, ರಿಂಗ್ ರೋಡ್ ಕಾಮಗಾರಿ ಇತ್ಯಾದಿ ಬೇಡಿಕೆಗಳ ಬಗ್ಗೆ ಸಮ್ಮೇಳನದಲ್ಲಿ ನಿರ್ಣಯಗಳನ್ನು ಮಂಡಿಸಿತು. ಸಿಪಿಐ(ಎಂ) ಜಿಲ್ಲಾ ಮುಖಂಡರಾದ ನಾಗರತ್ನ ನಾಡ, ರಾಜೇಶ್ ವಡೇರ ಹೋಬಳಿ ಸಂತೋಷ ಹೆಮ್ಮಾಡಿ ಇದ್ದರು. ಕಾಂ. ಎಚ್. ನರಸಿಂಹ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.





ಸಿಪಿಐ(ಎಂ) ಬಾಗೇಪಲ್ಲಿ ತಾಲ್ಲೂಕು 11 ನೇ ಸಮ್ಮೇಳನವನ್ನು ಪಕ್ಷದ ಪೊಲೀಟ್ ಬ್ಯೂರೋ ಸದಸ್ಯರಾದ ಕಾಮ್ರೇಡ್ ಬಿ.ವಿ. ರಾಘವಲು ಉದ್ಘಾಟಿಸಿದರು. ಪಕ್ಷದ ರಾಜ್ಯ ಕಾರ್ಯದರ್ಶಿ ಯು. ಬಸವರಾಜ್ ಉಪಸ್ಥಿತರಿದ್ದರು. ಬಾಗೇಪಲ್ಲಿ ತಾಲ್ಲೂಕು ಕಾರ್ಯದರ್ಶಿಯಾಗಿ ಕಾಂ. ಮಹಮ್ಮದ್ ಅಕ್ರಂ ಪುನರ್ ಆಯ್ಕೆಯಾಗಿದ್ದಾರೆ.

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**